# ಪ್ರಸಾದ

ಸಂಪುಟ 24 ಸಂಚಿಕೆ 6 ನವೆಂಬರ್-ಡಿಸೆಂಬರ್ 2009

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಎಸ್. ನಂಜುಂಡಯ್ಯ
ಶ್ರೀ ಕೆ.ಸಿ. ಶಿವಪ್ಪ
ಡಾ. ಬಿ.ನಂ. ಚಂದ್ರಯ್ಯ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಪದ್ಮಾಶೇಖರ್
ಡಾ. ಎನ್. ಎಸ್. ತಾರಾನಾಥ
ಶ್ರೀಮತಿ ಎಚ್.ಟಿ. ಶೈಲಜಾ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಲೇಖಕರವು

# ಪರಿವಿಡಿ

ಸಂಪಾದಕೀಯ 5

ಗುರುವಾಣಿ 7

'ಕೈವಲ್ಯ ಪದ್ಧತಿ': ನಿಜಗುಣರ ಪರತತ್ತ್ವ ಚಿಂತಾಮಣಿ 9
**ಕೆ.ಸಿ.ಶಿವಪ್ಪ**

ಬಸವಣ್ಣ ಹಾಗೂ ಜ್ಯೋತಿಬಾ ಫುಲೆ 28
**ಡಾ. ವ್ಹಿ.ಜಿ. ಪೂಜಾರ**

ಎರಡು ಚಿಂತನೆಗಳು 35
**ಜಿ.ಹೆಚ್. ಹನ್ನೆರಡು ಮಠ**

ಶರಣೆ ಹೇಮರಡ್ಡಿ ಮಲ್ಲಮ್ಮ 39
**ಡಾ. ರುದ್ರಣ್ಣ ಚಿಲಮಿ**

ವಾರ್ತಾವಿಹಾರ 53

**ಮುಖಪುಟ ಚಿತ್ರ**

ಮೈಸೂರು ನಾಗರಿಕರ ವೇದಿಕೆ ವತಿಯಿಂದ ನೆರೆ ಸಂತ್ರಸ್ತರಿಗೆ ಬಾಗಲಕೋಟೆ ಜಿಲ್ಲೆ ಇಂಗಳಗಿಯಲ್ಲಿ ನಿರ್ಮಿಸಲಾಗುವ ಮನೆಗಳ ನಿರ್ಮಾಣಕ್ಕೆ ಶಿಲಾನ್ಯಾಸ. ಚಿತ್ರದಲ್ಲಿ: ಪರಮಪೂಜ್ಯ ಶ್ರೀಗಳು, ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಗಳು, ಶ್ರೀ ಅರವಿಂದ ಲಿಂಬಾವಳಿ, ಶ್ರೀ ವೀರಣ್ಣ ಸಿ. ಚರಂತಿಮಠ ಮತ್ತಿತರರು

## ಲೇಖಕರ ವಿಳಾಸ

**ಕೆ.ಸಿ. ಶಿವಪ್ಪ**
'ಜ್ವಾಲಾಮಾಲಾ'
1428, ಪೂರ್ಣದೃಷ್ಟಿ ರಸ್ತೆ
ಕುವೆಂಪುನಗರ
ಮೈಸೂರು 570 023

**ಡಾ. ವ್ಹಿ.ಜಿ. ಪೂಜಾರ**
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ
ಗುಲ್ಬರ್ಗಾ ವಿಶ್ವವಿದ್ಯಾಲಯ
ಗುಲ್ಬರ್ಗಾ 585 106

**ಪ್ರೊ. ಜಿ.ಎಚ್. ಹನ್ನೆರಡು ಮಠ**
'ಮಾವುಮಲ್ಲಿಗೆ'
ಯೋಗಭವನ, ಇಂದ್ರಪ್ರಸ್ಥ
ನ್ಯಾಷನಲ್ ಪಾರ್ಕ್ ರಸ್ತೆ
ಗೊಟ್ಟಿಗೆರೆ ಅಂಚೆ
ಬೆಂಗಳೂರು 560 083

**ಡಾ. ರುದ್ರಣ್ಣ ಚಿಲಮಿ**
ಪ್ರಾಧ್ಯಾಪಕರು ಮತ್ತು ಸಂಯೋಜಕರು
ದೂರಶಿಕ್ಷಣ ಸ್ನಾತಕೋತ್ತರ ಅಧ್ಯಯನ ಕೇಂದ್ರ
ಹಾರೂಗೇರಿ 591220

# ಸಂಪಾದಕೀಯ

ಕರ್ನಾಟಕ ಉತ್ತರದ ತುತ್ತತುದಿ ಬೀದರ್ ಜಿಲ್ಲೆಯಲ್ಲಿರುವ ಬಸವಕಲ್ಯಾಣ ವೀರಶೈವರ ಪಾಲಿಗಷ್ಟೇ ಅಲ್ಲ ಅಖಂಡ ಕರ್ನಾಟಕದ ಎಲ್ಲ ಸಮುದಾಯದವರ ಆಲೋಚನೆಗಳಿಗೂ ಸ್ಪಂದಿಸಿ ಅವರುಗಳ ಉದಾತ್ತ ಅಭೀಪ್ಸೆಗೆ ಕ್ರಿಯಾರೂಪವನ್ನು ಒದಗಿಸಿದ ಕರ್ಮಭೂಮಿ. ಕಾಯಕಕ್ಕೆ ಕಾಲುಗಳು ಮೂಡಿದಂತೆ, ಮೌಲ್ಯಗಳೇ ಮಾತನಾಡಿದಂತೆ, ಸಕಲ ಜೀವಜಾಲಗಳಿಗೂ ಲೇಸನು ಬಯಸುವುದೇ ಬದುಕಿನ ಮಹತ್ತರ ತಪಸ್ಸು ಎಂದು ಭಾವಿಸಿ ಬದುಕಿದ ಶರಣರ ಪಾದಸ್ಪರ್ಶದಿಂದ ಅಲ್ಲಿನ ಮಣ್ಣಿನ ಕಣಕಣವೂ ಪುನೀತವಾಗಿವೆ. ಆದರ್ಶ ರಾಜ್ಯವೊಂದು ಈ ಭೂಮಿಯ ಮೇಲೆ ಎಲ್ಲಿಯಾದರೂ ಒಂದು ಇದ್ದೀತೆ ಎಂದು ಅನುಮಾನಿಸುವರ ಅಲ್ಪದೃಷ್ಟಿಗೆ ಸವಾಲೆನಿಸುವಂತಹ ರೀತಿಯಲ್ಲಿ ಜಾಗೃತ, ಸ್ವಪ್ನ, ಸುಷುಪ್ತಿಗಳೆಂಬ ಅವಸ್ಥಾತ್ರಯಗಳಲ್ಲಿಯೂ ಅಂತರಂಗ ಹಾಗೂ ಬಹಿರಂಗಗಳನ್ನು ಶಿವಪರ ನಿಲುವಿಗಾಗಿ ಬೆಸೆದುಕೊಂಡೇ ಬದುಕಿದ ಶರಣರ ಪಟ್ಟಣ ಅದು. ಆದ್ದರಿಂದಲೇ ಕಲ್ಯಾಣ ಪಟ್ಟಣವೆಂಬುದು ಕೇವಲ ಒಂದು ಅಂಕಿತನಾಮವಷ್ಟೇ ಆಗಿರದೆ, ಅನ್ವರ್ಥನಾಮವೂ ಆಗಿದೆ. ಅಲ್ಲಿ ಇದ್ದಂತಹ 'ಅನುಭವ ಮಂಟಪ'ವೆನ್ನುವುದು ಪ್ರಾಯಃ ಇಡೀ ಪಟ್ಟಣಕ್ಕೆ ಅನ್ವಯಿಸುವಂತಹ ಸಾಂಕೇತಿಕವಾದ ಹೆಸರು ಎನಿಸುತ್ತದೆ.

ಕಾಂಚನವನ್ನು ನಾಯಿಗೆ ಹೋಲಿಸಿ, ಬದುಕಿನಲ್ಲಿ ಅದರ ಸ್ಥಾನ ಯಾವುದು ಎನ್ನುವುದು ಸ್ಪಷ್ಟವಾಗಿ ನಿರ್ದೇಶಿಸಿದವರು; ದುಡಿಮೆಯಿಲ್ಲದ ಸಂಪತ್ತನ್ನು ಅಮೇಧ್ಯಕ್ಕೆ ಹೋಲಿಸಿದವರು; ಲಿಂಗಕ್ಕೆ ಅರ್ಪಿತವಾಗುವ ನೈವೇದ್ಯ ಕಾರೆಯಸೊಪ್ಪಾದರೂ ಸರಿಯೆ, ಅದು ಕಾಯಕದಿಂದಲೇ ಬಂದಿರಬೇಕು ಎಂದವರು, ಪೂಜೆಗಿಂತಲೂ ಶ್ರೇಷ್ಠವಾದದ್ದು ಕಾಯಕ ಎಂಬ ಕಾಯಕಪರ ನಿಲುವನ್ನು ತಳೆದ ಚೇತನಗಳ ಉಸಿರಾಟದಿಂದ ಪರಿಮಳಿಸಿದ ಪ್ರದೇಶ ಅದು.

ಬಸವಕಲ್ಯಾಣದ ಚಾರಿತ್ರಿಕ ಮಹತ್ವದ ಬಗ್ಗೆ ಈ ಸಂದರ್ಭದಲ್ಲಿ ಇಷ್ಟೆಲ್ಲಾ ಹೇಳಲು ಒಂದು ಕಾರಣವಿದೆ. ಮೇಲ್ಮನೆಯ ಚುನಾವಣೆಗೆ ಒಂದೆರಡು ವಾರಗಳ ಹಿಂದೆ ಕಾರ್ಯನಿಮಿತ್ತ ನಾನು ಈ ಪರಿಯ 'ಕಲ್ಯಾಣಪಟ್ಟಣ' ದಲ್ಲಿ ಇರಬೇಕಾಗಿ ಬಂದಿತ್ತು. ಪಟ್ಟಣದ ಮುಖ್ಯ ಬೀದಿಯಲ್ಲಿ ವೃತ್ತವೊಂದರಲ್ಲಿ ಬಸವಣ್ಣನವರ ಭವ್ಯ ಪುತ್ಥಳಿ ಇದೆ. ಅದರ ಸನಿಹದ ಒಂದು ಉಪಾಹಾರ ಗೃಹದಲ್ಲಿ ಅಂದು ಕುಳಿತಿದ್ದೆ. ಆ ಭವ್ಯ ವಿಗ್ರಹವನ್ನು ನೋಡುತ್ತ ನೋಡುತ್ತ ನನ್ನ ಮನಸ್ಸು 800 ವರ್ಷಗಳ ಹಿಂದಿನ ಆಂದೋಲನದ ಸ್ವರೂಪವನ್ನು ಕಲ್ಪಿಸಿಕೊಳ್ಳಲು ಪ್ರಯತ್ನಿಸಿತು. ಹಾಗೆಯೇ ಅಲ್ಲಿ ನಡೆದಾಡುತ್ತಿದ್ದವರೆಲ್ಲ ಶರಣರಂತೆ ಭಾಸವಾಗತೊಡಗಿದರು. ಹರಳಯ್ಯ ಮಧುವರಸರು ಪರಸ್ಪರ ಆಲಂಗಿಸಿಕೊಳ್ಳುತ್ತಿದ್ದರು, ಮಹದೇವಭೂಪಾಲ ಮಾದಾರ ಚೆನ್ನಯ್ಯ ಪರಸ್ಪರ ಹೆಗಲ ಮೇಲೆ ಕೈಹಾಕಿ ನಡೆದು ಬರುತ್ತಿದ್ದರು. ನಿರ್ವಾಣದಲ್ಲಿ ಬರುತ್ತಿದ್ದ

ಅಕ್ಕನನ್ನು ಬೆರಗಿನಿಂದ ನೋಡುತ್ತಿದ್ದವರೆಲ್ಲರೂ ಆ ಮಧುರ ಕ್ಷಣದಲ್ಲಿ ಸ್ವತಃ 'ಶರಣಸತಿ'ಯಾಗಿದ್ದರು; ರಾಜಮಕುಟದ ಮಣಿಗಳೆಲ್ಲಾ ಕಾಷಾಯವಸ್ತ್ರದ ಮುಂದೆ ಕೇವಲ ಹಾದಿಬೀದಿಯ ಕಿರುಕಲ್ಲುಗಳಾಗಿದ್ದವು. ಇಂಥದೊಂದು ಸಮಾಜವೂ ಇಲ್ಲಿ ಇತ್ತೇ ಎನ್ನುವ ಅನುಮಾನವೂ ಕ್ಷಣಹೊತ್ತು ನನ್ನ ಅಲ್ಪಮತಿಯನ್ನು ಕಾಡತೊಡಗಿತು. ನನ್ನ ಮನಸ್ಸು ಇದ್ದಕ್ಕಿದ್ದ ಹಾಗೆ ವಾಸ್ತವಕ್ಕೆ ಬಂದುದು ನನ್ನ ಮುಂಭಾಗದ ಕುರ್ಚಿಗಳಲ್ಲಿ ಇಬ್ಬರು ಬಂದು ಕುಳಿತುಕೊಂಡುದುದರಿಂದ. ಅನಂತರ ಅವರೀರ್ವರು ಏನೋ ಮಾತನಾಡಲು ತೊಡಗಿ ಯಾರಾದರೂ ನಮ್ಮ ಮಾತುಗಳನ್ನು ಕೇಳಿಸಿಕೊಳ್ಳಬಹುದೇನೋ ಎಂದು ಅತ್ತಿತ್ತ ನೋಡತೊಡಗಿದರು. ಅವರ ಸಮಸ್ಯೆ ನನಗೆ ಅರ್ಥವಾಗಿ, ಮುಖದಲ್ಲಿ ನಿರ್ಲಿಪ್ತ ಭಾವವನ್ನು ತುಂಬಿಕೊಂಡು ಕೈಯಲ್ಲಿದ್ದ ಪುಸ್ತಕದ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸಿದೆ. ನನ್ನ ಮೈಯೆಲ್ಲಾ ಕಿವಿಗಳಾದವು. ಅವರುಗಳ ಮಾತುಗಳು ಹೀಗಿದ್ದುವು–

ರಾತ್ರಿ ಮಹಾಮನೆಯ ಪಕ್ಕದ ಬಯಲಿನಲ್ಲಿ ಹಣ ಬಟವಾಡೆಯಾಯಿತು... ಹತ್ತು ... ಇಪ್ಪತ್ತು ಸಾವಿರದಂತೆ... ಹಾಗಾದರೆ ಕ್ಯಾಂಡಿಡೇಟ್ ಗೆಲ್ಲೋದು ಗ್ಯಾರಂಟಿ... ಆದರೂ ನಂಬೋಕೆ ಆಗೊಲ್ಲ ನೋಡು...

ಎಲ್ಲರ ಕೈಯಲ್ಲೂ ಬಸವಣ್ಣನವರ ಫೋಟೋ ಮುಟ್ಟಿಸಿ ಪ್ರಮಾಣ ಮಾಡಿಸಿ ಕೊಂಡವರೆ... ಆಮೇಲೂ ಮೋಸ ಮಾಡಿದ್ರೆ ಆ ದೇವರು ಮೆಚ್ತಾನಾ.... ಹೀಗೆ ಅವರ ಮಾತುಗಳು ಮುಂದುವರಿದಿದ್ದವು.

ಬಸವಣ್ಣನವರ ಭಾವಚಿತ್ರವನ್ನು ಮುಟ್ಟಿಸಿ ಪ್ರಮಾಣ ಮಾಡಿಸಿಕೊಂಡು ಹಣ ಹಂಚಿದವರು ಸೋತರೋ ಗೆದ್ದರೋ ಅದು ಇಲ್ಲಿ ಅಪ್ರಸ್ತುತ. ಇಂತಹ ಒಂದು ಸಂಭಾಷಣೆ ನನ್ನೂರಿನಂತಹ ಊರಿನಲ್ಲಿ ನಡೆದಿದ್ದರೆ ನಾನು ಹೆಚ್ಚು ಚಿಂತಿಸುತ್ತಿರಲಿಲ್ಲವೇನೊ. ಆದರೆ ಈ ತೆರನಾದ ವ್ಯವಹಾರ ನಡೆದದ್ದು ಕಲ್ಯಾಣ ಪಟ್ಟಣದಲ್ಲಿ ಎನ್ನುವುದು ನನ್ನನ್ನು ತೀವ್ರವಾಗಿ ಕಾಡತೊಡಗಿತು. ಅದರಲ್ಲೂ ಮಾಡುವ ಅಕ್ರಮಕ್ಕೆ ಅಣ್ಣನವರ ಭಾವಚಿತ್ರವೇ ಸಾಕ್ಷಿ. ಎಂಥ ದುರಂತ! ಪ್ರಾಯಃ ಜಗತ್ತಿನ ಯಾವುದೇ ಕ್ರಾಂತಿಯ ಚರಿತ್ರೆಯೂ ಹೀಗೆಯೇ ಎಂದು ಕಾಣುತ್ತದೆ. ಕಾಲಕ್ರಮೇಣ ಅದು ತನ್ನ ಆಂತರಿಕ ಸತ್ವವನ್ನು ಕಳೆದುಕೊಂಡು ಗ್ರಂಥಸ್ಥವಾಗಿ ಉಳಿದು ಸ್ಥಾವರವಾಗುತ್ತದೆ; ಬದುಕಿನ ಅಂದಂದಿನ ದಂದುಗಗಳು ಮಾತ್ರ ನಿತ್ಯ 'ಜಂಗಮ'ವಾಗುತ್ತವೆ. ಬಹಿರಂಗದಲ್ಲಿ ದೊಡ್ಡ ದೊಡ್ಡ ಮೌಲ್ಯಗಳ ಬಗ್ಗೆ ದೊಡ್ಡ ದನಿಯಲ್ಲಿ ಮಾತನಾಡುವವರೂ ಖಾಸಗಿಯಾಗಿ ಇಂಥ ನಗ್ನ ನರ್ತನಗಳಿಗೆ ಕುಮ್ಮಕ್ಕು ಕೊಡುತ್ತಾ, ತಮ್ಮ ವೈಯಕ್ತಿಕ ಬದುಕನ್ನು ಸುರಕ್ಷಿತ ವಲಯದೊಳಗೆ ವಿಜೃಂಭಿಸಿಕೊಳ್ಳಲು ಹೆಣಗುತ್ತಾರೆ. ಭ್ರಷ್ಟತೆಯಂತೂ 'ಬ್ರಹ್ಮಾಂಡದಿಂದತ್ತತ್ತ, ಪಾತಾಳದಿಂದತ್ತಿತ್ತವಾಗಿದ್ದು' ಸಜ್ಜನರು ಅನಾಥಪ್ರಜ್ಞೆಯಿಂದ ನರಳುತ್ತಿರುವುದು ಬಹು ದೊಡ್ಡ ಸಾಮಾಜಿಕ 'ಪ್ರಳಯದ ಮುನ್ಸೂಚನೆ'ಯೇ ಆಗಿದೆ. ಕಲ್ಯಾಣ ಪಟ್ಟಣದ ಪರಿಸರದ ಕಥೆಯೇ ಹೀಗಾದಮೇಲೆ, ಇನ್ನು....

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

'ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರು' ಎನ್ನುವುದು ಪ್ರಸಿದ್ಧ ಕವಿವಾಣಿ. ಮಗುವಿಗೆ ಜ್ಞಾನಾರ್ಜನೆ ಮತ್ತು ಮೌಲ್ಯಪ್ರಜ್ಞೆ ಮನೆಯಲ್ಲಿಯೇ ಪ್ರಾರಂಭವಾಗಬೇಕು ಎನ್ನುವುದು ಇದರ ಸ್ಥೂಲವಾದ ಅರ್ಥ. ಈ ಅರ್ಥ ಇಷ್ಟಕ್ಕೆ ನಿಲ್ಲದೆ ಮತ್ತಷ್ಟು ವಿಸ್ತೃತವಾಗುತ್ತ ಹೋಗುತ್ತದೆ. ಓದುಬರಹಗಳು ವಿದ್ಯೆಯನ್ನು ಕಲಿಸುವ ಮಾಧ್ಯಮಗಳು ಅಷ್ಟೆ. ವಿದ್ಯೆಯ ಮೂಲ ಗುರಿ ಬುದ್ಧಿವಿಕಾಸಕ್ಕಿಂತಲೂ ಶ್ರೇಷ್ಠವಾದ ಮನೋವಿಕಾಸ; ಆತ್ಮಸಾಕ್ಷಾತ್ಕಾರ. ಇಂತಹ ವಿಕಾಸಕ್ಕೆ ಎಳವೆಯಲ್ಲಿಯೇ ಸ್ಫೂರ್ತಿ ದೊರಕಿದರೆ ಅದು ಮುಂದೆ ಅನಂತ ಸಾಧ್ಯತೆಗಳ ಕಡೆಗೆ ಸಾಗುತ್ತದೆ. ಮಗು ಹುಟ್ಟಿದಾರಭ್ಯ ಒಂದು ವಯೋಮಾನಕ್ಕೆ ಬರುವ ತನಕ ತಾಯಿಯ ಮಮತೆಯ, ಆಪ್ತತೆಯ ಚೌಕಟ್ಟಿನಲ್ಲಿಯೇ ಬೆಳೆಯುವುದರಿಂದ, ಹಾಗೆಯೇ ತಾಯಿಯ ಪ್ರೀತಿ ನಿರ್ವ್ಯಾಜವಾಗಿರುವುದರಿಂದ ಆಕೆಯ ಮಾತು, ಕೃತಿ ಎಲ್ಲವೂ ಬೆಳೆಯುತ್ತಿರುವ ಮಗುವಿನ ಮೇಲೆ ಸಕಾರಾತ್ಮಕ ಪರಿಣಾಮವನ್ನು ಬೀರುತ್ತವೆ. ಆದ್ದರಿಂದಲೇ ತಾಯಿ ಮೊದಲ ಗುರುವಿನ ಸ್ಥಾನವನ್ನು ಪಡೆಯುತ್ತಾಳೆ. ಈ ದಿಕ್ಕಿನಲ್ಲಿ ಸ್ಮರಿಸಬಹುದಾದ ಸಂತ ವಿನೋಬಾ ಭಾವೆಯವರ ಬದುಕಿನ ಎರಡು ಘಟನೆಗಳು ಹೀಗಿವೆ:

ವಿನೋಬಾ ಭಾವೆಯವರು ಚಿಕ್ಕವರಾಗಿದ್ದಾಗ ಅವರ ಮನೆಯ ಹಿತ್ತಿಲಿನಲ್ಲಿ ಒಂದು ಪಪ್ಪಾಯಿಗಿಡ ಮೊದಲ ಬಾರಿಗೆ ಹಣ್ಣನ್ನು ಬಿಟ್ಟಿತ್ತು. ಅದರ ಬೆಳವಣಿಗೆಯನ್ನು ಕುತೂಹಲದಿಂದ ಗಮನಿಸುತ್ತಿದ್ದ ವಿನೋಬಾಜಿಯವರು ಅದು ಹಣ್ಣಾದ ತಕ್ಷಣ ಕಿತ್ತು ತಂದು, ಅದನ್ನು ಕತ್ತರಿಸಿ, ಹೋಳುಗಳನ್ನಾಗಿ ಮಾಡಿ 'ನಾನು ಇದನ್ನು ತಿನ್ನಲೆ' ಎಂದು ತಾಯಿಯ ಅಪ್ಪಣೆ ಕೇಳಿದರು. ಆಗ ಅವರ ತಾಯಿ "ನಮ್ಮ ಊರಿನಲ್ಲಿ ಎಲ್ಲಿಯೂ ಒಂದೂ ಪಪ್ಪಾಯಿ ಗಿಡವಿಲ್ಲ. ಇರುವುದು ತಮ್ಮ ಹಿತ್ತಲಲ್ಲಿ ಮಾತ್ರ. ಎಲ್ಲರಿಗೂ ನಿನ್ನ ಹಾಗೆಯೇ ಅದನ್ನು ತಿನ್ನುವ ಆಸೆ ಇದ್ದೇ ಇರುತ್ತದೆ. ಹೀಗಿರುವಾಗ ನೀನೊಬ್ಬನೇ ಅದನ್ನು ತಿನ್ನುವುದು ಎಷ್ಟು ಸರಿ? ಪ್ರಕೃತಿಯಲ್ಲಿ ಸಹಜವಾಗಿ ಬೆಳೆದಿರುವ ಈ ಹಣ್ಣು ನಿನಗೆ ಮಾತ್ರ ಹೇಗೆ ಸಲ್ಲುತ್ತದೆ? ಅದು ಎಲ್ಲರಿಗೂ ಸೇರಿದ್ದಲ್ಲವೇ? ನಮ್ಮ ವಠಾರದ ಮನೆಯ ಮಕ್ಕಳಿಗೆ ಮೊದಲು ಒಂದೊಂದು ಪಪ್ಪಾಯಿಯ ಹೋಳನ್ನು ಕೊಟ್ಟು ಬಾ. ಅನಂತರ ನೀನು ತಿನ್ನು'' ಎಂದರು. ವಿನೋಬಾಜಿಯವರು ತಾಯಿಯ ಮಾತಿನಂತೆಯೇ ನಡೆದು ಕೊನೆಯಲ್ಲಿ ತಾವು ತಿಂದರು.

ಇತರರೊಡನೆ ಹೀಗೆ ಹಂಚಿಕೊಂಡು ತಿನ್ನುವುದನ್ನು ಈ ಮಹಾತ್ಮರು ತಮ್ಮ

ತಾಯಿಯಿಂದ ಕಲಿತರು. ಮುಂದೆ ತಮ್ಮ ಭೂದಾನ ಚಳುವಳಿಗೆ ಇದೇ ಸ್ಫೂರ್ತಿಯಾಯಿತು ಎಂದು ಅವರು ಹೇಳುತ್ತಾರೆ.

ವಿನೋಬಾರವರ ಮನೆಯವರು ಅಂತಹ ಸ್ಥಿತಿವಂತರೇನೂ ಆಗಿರಲಿಲ್ಲ. ಅವರದು ಮಧ್ಯಮ ವರ್ಗದ ಒಂದು ಕುಟುಂಬ. ಆದರೂ ಅವರ ತಾಯಿ ಪರೋಪಕಾರಕ್ಕೆ ಸದಾ ಮುಂದಾಗುತ್ತಿದ್ದರು. ಅವರ ಮನೆಯಲ್ಲಿ ಬಡ ಹುಡುಗನೊಬ್ಬನಿಗೆ ವಾರಾನ್ನದ ವ್ಯವಸ್ಥೆ ಮಾಡಿಕೊಟ್ಟಿದ್ದರು. ಆ ವಿದ್ಯಾರ್ಥಿ ಸಮಯಕ್ಕೆ ಸರಿಯಾಗಿ ಇವರ ಮನೆಗೆ ಊಟಕ್ಕೆ ಬರುತ್ತಿದ್ದ. ವಿನೋಬಾರವರ ತಾಯಿ ಅವನನ್ನು ಕಾಯಿಸಲು ಇಚ್ಛಿಸದೆ, ಅವನು ಬರುವ ಮೊದಲೇ ಅಡುಗೆ ಮಾಡಿ ಅವನಿಗಾಗಿ ಕಾಯುತ್ತಾ ಕುಳಿತಿರುತ್ತಿದ್ದರು. ಒಮ್ಮೊಮ್ಮೆ ಆ ಹುಡುಗನ ಜೊತೆಯಲ್ಲಿ ವಿನೋಬಾರವರು ಊಟಕ್ಕೆ ಕುಳಿತುಕೊಳ್ಳುತ್ತಿದ್ದರು. ವಾರಾನ್ನದ ಹುಡುಗನ ತಟ್ಟೆಯಲ್ಲಿ ಹಬೆಯಾಡುವ ಆಹಾರವಿರುತ್ತಿದ್ದರೂ, ವಿನೋಬಾರವರ ತಟ್ಟೆಯಲ್ಲಿ ಎಷ್ಟೋ ಬಾರಿ ತಂಗಳು ಆಹಾರವಿರುತ್ತಿತ್ತು. ಕುತೂಹಲ ತಡೆಯಲಾರದೆ ಅವರು ಒಮ್ಮೆ ತಾಯಿಯನ್ನು ಕೇಳಿಯೇಬಿಟ್ಟರು: 'ವಾರಾನ್ನದ ಹುಡುಗನಿಗೆ ಬಿಸಿಯೂಟ, ನನಗೇಕೆ ತಂಗಳೂಟ' ಎಂದು. ಅವರ ತಾಯಿ ನಸುನಗುತ್ತಾ, ''ನೋಡು ಮಗು, ನಿನಗೆ ಬಿಸಿಯೂಟವನ್ನು ಬಡಿಸಿ, ಆತನಿಗೆ ತಂಗಳನ್ನ ಬಡಿಸಿದರೆ, ತಮ್ಮ ಮಗನಿಗಾದರೆ ಬಿಸಿ ಬಿಸಿಯಾದ ಊಟವನ್ನು ಬಡಿಸುತ್ತಾರೆ. 'ನಾನೆಷ್ಟಾದರೂ ಅವರ ಮಗನಲ್ಲ, ವಾರಾನ್ನದ ಬಡ ಹುಡುಗ; ನನಗೆ ಇನ್ನೇನು ತಾನೇ ಬಡಿಸಿಯಾರು' ಎಂದು ಅವನ ಮನಸ್ಸಿಗೆ ನೋವಾಗಬಹುದು. ನೀನು ಎಷ್ಟಾದರೂ ನಮ್ಮ ಹುಡುಗ. ನಿನ್ನ ಆರೋಗ್ಯವನ್ನು ನೋಡಿಕೊಳ್ಳಲು ಸದಾ ನಿನ್ನ ಕಣ್ಣುಗಳ ಮುಂದೆ ನಾವಿದ್ದೇವೆ. ಪಾಪ, ಅವನಿಗೆ ಯಾರಿದ್ದಾರೆ? ಅದಕ್ಕಾಗಿ ಹಾಗೆ ಮಾಡುತ್ತೇನೆ ಅಷ್ಟೆ'' ಎಂದರು.

ತಾಯಿಯ ಮನಃಸ್ಥಿತಿಯನ್ನು ತಿಳಿದು ವಿನೋಬಾಜಿಯವರ ಕಣ್ಣಲ್ಲಿ ನೀರಾಡಿದವು. ಮತ್ತೊಬ್ಬರ ಭಾವನೆಗಳಿಗೆ ನೋವಾಗದ ಹಾಗೆ ನಡೆದುಕೊಳ್ಳುವುದು ಹೇಗೆ ಎನ್ನುವ ಇಂತಹ ಸೂಕ್ಷ್ಮಗಳನ್ನು ತಮ್ಮ ತಾಯಿಯಿಂದ ಕಲಿತುಕೊಂಡೆ ಎಂದು ಅವರು ಒಂದು ಕಡೆ ಹೇಳುತ್ತಾರೆ.

'ಜನನಿಯೇ ಮೊದಲ ಗುರು' ಎನ್ನುವುದು ಇಂತಹ ವಿಶಾಲ ಅರ್ಥದಲ್ಲಿ. ನಮ್ಮ ತಾಯಂದಿರು ತಮ್ಮ ಮಕ್ಕಳನ್ನು ಬೆಳೆಸುವಾಗ, ಅವರ ಆರೋಗ್ಯಕ್ಕೆ, ದೇಹಪೋಷಣೆಗೆ ಏನೆಲ್ಲಾ ಕಾಳಜಿ ವಹಿಸುವುದು ಸಂತೋಷದಾಯಕವೇ ಆದರೂ ಅವರ ಆತ್ಮವಿಕಾಸಕ್ಕೆ ಪ್ರೇರಣೆ ನೀಡುವ, ಪೋಷಣೆಯೊದಗಿಸುವ ಚಿಂತನೆಯನ್ನು, ಕ್ರಿಯಾಶೀಲತೆಯನ್ನು ಬೆಳೆಸುವ ಮೂಲಕ ಬರಿಯ ಮಾತೆಯರಾಗದೆ, ಮಹಾಮಾತೆಯರಾಗಬೇಕು.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# 'ಕೈವಲ್ಯ ಪದ್ಧತಿ' : ನಿಜಗುಣರ ಪರತತ್ವ ಚಿಂತಾಮಣಿ

**ಕೆ.ಸಿ. ಶಿವಪ್ಪ**

ಕನ್ನಡನಾಡು ಕಂಡ ಅನುಪಮ ನಿರುಪಮ ಜ್ಞಾನಿ ನಿಜಗುಣ ಶಿವಯೋಗಿಗಳು. 'ಕೈವಲ್ಯ ಪದ್ಧತಿ' ಅವರ ಶ್ರೇಷ್ಠಕೃತಿಗಳಲ್ಲೊಂದು. ಮನಸ್ಸಿಗೆ ಶಾಂತಿ ಸಮಾಧಾನವನ್ನೀಯುವ ಬೋಧಪ್ರದ ಗೇಯಪದ್ಯಗಳ ಸಂಕಲನ ಈ ಹೊತ್ತಿಗೆ. ಶಾಂತರಸಪ್ರಧಾನವಾದ ಈ ಕೃತಿಯಲ್ಲಿ ಒಟ್ಟು 174 ಸುಂದರ ಪದ್ಯಗಳಿವೆ. ಒಂದೊಂದು ಪದ್ಯಕ್ಕೂ ಉಚಿತ ರಾಗನಿರ್ದೇಶನವಿದೆ. ಯಾರೇ ಸಾಧಕ ತನ್ನಷ್ಟಕ್ಕೆ ತಾನೆ ಪರಮಾನಂದ ಪ್ರಾಪ್ತಿಗೆ ಹಾಯಾಗಿ ಹಾಡಿಕೊಳ್ಳಬಹುದಾದ ಭಾವಸೌಂದರ್ಯದ, ಗೀತಮಾಧುರ್ಯದ ತನಿರಚನೆಗಳಿವು.

ಕೃತಿಕಾರ ಐದು ವಿಭಾಗಗಳಲ್ಲಿ ಪದ್ಯಗಳನ್ನು ಕ್ರಮಬದ್ಧವಾಗಿ ವಿಂಗಡಿಸಿದ್ದಾರೆ. ಶಿವಕಾರುಣ್ಯ, ಜೀವಸಂಬೋಧನೆ, ನೀತಿಕ್ರಿಯಾಚರ್ಯೆ, ಯೋಗಪ್ರತಿಪಾದನೆ ಮತ್ತು ಜ್ಞಾನಪ್ರತಿಪಾದನೆ - ಎಂಬ ಈ ಐದು ಸ್ಥಲಗಳಲ್ಲಿ ಕ್ರಮಶಃ 28, 22, 26, 39 ಹಾಗೂ 59 ಪದ್ಯಗಳಿವೆ. ಪ್ರತಿಸ್ಥಲವೂ "ಇಂತು(ಶ್ರೀ) ನಿಜಗುಣಶಿವಯೋಗಿ ವಿರಚಿತವಾದ ಕೈವಲ್ಯಪದ್ಧತಿಯೆಂಬ ಪ್ರಕರಣದಲ್ಲಿ ... ಸ್ಥಲಕ್ಕೆ ಸೇರಿದ ಪದಂಗಳು (ವಚನ ಜೋಡು) ... ಕ್ಕಂ, ಬಿಚ್ಚಿದ ಪದಂಗಳು (ವಚನಂಗಳು) ... ಕ್ಕಂ ಮಂಗಳ ಮಹಾ ಶ್ರೀ ಶ್ರೀ" ಎಂದು ಕೊನೆಗಾಣುತ್ತದೆ. ಹೀಗೆ, ಕೃತಿಯಲ್ಲಿ ಸೇರಿರುವ ಪದ್ಯಗಳ ಸಂಖ್ಯೆಯ ನಿಖರತೆ ಖಚಿತವಾಗಿದೆ ಎನ್ನಬಹುದು.

ಇಡೀ ಕೃತಿಯ ಪ್ರತಿ ಪದ್ಯದ ಕೊನೆಯ ಚರಣದಲ್ಲಿ 'ಶಂಭುಲಿಂಗ' ಎಂಬ ಅಂಕಿತವಿದೆ. ಸುಮಾರು ಐವತ್ತು ಪದ್ಯಗಳಲ್ಲಿ 'ಗುರು ಶಂಭುಲಿಂಗ'ವೆಂಬ ನಾಮಾಂಕಿತವಿದ್ದರೆ, ಉಳಿದ ಪದ್ಯಗಳಲ್ಲಿ ಅಂಕಿತದೊಡನೆ ನಾನಾ ವಿಶೇಷಣಗಳನ್ನು ಬಳಸಲಾಗಿದೆ. ನಿಜ, ಘನ, ಪತಿ, ವರದ, ಪರತರ, ಪಾವನ, ಸದಮಲ, ಸುಲಲಿತ, ಅನೂನ, ಅನುಪಮ, ನಿರುಪಮ, ಅವಿರಳ, ಸದ್ಗುರು, ನಿಸ್ಸೀಮ, ಕಂತುಹರ, ಜ್ಞಾನನಿಧಿ, ಮಾರಮರ್ದನ, ನಿತ್ಯನಿರ್ಮಲ, ಹರುಷವಾರಿಧಿ, ಮಾಯಾರಹಿತ, ಮಲಪಾಶದೂರ, ಮಹಿಮಾವಿಭವ, ಅಪಾರಮಹಿಮ, ಪಾವನಾತ್ಮಕ, ಬೋಧಾಂಬುನಿಧಿ, ಆನಂದಬೋಧಾಂಬುಧಿ, ನಿರುಪಮ ಸಾಕ್ಷಿಕ, ನಿತ್ಯನಿಜನಿರ್ವಿಕಾರ ಹಾಗೂ ಚಾರುಚಿತ್ಕಲಾಪ್ರಪೂರ್ಣ- ಎಂಬಿವೇ ಆ ವಿಶೇಷಣಗಳು ಶಂಭುಲಿಂಗನಿಗೆ.

ಎಲ್ಲ ಪದ್ಯಗಳ ಎಲ್ಲ ಚರಣಗಳಲ್ಲಿ ದ್ವಿತೀಯಾಕ್ಷರ ಪ್ರಾಸ ಕಡ್ಡಾಯವಾಗಿ ಬಂದಿದೆ. ಅಂತೆಯೇ, ಎಲ್ಲ ಗೀತೆಗಳಿಗೆ ರಾಗಗಳನ್ನು ಸೂಚಿಸಲಾಗಿದೆ. ಇದೊಂದು ಗೇಯಕೃತಿಯ ವೈಶಿಷ್ಟ್ಯ.

ನಿಜಗುಣ ಶಿವಯೋಗಿಗಳು ಇಲ್ಲಿನ ಪದ್ಯಗಳಿಗೆ 30ಕ್ಕಿಂತ ಹೆಚ್ಚು ರಾಗಗಳ ನಾಮನಿರ್ದೇಶನ ಮಾಡಿದ್ದಾರೆ. ನಾದನಾಮಕ್ರಿಯ, ಸೌರಾಷ್ಟ್ರ ಹಾಗೂ ಕಾಂಬೋಧಿ ರಾಗಗಳನ್ನು ತಲಾ 20ಕ್ಕಿಂತ ಹೆಚ್ಚಿನ ಪದ್ಯಗಳಿಗೆ ವಿಶೇಷವಾಗಿ ಸೂಚಿಸಿರುವುದನ್ನು ನಾವು ಗಮನಿಸಬಹುದಾಗಿದೆ. ಶಂಕರಾಭರಣ, ಧನ್ಯಾಸಿ, ಭೈರವಿ ಹಾಗೂ ದೇಸಿ ರಾಗಗಳು ಸುಮಾರು ಹತ್ತು ಪದ್ಯಗಳಿಗೆ ತಲಾ ಪ್ರತ್ಯೇಕವಾಗಿ ನಮೂದಿತವಾಗಿವೆ. ಕರ್ನಾಟಕ ಹಾಗೂ ಹಿಂದೂಸ್ತಾನಿ ರಾಗಗಳ ಉಲ್ಲೇಖವನ್ನಿಲ್ಲಿ ಕಾಣಬಹುದಾಗಿದೆ. ಕಲ್ಯಾಣಿ, ತೋಡಿ, ಶ್ರೀರಾಗ, ಬೇಗಡೆ, ಮಧುಮಾಧವಿ, ಲಲಿತೆ, ಕುಂತವರಾಳಿ, ಹಿಂದೋಳ, ಕುರಂಜಿ, ನಾಟಪೂರ್ವಿ, ವಸಂತ, ರೇಗುಪ್ತಿ ರಾಗಗಳ ಜೊತೆಗೆ ಭೂಪಾಳಿ, ಆಹರಿ, ಪರಜು, ಮಾಳವ, ಲಹರಿ, ಬಹುಳಿ, ಫಾರಶಿ, ಪಹಾಡಿ, ಸಾವಂತ, ಸುವ್ವಾಲೆ, ಸಾಳಂಗ ರಾಗಗಳನ್ನು ಬಳಸುವಂತೆ ತಿಳಿಸಲಾಗಿದೆ.

ಕೃತಿಯ ಪ್ರಾರಂಭದ "ಶ್ರೀಗುರುವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕುತಿ" ಪದ್ಯಕ್ಕೆ ನಾದನಾಮಕ್ರಿಯ ರಾಗವನ್ನು ಅಳವಡಿಸಿರುವಂತೆ, ಕೊನೆಯ ಪದ್ಯವಾದ "ಜ್ಯೋತಿ ಬೆಳಗುತಿದೆ, ವಿಮಲ ಪರಂಜ್ಯೋತಿ ಬೆಳಗುತಿದೆ"ಯಲ್ಲೂ ಇದೇ ರಾಗವನ್ನೇ ಅರ್ಥವತ್ತಾಗಿ ಮೋಕ್ಷಚಿಂತಾಮಣಿಯ ಓಂಕಾರ ದೀಪ್ತಿಯನ್ನಾಗಿ ಬಳಸಲಾಗಿದೆ.

ಗ್ರಂಥದ ಕರ್ತೃವಿನ ಅಪಾರ ಸಂಗೀತ ಜ್ಞಾನ ಇದರಿಂದ ಸ್ಪಷ್ಟವಾಗಿ ಅರಿವಾಗುತ್ತದೆ. ಪದ್ಯಗಳ ಭಾವಾಂತರಂಗಕ್ಕೆ ಪೋಷಕವಾದಂಥ ರಾಗ ಸೂಚನೆ ಮೆಚ್ಚತಕ್ಕ ಇನ್ನೊಂದು ಅಂಶ. ಮಾಳವ ರಾಗದ "ಯೋಗಿ ನಿಜಾನಂದದೊಳು ನುಡಿಸುವ ವೀಣೆ ರಾಗರಸದ ತರಂಗಿಣಿ ನೋಡು ರಮಣಿ" ಎಂಬ ಪದ್ಯದಲ್ಲಿ ನಿಜಗುಣರು ದಿಟ್ಟಿ, ಷೋಡಶಾಧಾರವೆಂಬ ಮೆಟ್ಟುಗಳು, ತಂತಿಗಳು, ತಿರುಪುಗಂಬ, ಅಂಗುಲಿ ಮೊದಲಾದ ವೀಣೆಯ ಪರಿಕರಗಳನ್ನು ತನುಕರಣಗಳೊಡನೆ ಮೇಳೈಸಿ ನಿಜಾನಂದದ, ಪರನಾದದ ಸುಂದರ ಪರಿಚಯ ಮಾಡಿಕೊಟ್ಟಿದ್ದಾರೆ. ಸಾಹಿತ್ಯ-ಸಂಗೀತ ವೆರಡರಲ್ಲೂ ತಮ್ಮ ಅದ್ವಿತೀಯ ಪ್ರತಿಭೆಯನ್ನು ಅವರು ತೋರಿಸಿರುವುದೊಂದು ಹೆಗ್ಗಳಿಕೆ.

ಕೃತಿಯ ಸುಮಾರು ಎಲ್ಲ ಪದ್ಯಗಳು ಎರಡು ಸಾಲಿನ ಪಲ್ಲವಿಯಿಂದ ಪ್ರಾರಂಭವಾಗುತ್ತವೆ.

ಉದಾಹರಣೆಗೆ -

" ಶ್ರೀಗುರುವಚನದಿಂದಧಿಕ ಸುಧೆಯುಂಟೆ "
ರಾಗದಿಂ ಬೇರಿನ್ನು ಭವಬೀಜಮುಂಟೆ "

" ಭಾಪು ವಿಧಿ ನಿನಗೆ ಬಲ್ಲಿದರು ಬೇರಾರುಂಟು "
ರೂಪುಗೆಡಿಸಿದೆ ಮಹಾಮಹಿಮರೆಲ್ಲರನು. "

" ಬೇಡುವೆನಭವ ನಿಮ್ಮನು ಭವಭವದೊಳು
ಮಾಡೆನಗೊಲಿದು ಸುಗುಣ ಸಂತತಿಯನಿಂತು. "



" ಅರಿವೆ ತಾನೆಂದು ನಂಬಿ ನಿಂದೊಡೆ ಮುಕ್ತಿ
ಪೆರತಿಲ್ಲವೆಂದುದು ನಿಗಮೋಕ್ತಿ. "

" ಮನವೆಂಬ ಗಿಳಿಯನೊಯ್ಯಾರದಿಂದೋವಿ ಮೆ-
ಲ್ಲನೆ ಮುದ್ದುನುಡಿಗಲಿಸೆಲೆ ಮಾನಿನಿ. "

ಬಹುತೇಕ ಪಲ್ಲವಿಗಳು ತಮ್ಮ ಭಾವಸ್ಫುರಣೆ, ವಿಶಿಷ್ಟ ಲಯಗತಿಯಿಂದಾಗಿ ಓದುಗ-ಶ್ರೋತೃವನ್ನು ಥಟ್ಟನೆ ಆಕರ್ಷಿಸುತ್ತವೆ. ಗ್ರಂಥದ ಬಹುಪಾಲು ಪದ್ಯಗಳಲ್ಲಿ ನಾಲ್ಕು ಸಾಲಿನ ಮೂರು ಚರಣಗಳಿವೆ ; ಅಲ್ಲಲ್ಲಿ ಐದು ಚರಣಗಳೂ ಉಂಟು. ಈ ಚರಣಗಳ ವಸ್ತುವಿನ್ಯಾಸ ಅತ್ಯಂತ ತಾರ್ಕಿಕಬದ್ಧವಾಗಿದ್ದು, ಸಂಬಂಧಿಸಿದ ವಿಷಯಕ್ಕೆ ಅಚ್ಚುಕಟ್ಟಾಗಿ ಸೀಮಿತವಾಗಿದೆ. ಪ್ರತಿಯೊಂದು ಚರಣದ ಅಂತ್ಯಪದ ಪಲ್ಲವಿಗೆ ಎತ್ತುಗಡೆಯಾಗಿ ಧ್ವನಿತವಾಗುವ ವಿಶಿಷ್ಟಕಲೆಯನ್ನು ಇಲ್ಲಿನ ಪದ್ಯಗಳಲ್ಲಿ ನೋಡಬಹುದು. ಗೀತೆಯ ಗೇಯತೆ - ಸುಕುಮಾರತೆಯ ಬದಿಯಲ್ಲೇ ದಟ್ಟವಾದ, ಆದರೆ ಕೋಮಲವಾದ ಭಾವತೀವ್ರತೆ ಇಲ್ಲಿನ ಪದ್ಯಗಳಿಗೊಂದು ಕಾವ್ಯಾತ್ಮಕ ಮಹತ್ವವನ್ನು ತಂದುಕೊಟ್ಟಿದೆ.

ಮುಪ್ಪಿನ ಷಡಕ್ಷರಿಗಳ ಪದ್ಯಗಳಂತೆ ಭಾವಪೂರ್ಣವಾಗಿ ಹಾಡುವಂಥ ಗೇಯ ರಚನೆಗಳಿವು ಎನ್ನಿಸದಿರಬಹುದು. ಆದರೆ ಮಾತಿಗೆ ಮೀರಿದ, ತಾತ್ವಿಕ ತೂಕದ, ಹೊಳೆವ ಸ್ಫಟಿಕ ಮಣಿಗಳಂತಿವೆ ಈ ಕೃತಿಯ ಭಾವ ಸೊಡರುಗಳು.

ಜಿಜ್ಞಾಸುಗಳಿಗೆ, ಮುಮುಕ್ಷುಗಳಿಗೆ ಹಾಗೂ ಪರತತ್ವ ಸಾಧಕ-ಚಿಂತಕರಿಗೆ ನಿಜಗುಣರ "ಕೈವಲ್ಯ ಪದ್ಧತಿ" ನಿಜ ಚಿಂತಾಮಣಿ. "ಕೃತಿಯಲ್ಲಿ ಶಾಸ್ತ್ರದ ಗಾಂಭೀರ್ಯ, ಸಂಗೀತದ ಮಾಧುರ್ಯ ಮತ್ತು ಸಾಹಿತ್ಯದ ಸೌಂದರ್ಯ - ಇವು ಮೂರೂ ಮುಪ್ಪುರಿಗೊಂಡಿವೆ" ಎಂಬ ವಿಮರ್ಶಕರ ಅನಿಸಿಕೆ ಸಾಧುವಾದದ್ದೆ. ನಿರ್ವಿಕಾರ ಪರಮಸುಖಪ್ರಾಪ್ತಿಗೊಂದು ಯಾನಸಾಧನ ಈ ಗ್ರಂಥ. ಪ್ರಸ್ತಾಪಿತ ವಿಷಯದ ದರ್ಶನ ಗಾಂಭೀರ್ಯ ಎಲ್ಲೂ ಶಿಥಿಲವಾಗದ ಅಪೂರ್ವ ಅಭಿವ್ಯಕ್ತಿ ಕೌಶಲ ಈ ಕೃತಿಯ ವಿಶಿಷ್ಟತೆ. ಕ್ಲಿಷ್ಟ ಪರಮಾರ್ಥ ಸಂಗತಿಗಳನ್ನು, ಸಂದಿಗ್ಧತೆ ಅಥವಾ ಸಂಕೀರ್ಣತೆಗೆ ಅವಕಾಶ ಕೊಡದೆ, ಮನಮುಟ್ಟುವಂತೆ ಸ್ಪಷ್ಟವಾಗಿ ನಿರೂಪಿಸಿರುವುದು ಕೃತಿಯ ಮೌಲ್ಯವನ್ನು ಬಹುವಾಗಿ ಹೆಚ್ಚಿಸಿದೆ.

***

ಶ್ರೀಗುರು ವಚನೋಪದೇಶವನ್ನು ತದೇಕಚಿತ್ತದಿಂದ, ಶ್ರದ್ಧೆಯಿಂದ ಆಲಿಸಿದಾಗ ನರರಿಗೆ ಮುಕುತಿ. ಈ ವಚನೋಪದೇಶ ಏತಕ್ಕಾಗಿ? ಭಗವಂತನ ಸಾಕ್ಷಾತ್ಕಾರಕ್ಕಾಗಿ; ಗುರು ಶಂಭುಲಿಂಗನ ದಿವ್ಯಪಾದದರ್ಶನಕ್ಕಾಗಿ. ಹರನಾಮವನ್ನು ಬಿಡದೆ ಜಪಿಸಬಲ್ಲವರಿಗೆ ವರಭೋಗ ಮೋಕ್ಷ; ಭವಮರಣ, ಮಾಯಾಕರ್ಮ, ಮಲಪಾಶಬಂಧ, ಬಹುದುರಿತ ಸಂಸಾರ ಸಂತಾಪ ಸಂಚಯನಾಶ. ಆದ್ದರಿಂದ ಸುಗುಣ ಮಣಿಹಾರ, ಸಕಲ ಚರಾಚರಜೀವರಾಧಾರ, ವಿಕಸಿತ ಹೃದಯನಳಿನ

ಹಂಸಾಕಾರ, ಅಕಳಂಕಮಹಿಮನ ಕರುಣೆಗಾಗಿ ಜೀವ ಸ್ತುತಿಸುತ್ತದೆ.

ಶಿವಕಾರುಣ್ಯ ಸ್ಥಲದಲ್ಲಿ ಮಾರಮರ್ದನ ಶಂಭುವಿನ ಕೃಪಾಕಟಾಕ್ಷಕ್ಕಾಗಿ ಮೊರೆಯಿಡುವ ಅನೇಕ ಸುಂದರ ಪದ್ಯಗಳಿವೆ :

" ಶರಣಬಂಧು ಶಂಕರ ಕೃಪಾಸಿಂಧು ಸದ್ಗುರು ಶಂಭುಲಿಂಗ
ನಿನ್ನಡಿವಿಡಿದೆ. ಬಿಡದೆ ಸಲಹಯ್ಯ. "

" ನೋಡು ನೀನೆನ್ನ ಪರಿಭವದ ಬಾಧೆಯನು
ಕೃಪೆಮಾಡು ಬೇಗದೊಳಭಯವಿತ್ತು ಶಂಕರ. "

" ಒಡಲು ನೊಂದು ಮತಿಗಾರುವಡುತಿದೆ.
ಕೃಪೆದೋರೆನಗೆ.
ಗತಿಗೆಟ್ಟು ಮನ ಧಾವ್ಯಶಿವಗೊಳುತಲಿದೆ,
ಜೀವ ಗಾಸಿಯಾಗುತಿದೆ.
ನೋಡಿ ಲೇಸನೀವುದೆನಗೆ. "

" ಹರಿವಿರಿಂಚಿ ಸುರೇಂದ್ರವಂದಿತ ಪದಸರೋಜ
ಶರಣ ಜನ ಸಂದೋಹ ಕಾಮಿತ ಕಲ್ಪಭೂಜ, ದಿವ್ಯತೇಜ
ಎನ್ನನೆ ಪಾಲಿಸು ಸನ್ನುತ ಗುಣಮಣಿಗಣ ಸೂತ್ರ. "

" ಜವನದೂತರ ದಾಳಿಯಿಂದ ಅತಿ ಭಯ ಎನಗೆ.
ಸನ್ನುತಾಗಮ ನಿಗಮ, ಎನ್ನ ಒಲವಿಂದ ಪಾಲಿಸು. "

" ತನುಮೋಹದಖಿಳೇಂದ್ರಿಯದ ಪರಿತಾಪ,
ಧನದಾಶೆ ಸುಜನರ ನಿಂದೆಯಾಲಾಪ
ವನಿತಾಭಿರತಿ ಲೋಕಗತಿಯವಲೇಪ
ಮನವಿಡಿದಳಲುವೆನ್ನನು
ಕಾಯೋ ಸುಖಸಾರ ನೀನುಪಕಾರ
ಮಾಯಾವಿದೂರ ಬಿಡದೆನ್ನ ಗುಣಮಣಿಹಾರ. "

ಬಿಡಲಾರದ ವಿಷಯಗಳಿಗೀ ಮನ ಎಡೆಮಾಡುತಿದೆ ಅನವರತ. ಈ ಮತಿಗೆ ಅನುರಾಗವನಿತ್ತು ಅಭಯಂಗೊಡು. ಶಿಶುವಿನ ದುರುಳತೆಯನ್ನು ಸೈರಿಸಿ ಪಿತ ಮುದ್ದಿಸಿ ಲಾಲಿಸುವಂತೆ ಮನ್ನಿಸು. ಎನಗೊಲಿದು ಸಲಹು. ಮಾಡಿದಪರಾಧಕೋಟಿಯನು ಮರೆ. ಶರಣುಹೊಕ್ಕೆನು ನಾನು; ಪೊರೆ.

- ಹೀಗೆ ಶಂಭುಲಿಂಗನನ್ನು ಪರಿಪರಿಯಾಗಿ ಬೇಡುವ, ಸ್ತುತಿಸುವ ಗುಣಗಾನದ ಪದ್ಯಗಳು ಇಲ್ಲಿವೆ.

ಮನುಜರ ಬಾಧೆಗಳಂತ. ಮಾಯಾಕರ್ಮ, ಕಾಯಕರಣ, ವಾಯುವಿಷಯೇಂದ್ರಿಯದ ಬಾಧೆ ; ಜನನಮರಣ, ತಾಪಸಮುದಾಯದತಿ ಬಾಧೆ ; ಹಸಿವುತೃಷೆ, ಕುಸುಮಬಾಣನ



ಬಾಧೆ. ಮದಶೋಕ ಮೋಹರತಿ ಬಾಧೆ ; ತನುಧನವನಿತಾದಿಯಲ್ಲಿ ಅಭಿರತಿ. ಬೇರೆಬೇರಿನ್ನು ಮೈದೋರಿ ಕಾಡುವ ಬಾಧೆ ಈ ತೆರದಿ ನೂರು ಸಾಸಿರ ಕೋಟಿ.

ಹೀಗಿರುವಾಗ, ಮಾಡುವುದಾದರೂ ಏನನ್ನು? ಮಾಡಬೇಕಾದದ್ದಾದರೂ ಏನು ? ನಿಜಗುಣರದೇ ಉತ್ತರ ಇಂತು :

ಉದಯಕಾಲದೊಳೆದ್ದು ವಿನುತ ಗುರುಮೂರ್ತಿ ಉಮೇಶನ ಅಂಘ್ರಿಯನ್ನು ನೆನೆ. ಆಗ ನಿನಗೆ ಮುಕ್ತಿ. ಕಾಯವಿರೋಧಿ ಗುರುಶಂಭುಲಿಂಗವನ್ನು ಒಲಿಸಿ, ಮಾಯೆಯನ್ನು ಮೀರಿ ಭವದಾಸೆಪಾಶವನ್ನು ಗೆಲ್ಲುವ ಮನಸ್ಸು ಮಾಡು. ಜನನ ಮರಣ ರುಜೆ ಭಯ ಶೋಕ ಜರೆ ಬಡತನ ಪರಸೇವೆ, ಮುನಿಸು ವಿಷಯರತಿ ವಿರಹಸಂತಾಪ ಚಿಂತೆಗಳನತ್ತ ದೂಡು. ಈ ದುಃಖಗಳನ್ನೇಕೆ ಅವಿರತವಾಗಿ ಅನುಭವಿಸಲಿಚ್ಛಿಸುತ್ತಿರವೆ ? ನಿನಗಿನ್ನು ಸವೆಯದಾನಂದ ಕಾದಿದೆ. ಅದು ಶಂಭುಲಿಂಗದ ಸುವಿಚಾರಭಜನೆ ಭಕ್ತಿ. ಮರಳಿ ನೀನತ್ತ ತಿರುಗುವ ಮುನ್ನ ನಿನ್ನ ನೀ ಅರಿಯುವತ್ತ ಗಮನಕೊಡು.

" ಸುಮ್ಮನೆ ಕಾಲವನು ಕಳೆದು ಸಾವುದುಚಿತವೆ
ನೆಮ್ಮಿ ನಿಜವನು ಮುಕ್ತಿ ಪಡೆಯದೆ ಮನುಜ ? "

ಪರಿಭವ ದುಃಖಸಮುದ್ರವ ನೆನೆನೆನೆದು ಜರ್ಜರಿತವಾದ ಮನಸ್ಸು ಶಂಭುಲಿಂಗದಲ್ಲಿ ಮೊರೆಯಿಡುವಂತಹ ಬಿನ್ನಹ ಮೇಲಿನ ಈ ಬಗೆಯ ಅನೇಕ ಪದ್ಯಗಳಲ್ಲಿ ಮೂರ್ತಿವೆತ್ತಿದೆ.

ಮರುಳುಗೊಳಿಸುವ ಕಂತುವಿನ ಕಾಟದ ಯವ್ವನ ಒಂದೆಡೆಯಾದರೆ, ನುಡಿಯಬಾರದ ಲಜ್ಜೆತರುವ ಮುಪ್ಪು ಇನ್ನೊಂದೆಡೆ. ಕೊನೆಗೆ ಬಾಧೆಗೊಳಿಪ ಮರಣವನ್ನು ಜಡಿವ ಯಮಭಟರ ಕೋಪ. ಭವಭವದೊಳು ಎಡೆಬಿಡದೆ ಕಾಡುವ ಘೋರಸಂಸಾರ ತಾಪ. ಇದನ್ನೆಲ್ಲ ಎಳೆಎಳೆಯಾಗಿ ಬಿಂಬಿಸುವ ಅನೇಕ ಪದ್ಯಗಳು ಈ ಸಂಕಲನದಲ್ಲಿವೆ.

ಕಾಯದ ಮೋಹದ ಈ ನೆಲೆಯಲ್ಲಿ ಇನ್ನೆಂದಿಗೆ ಪರಮಮುಕ್ತಿಸುಖ ?

"ಕಂಡು ಕೇಳಿ ಮತ್ತೆ ಮೋಹಿಪರೆ ಬಲ್ಲವರು ?" ಇದು ಈ ಶತಮಾನದ ಜನರ ಕತೆಯಷ್ಟೇ ಅಲ್ಲ. ಬಲಿ ವಾಲಿ ಕರ್ಣ ರಾಮ ರಾವಣ ಕೀಚಕ ಶಿಶುಪಾಲ ದಶರಥರೊಳಗಾದ ಅನೇಕರ ಹಾನಿಕತೆ ಇದು. "ಸೊಡರಿನ ಸುಡುವ ತನುವನರಿಯದೆ ಬಂದು ಕೆಡುವ ಪುಳುವಿನವೋಲಖಿಳ ವಸ್ತುಗಳ ಕೆಡುವ ದೋಷ" ಇದು. ಮಾಡಲುಚಿತವೆ ? ಎಂಬ ಪ್ರಶ್ನೆಯನ್ನು ನಿಜಗುಣರು ಮುಂದಿಡುತ್ತಾರೆ.

ಓ ದೇವರೆ, ಸುವಿಚಾರವಿಲ್ಲವೇಕೆ ನಿನ್ನಲ್ಲಿ ?

ಸಾರವಸ್ತುವನ್ನು ಬಿಸುಟು, ಬೇಡದುದನ್ನೇಕೆ ನೀ ಒಲಿಯುತಲಿರುವೆ ?

ನಿನಗೆ ಕಂಪಿನ ಪರಿಮಳ ಬೇಡ ; ಸುಡುಗಾಡ ಬೂದಿ ನಿನ್ನ ಮೈಗೆ. ಯಾವ ಚೆಂದದ

ಅಲಂಕಾರ ಬೇಡ ; ಹಾವುಗಳನ್ನು ಕೊಂಡಾಡಿ ತೊಟ್ಟಿರುವೆ. ತೋರಹಾರ ಬೇಡ ; ಮಂಡೆಮಾಲೆ ಗಂಗವಿತ್ತಿರುವೆ ಸಂತಸದಿಂದ. ಮಂಗಳ ದುಕೂಲವನ್ನು ಹೊದೆಯದೆ, ಚರ್ಮವನ್ನು ಧರಿಸಿರುವೆ. ವಾರಣಾದಿ ವಾಹನಗಳನ್ನು ಅಗಲಿ ಬಿಡದೆ ಎತ್ತನ್ನು ಏರಿರುವೆ. ಭೂರಿವಿಶ್ವವಲ್ಲಭನಾಗಿ ತಿರಿದು ತಿನ್ನುವ ಬಾಳ್ವೆ ನಿನ್ನದು. ಎತ್ತ ನೋಡಿದರತ್ತ ಪೈಶಾಚವೃಂದ. ಹೇಮಾದ್ರಿವಾಸ ನಿನಗೆ ಬೇಕಿಲ್ಲ; ಪ್ರೇತಭೂಮಿಯಲ್ಲಿ ವಾಸ. ಒಂದರಲ್ಲೂ ಮೋಹವಿಲ್ಲದವನು ನೀನು.

ಇಷ್ಟೆಲ್ಲ ನಿಂದಿಸಿ ಕೊನೆಯಲ್ಲಿ " ನೀನು ನಮಗೆ ಸುರಸಮೂಹದಿಷ್ಟ ಸಿದ್ಧಿ ಮಾಡು, ದೇವರೆ !" ಎನ್ನುವ ಶರಣಾಗತ ಮನೋಭಾವ. ಮತ್ತೆ, ಹಂಗಿಸುವ ಧಾಟಿಯಲ್ಲೇ -

" ನಿನ್ನದಾವ ಬಲ್ಲತನ? ನೋಡು. " ಹಿತ-ಅಹಿತವೆಂಬೆರಡನ್ನೂ ನೀನೆ ನೇಮಿಸಿದೆ ಏಕೆ?

ಕಡುಚೆಲುವಿನ ಜೊತೆಗೆ ಮುಪ್ಪು. ಭೋಗದೊಂದಿಗೆ ರೋಗ. ಅಖಿಲ ವಿದ್ಯೆಯ ಕೂಡ ದಾರಿದ್ರ್ಯ. ಪೊಡವಿಗಧಿಕ ಸಂಪದದ ಬದಿಯಲ್ಲೆ ಲೋಭ. ಪರಿತೋಷದಂತೆ ವಿತ್ತದ ಅಳಿಯದಾಸೆ. ಪರತರ ಶಮೆಯೊಂದಿಗೇ ನೀರೆಯರ ವಿಲಾಸ. ಸೊಗಸಿನ ಜೀವನಕ್ಕಂಟಿದಂತೆ ಮರಣ. ವಿರತಿ ಅರಿವಿನ ಪಕ್ಕದಲ್ಲಿ ಅಹಂಕಾರ. ಮನುಜತ್ವ ಕೊಟ್ಟು ಮುಕ್ತಿಯೊಲವಿನಿಂದ ವಿಮುಖತೆ. ತನುದಂಡನೆ ಹೇಗೋ ಹಾಗೆ ಚಿತ್ತದಲಿ ಕಾಮ. ಮುನಿವರ್ತನೆಯನ್ನೂ ನೀಡಿ ಲೋಕದ ರಂಜನೆಯತ್ತ ಮನ ವಾಲಿಸಿದೆ. ಏಕೆ ಹೀಗೆ, ಶಂಕರ?

ಇಂತಹ ಕೋಪತಾಪದ ಆರ್ಭಟದ ಮುಂದುವರಿಕೆ. ನಿಂದಾಸ್ತುತಿಗೊಂದು ಚೆಂದದ ಕವಿತೆ ಇದು.

***

"ಕೋಗಿಲೆ ಚೆಲ್ವಕೋಗಿಲೆ ಮುದ್ದುಕೋಗಿಲೆ ಜಾಣಕೋಗಿಲೆ"

- ನಿಜಗುಣರ ಒಂದು ಸುಂದರ ಪದ್ಯ. ಜೀವನಿಗೆ, ಮನುಜಮತಿಗೆ ತುಂಬ ಪ್ರೀತಿಯಿಂದ ಹಿತವಚನ ಹೇಳುವುದು ಈ ಕವಿತೆಯ ಆಶಯ.

"ಮನ್ಮಥನ ಒಡನಾಟ ನಿನಗೆ ಸಲ್ಲದು. ಇವನನ್ನು ಬಿಟ್ಟು ದೂರ ಬಂದು ಬಿಡು. ಬಾಲೇಂದುಧರನ ಕೂಡಿ ಕುಂದದೆ ನೀ ಬಾಳು, ಓ ಕೋಗಿಲೆ, " ಎನ್ನುತ್ತಾನೆ ಕವಿ. ಈ ದುಷ್ಟ ಮನಸಿಜನಾದರೋ ಮನುಮುನಿಗಳ ನೀತಿಯನ್ನು ಕೆಡಿಸುವ ದುಷ್ಟ. ಇಂಥವನ ಸಹವಾಸ ಬಿಟ್ಟು, ನೆನದವರಿಗೆ ಘನಪದವನ್ನು ನೀಡುವ ಈಶನ ಗುಣಗಾನ ಮಾಡೆಂದು ಕವಿಯ ಸಲಹೆ ಈ ಕೋಗಿಲೆಗೆ.

ಈ ಕುಸುಮಬಾಣನೋ ನಲ್ಲರನ್ನು ಅಗಲಿದ ಮೆಲ್ಲೆದೆಯವರನ್ನು ನಿಷ್ಕರುಣೆಯಿಂದ ಕೊಲ್ಲುವಂತಹವನು. ಇವನೊಂದಿಗೆ ಎಂಥ ಸ್ನೇಹ ನಿನಗೆ? ಎಲ್ಲ ಜೀವರಿಗೆ ಅನುಪಮ



ಒಲವನ್ನು ದಯಪಾಲಿಸುವ ಕರುಣಾನಿಧಿಯನ್ನು ಮರೆಯದೆ ಇತ್ತ ಹಾರಿಬಂದುಬಿಡು, ಓ ಕೋಗಿಲೆ !

ಏನು ವಿಚಿತ್ರ ಗುಣ ನಿನ್ನದು, ಕೋಗಿಲೆ ! ನಿನ್ನ ಸುಮಧುರ ಕಂಠವನ್ನು ಈ ಅನಂಗನ ಬಣ್ಣನೆಗೆ ಭಂಗಪಡಿಸಿಕೊಳ್ಳುತ್ತಿರುವೆಯಲ್ಲಾ, ಇದು ಸರಿಯೆ ? ನೋಡು ಕೋಗಿಲೆ, ಹಾಡುವುದಾದರೆ ನೀನು ಕಂಗೊಳಿಸುವ ಸರ್ವಮಂಗಳೆ ಅರಸನನ್ನು ಕುರಿತು ಪಾಡು.

ಈ ದುರುಳ ಮನ್ಮಥನೊಡನೆ ನೀನಿದ್ದರೆ, ಲೋಕದಲ್ಲಿ ಮಂದಿ ನಿನ್ನನ್ನು ಪರಪುಟ್ಟನೆನ್ನುವರು. ಬಿಡು ಬಿಡು ಇವನ ಸಂಗವನ್ನು. ಧರೆಗೆ ಜನಕ ನಮ್ಮ ಗುರುಶಂಭುಲಿಂಗ. ನಿರುಪಮನಿತ್ಯಜಗದಂತರ್ಯಾಮಿ. ಪರಮ ಪಾವನ ದಯಾಸಿಂಧು. ಸುಗುಣ ಮಣಿಹಾರ. ಶರಣ ಜನರ ಭವರುಜೆಗಾದಿವೈದ್ಯ. ಸಕಲ ಚರಾಚರ ಜೀವರಾಧಾರ. ಇಂಥ ದಿವ್ಯತೇಜನ ಚರಣಪಲ್ಲವವನ್ನು ಹಿಡಿಯದೆ, ನಿನ್ನ ಮಧುರ ಇಂಚರವನ್ನು ಹದಗೆಡಿಸಿಕೊಳ್ಳುತ್ತಿರುವೆಯಲ್ಲಾ, ಇದು ಸಾಧುವೆ ?

ಓ ನನ್ನ ಚೆಲುವಿನ ಕೋಗಿಲೆ, ಮುದ್ದಿನ ಜಾಣ ಕೋಗಿಲೆ -

ಬಾ, ಬಾ ಗುರುಶಂಭುಲಿಂಗನ ಪಾದಾರವಿಂದದತ್ತ ಬಂದು ನಲಿ.

ಬಾಳಿನಲ್ಲಿ ವಿಷಯ ಸಂಗಕ್ಕೆ ಮನಸೋತ ಮನುಜರನ್ನು ಕೋಗಿಲೆಯೆಂದು ಭಾವಿಸುತ್ತಾ, ಬುದ್ಧಿವಾದವನ್ನು ತುಂಬ ಮಾರ್ಮಿಕವಾಗಿ, ಸಹಜ ರೀತಿಯಲ್ಲಿ ಮನಮುಟ್ಟುವಂತೆ ತಿಳಿಸುವ ಕವಿತೆ ಇದು. ನಿಜಗುಣರ 'ಕೈವಲ್ಯ ಪದ್ಧತಿ'ಯಲ್ಲೊಂದು ಸುರದ್ರುಮದ ಕಂಪಿನ ಕುಸುಮದಂತೆ, ವೀಣಾ ನಿನಾದದ ಮಧುರ ಝೇಂಕೃತಿಯಂತೆ ಈ ಗೀತೆ ಕಂಗೊಳಿಸುತ್ತದೆ.

'ಮನವೆಂಬ ಗಿಳಿಯನೊಯ್ಯಾರದಿಂದೋವಿ ಮೆಲ್ಲನೆ ಮುದ್ದುನುಡಿಗಲಿಸೆಲೆ ಮಾನಿನಿ', 'ಸತಿಪತಿಗಳಿವರ ಸಮರತಿಸುಖದ ಬಾಳುವೆಗೆ ಪ್ರತಿಯುಂಟೆ ಲೋಕದೊಳು ನೋಡೆ ಲಲಿತಾಂಗಿ' ಮುಂತಾದ ಪದ್ಯಗಳಲ್ಲಿ ಸುಮಧುರ ಭಾವದ ಸೊಗಸು ಹರಳುಗಟ್ಟಿ ನಿಂತಿದೆ. ಮಾಮರದ ಮೇಲಿನ ಕೋಗಿಲೆಯ ವಸಂತಗಾನವಿದೆ; ಕಿಂಕಿಣಿಯ ಮೆಲ್ಲುಲಿಯ ವೀಣೆಯ ಇಂಚರವಿದೆ. "ಪತಿ ಶಂಭುಲಿಂಗ ಶರಣಸತಿಯ ಕೂಡಿ ಪರತರಾನಂದದೊಳು ಪರವಶವನೈದಿಹು-ದನುಪಮಿಸಲುಬಹುದೆ ?"

ಅಲ್ಪಸುಖಕ್ಕೆ, ಬರಿಯ ರಂಜನೆಗೆ, ಸತಿರತಿಗಾಗಿ ಏಕಿಷ್ಟು ಕಷ್ಟಪಡುವೆ? "ಕೆಮ್ಮನೆ ಸಾವ ಬಲುಗೇಡನಿದನು ಮರೆದು ತನುಮನಗಳನು ನೋಯಿಸದೆ, ಶಂಭುಲಿಂಗದ ಘನಸುಪದವನೊಲಿಸು" - ಎನ್ನುವ ಹಿತನುಡಿ ಪದೇಪದೇ ಇಲ್ಲಿನ ಪದ್ಯಗಳಲ್ಲಿ ಅನುರಣಿತವಾಗುತ್ತದೆ.

***

ಜೀವಸಂಬೋಧನಾಸ್ಥಲದ ಪದ್ಯಗಳಲ್ಲಿ ಕಾಮಾದಿಗಳನ್ನು ಜಯಿಸುವ ಅಗತ್ಯವನ್ನು ಒತ್ತಿ ಹೇಳಲಾಗಿದೆ. ವನಿತೆಯರ ಸವಿನುಡಿ, ಸೊಬಗು, ನವರೂಪ, ಜವ್ವನ ಇವೆಲ್ಲ ಸುಳಿಗಾಳಿ, ಸುರಚಾಪ, ನೀರಿನ ಲಿಪಿ ಹಾಗೂ ಹೊಳೆವ ಮಿಂಚಿನಂತೆ. ಹೆಂಗಳೆಯರ ನುಣ್ದೊಡೆ, ನಿತಂಬ, ಬಳುಕುವ ನಡು, ಬಣ್ಣದ ಮೈ, ಮುದ್ದುಮೊಗ, ಚೆಂದುಟಿ, ಮುಗುಳ್ನಗೆ ಹಾಗೂ ಹಾವಭಾವ - ಇವುಗಳಿಗೆ ಸೋಲದಾತನೆ ವಿರತ. ಅಳಿ, ಮೀನು, ಗಜ, ಪತಂಗ, ಜಿಂಕೆ - ಇವು ತಮ್ಮ ಒಂದೊಂದು ಇಂದ್ರಿಯದಿಂದ ಕೆಡುತ್ತವೆ. ಐದು ಇಂದ್ರಿಯಗಳ ಗುಣವೆಲ್ಲ ಮೇಳೈಸಿರುವ ಮನುಷ್ಯನ ಗತಿ ಏನು ? ಈ ಯವ್ವನದಿಂಪಾದರೋ ವಿಷಯಸುಖ ದುಃಖದ ನೆಲೆ ಹಾಗೂ ಮಾಯಾಮಯ ಭೋಗ. ಈ ಹಿನ್ನೆಲೆಯಲ್ಲಿ ಜಾಗೃತ ಜೀವಕ್ಕೊಂದು ಕಿವಿಮಾತು :

" ಯಾಕೆ ವಿರತಿಯನುಳಿದು ಹೀನವಿಷಯವನೊಲಿವೆ
ಕಾಕು ಮಾನಸವೆ ನಿನಗದರೊಳೇನುಂಟು ?"

" ಬೇಡ ಬೇಡೆಲೆ ಮನವೆ ವಿಷಯದಾಸೆ
ಮಾಡಿ ಕೆಡದಿರು ಸಾರಿದೆ. "

***

ಹೀಗೆ, ಸಮರ್ಪಣಾ ಭಕ್ತಿಭಾವದಿಂದ ಶಿವಕಾರುಣ್ಯಕ್ಕಾಗಿ ತುಡಿಯುವ ಜೀವಕ್ಕೆ ಕಾಮರೂಪಿ ಪ್ರಲೋಭನೆಗಳ ಪರಿಚಯ ಮಾಡಿಕೊಟ್ಟ ನಂತರ, ನೀತಿ ಕ್ರಿಯಾಚರ್ಯಸ್ಥಲದ ಪದ್ಯಗಳಲ್ಲಿ ಎಡರಿಗೆ ಅಂಜದ, ಸಂಪದಕ್ಕೆ ಮೆರೆಯದ ತತ್ವಗಳನ್ನು ಸೂತ್ರೀಕರಿಸಲಾಗಿದೆ.

ಲೋಭ ಅಪವಾದಗಳಿಂದ ಅಭಿಮಾನದ ಕೊರತೆ. ಮಮಕಾರದಿಂದ ಬಂಧನ, ತಪ್ಪು ನಡೆಯಿಂದ ಸಂಕಷ್ಟ. ಆದರೆ, ಕರುಣೆಯಿಂದ ಧರ್ಮ, ವಿರತಿಯಿಂದ ಸುಖಸಂಪದ. ಶಮೆಯಿಂದ ಮುಕ್ತಿಸಾಧನೆ, ವಿಮಲಮಾನಸದಿಂದ ಶುಭತೀರ್ಥ.

ಅನ್ಯರ ವಿತ್ತಾಪ, ಪರವಧುವಿನ ಕೂಟ, ಹಿಂಸೆ, ಸುಳ್ಳು, ನಿಷ್ಠುರತ್ವ ಮೊದಲಾದ ದೋಷಗಳಿದ್ದಲ್ಲಿ, ಶಂಭುಲಿಂಗ ಒಲಿವುದಾದರೂ ಹೇಗೆ ? ರಾಗ ಭವಬೀಜವಾದರೆ, ಶ್ರೀಗುರುವಚನ ಅಮೃತೋಪಮ ತವನಿಧಿ. ಎಲ್ಲಿ ಮದಲೋಭ, ಕಡುಶೋಕ, ನಿರ್ದಯೆ, ಮಾತ್ಸರ್ಯ, ಕದನಕರ್ಕಶ ವೃತ್ತಿ, ಪರಯುವತಿಯರೊಲುಮೆ ಇದೆಯೋ, ಅಲ್ಲಿ ಮಮತೆ, ಸಮರತಿಗಳಿರದು. ಅಲ್ಲಿ ಚಿಂತೆ ಅಡಿಗಡಿಗೆ ಬಂದು ಮಸುಕುತ್ತದೆ. ಕರುಣೆ ವಿನಯ ತಪ ವಿರತಿ ವಿವೇಕ ದಯೆ ಧರ್ಮ ಧೈರ್ಯ ನಿರಭಿಮಾನತೆ ಸತ್ಯ ಮೊದಲಾದ ಸಾತ್ವಿಕ ಗುಣಗಳು ತಲೆ ಎತ್ತಿ ನಿಲ್ಲುವುದಾದರೂ ಹೇಗೆ? ಚಪಲ ಚಿತ್ತದಲ್ಲಿ ದೇವನ ನೆನಹು ಎಂತಾದೀತು? ಶಂಭುಲಿಂಗನ ಒಲುಮೆಯೇ ಭೂರಿ ಪುಣ್ಯದ ಸುಕೃತ ಫಲ. ದೈವಾನುಕೂಲದಿಂದ ಮಾತ್ರ ಲೋಕಹಿತ ಕೀರ್ತಿ, ಪರಮಾನಂದ ಸಿದ್ಧಿ.

ಇನ್ನೊಂದು ತಾತ್ವಿಕ ಪದ್ಯದಲ್ಲಿ ಒಳಿತಾವುದು, ಕೇಡಾವುದು ಎಂಬುದನ್ನು ಪ್ರಶ್ನೋತ್ತರ



ರೂಪದಲ್ಲಿ ನಿಜಗುಣರು ಪಟ್ಟಿ ಮಾಡುತ್ತಾ ಹೋಗುತ್ತಾರೆ. ದುರಿತದೊಳಗಧಿಕ ಯಾವುದು? … ನಿಂದೆ. ಜೀವನವೆರಸಿದ ಮರಣ ಯಾವುದು ? … ಚಿಂತೆ. ಜಾಗರಣ ಯಾವುದು ? … ಸದ್ವಿವೇಕ. ಶಶಿಯ ಶೀತಲದಂದ ಯಾವುದು ? … ಶಮೆ. ಸುಧಾರಸಧಾರೆ ಯಾವುದು ? … ಮೃದುವಚನ. ವೀರ ಯಾವುದು? … ಕಂತುವಿಜಯ. ಇಳೆಯಲ್ಲಿ ಗುರುತರವಾದುದು ಯಾವುದು ? … ಅಯಾಚನೆ. ಪರತರ ಸುಖ ಯಾವುದು ? .. ಭೋಗವಿರತಿ. ವರಗುಣ ಯಾವುದು ? … ಉದಾರತೆ. ಅಚ್ಚಳಿಯದ ಆಭರಣ ಯಾವುದು ? … ವಿದ್ಯೆ.

ಹೀಗೆ, ಉತ್ತಮಸಂಗ ಮತಿಗೆ ಮಂಗಳವನ್ನು ಇತ್ತರೆ, ಧರ್ಮರತಿಯಿಂದ ಹಿತ; ಶಂಭಲಿಂಗದಿಂದ ಸದ್ಗತಿ. ಆದ್ದರಿಂದ ನಿಜಗುಣರ ವಿನಂತಿ :

" ಬೇಡುವೆನಭವ ನಿಮ್ಮನು ಭವಭವದೊಳು
ಮಾಡೆನಗೊಲಿದು ಸುಗುಣಸಂತತಿಯನಿಂತು. "

ಧರೆಯೊಳತ್ಯಧಿಕವೆನಿಪ ಶಾಂತಿಮತವನ್ನು, ಕರುಣವಿದ್ಯೆಗಳುಳ್ಳ ಗುರುಭಜನೆಯನ್ನು, ಪರತರ ಮುಕುತಿದೋರುವ ಶಾಸ್ತ್ರವನ್ನು, ಕಂತುಹರ ಶಂಭುಲಿಂಗದಡಿಯ ಭಕ್ತಿಯನ್ನು ಕವಿ ಯಾಚಿಸುತ್ತಾನೆ.

ಇಂತಹದೇ ಗುಣಗಳನ್ನು ಕರುಣಿಸೆಂದು ಅವನ ಪ್ರಾರ್ಥನೆ : ಎಡರಡಸಿದ ವೇಳೆಯಲ್ಲಿ ಧೈರ್ಯ, ಸಿರಿ ಬಂದ ಗಳಿಗೆಯಲ್ಲಿ ವಿನಯ, ಕಡು ಜವ್ವನ ಬಂದಾಗ ವಿಕೃತಿ ತಲೆದೋರದಿರುವಿಕೆ, ಪಿಡಿದ ನೇಮದಲ್ಲಿ ಅತ್ಯಂತ ಛಲ; ಪ್ರಾಣ ಹೋಗಲಿ ದೇಹಿ ಎನಲೊಲ್ಲದ ಸಾಹಸ, ಹುಸಿಯನ್ನು ನುಡಿಯದ ಸತ್ಯ, ಪುಣ್ಯಮಯ ಕೀರ್ತಿ; ಕೋಪ ಅಂಟದ ತಪಸ್ಸು, ಪರವಧುವಿನ ರೂಪಕ್ಕೆಳಸದ ಕರಣವಿಜಯ, ತಾಪವಡರಿ ಕೆಡಿಸದ ಸಾರಸುಖ ಹಾಗೂ ಕಾಪಟ್ಯವಿಲ್ಲದ ಧರ್ಮರತಿ.

ನಿಜಭಕ್ತಿ, ಸಹಜಸುಜ್ಞಾನ, ಪರಮ ವೈರಾಗ್ಯ, ಕರ್ಮಕಾಂಡ, ಸುಜ್ಞಾನ ಕಾಂಡ ಹಾಗೂ ಭಕ್ತಿಕಾಂಡಗಳ ಪರಿಭಾಷೆಯನ್ನು ನಾಲ್ಕು ಸಾಲುಗಳ ಚರಣಗಳಲ್ಲಿ ವಸ್ತುನಿಷ್ಠವಾಗಿ, ತರ್ಕಬದ್ಧವಾಗಿ ನಿಜಗುಣರು ತಮ್ಮ ಪದ್ಯಗಳಲ್ಲಿ ವಿವೇಚಿಸಿದ್ದಾರೆ.

ಗುರುದೇವತೆಯೊಳನುರಾಗ ಭಕ್ತಿ; ಚಿದಾನಂದ ಪೂರ್ಣ ತಾನೆಂಬ ನಂಬಿಕೆ ಜ್ಞಾನ; ದೋಷಗಳ ತೊರೆದು, ಮರಳಿ ಮೋಹಿಸದೆ ಶಂಭಲಿಂಗದಂತಿರೆ ವೈರಾಗ್ಯ. ಭೋಗಿಪ ಕರ್ತೃ ತಾನೆಂಬ ಭವಬೀಜದ ಮೋಹವೆ ಕರ್ಮ; ಕರಣಾದಿ ವಿಷಯಕೋಟಲೆಗಳಿಗೆ ತಾನು ಸಾಕ್ಷಿಕನೆಂಬ ವರವಿವೇಕವೆ ಸುಜ್ಞಾನ; ತಾನು ತನ್ನದು ಎನುವ ಭಾವವಳಿದು ಅಭಿಮಾನವಿಲ್ಲದುದೆ ಭಕ್ತಿ. ಇವೆಲ್ಲ ಕೃಪೆದೋರಿ ಒಲಿದಾಗ, ಗುರುದಯಾದಿವಾಕರ ಬೆಳಗುತ್ತಾನೆ; ಅಜ್ಞಾನದ ಅಂಧಕಾರ ಅಡಗುತ್ತದೆ.

ದುಃಖದ ಕಾರ್ಮೋಡಗಳು ದಟ್ಟವಾಗಿ ಮನೋನಭದಲ್ಲಿ ಆವರಿಸಿದಾಗ, "ಚಿಂತಿಸದಿರು.

ಮನುಜ, ನಿನಗಾದ ನೋವಿಗೆ ಚಿಂತಿಸುವರೆ?" ಮುನ್ನಿನವರಿಗಾದ ಬಾಧೆಗಳೇನು ಕಡಿಮೆಯೆ? ಪಿರಿದು ಸಾಹಸಿಗಳಾದ ರಾಮ, ನಳ, ಪಾಂಡವರು ನೋಯಲಿಲ್ಲವೆ? ಸುರಪನಿಗಾದ ಲಜ್ಜೆ, ಪಂಚಶರನಿಗಾದ ಉರಿ, ಇಂದುವಿಗಾದ ಕುಂದು, ವಸಿಷ್ಠನಿಗಾದ ಶೋಕ, ರಾಮಜನಕನಿಗಾದ ಅಸುಭಂಗ, ದಕ್ಷನಿಗಾದ ಕೊರತೆ, ಬಲಿ ಹರಿಶ್ಚಂದ್ರರಿಗಾದ ಪಾಡು, ಸಗರ ಕಾರ್ತವೀರ್ಯರಿಗಾದ ನೋವು - ಇದೆಲ್ಲ ಕಡಿಮೆ ಸಂಕಟವೇನು ?

ವಿಧಿ ಎಂತೆಂಥ ಮಹಾಮಹಿಮರೆಲ್ಲರನ್ನು ರೂಪುಗೆಡಿಸಿದೆ ! ಪರಿಭವಗಳಲ್ಲಿ ಬಳಲಿಸಿದೆ, ಬಾಧೆಗೀಡುಮಾಡಿದೆ! ಸೈರಿಸಿಕೋ. ಘನಶಂಭುಲಿಂಗದ ಅಧೀನನಾಗು. ಆ ಶ್ರೀಪಾದವನ್ನು ನೆನೆದು ಸುಖಿಯಾಗು. ಬಾಳಿಗೆ ಸುಖವೀವ ನಿಜಗುಣರ ತತ್ತ್ವೋಪದೇಶವಿದು.

***

ಮುಂದಿನ ಯೋಗಪ್ರತಿಪಾದನಾಸ್ಥಲದಲ್ಲಿ ಮನದ ವಿಕ್ಷೇಪತಾಪಗಳನ್ನು ನಿವಾರಿಸುವ ಏಕೋಭಾವನೆಯನ್ನು ನಿಜಗುಣರು ಅರುಹಿದ್ದಾರೆ. "ಮಾಡು ಶಿವಲಿಂಗಪೂಜೆಯ ನಂತರಂಗದೊಳು" ಎನ್ನುವ ಪದ್ಯದಲ್ಲಿ ಪೂಜಾವಿಧಾನದ ಸುಖಮಯ ಸಾಧನಗಳ ಅನುಪಮ ಕಲ್ಪನಾಚಿತ್ರವಿದೆ. ಬಾಹ್ಯದಾವರಣದಲ್ಲಷ್ಟೆ ನಿಲ್ಲದೆ, ಒಳಮನದಂಚಿನಲ್ಲಿ ಸೂಕ್ಷ್ಮರೂಪದಲ್ಲಿ ಮಿಂಚಿನ ತನಿವಣ್ಣದಾಕೃತಿಯ ಶಂಭುಲಿಂಗವನ್ನು ಅರ್ಚಿಸುವ ವರ್ಣನೆ ಹೀಗಿದೆ :

ಹರನೆ ಸಕಲಾಧಾರ ಎಂಬುದೆ ಆಸನ. ಅಖಿಲಭರಿತ ಈಶ್ವರನೆಂದು ತಿಳಿವುದೆ ಆಹ್ವಾನ. ಪರಮಶಿವಪದ ಜಗವೆಂಬುದೆ ಪಾದ್ಯ. ಹರುಷವಾರಿಧಿಯಭವ ಎಂಬುದೆ ಅರ್ಘ್ಯ. ಪಾವನಾತ್ಮಕ ಈಶ ಎಂಬುದೆ ಆಚಮನೀಯ. ವಿಮಲ ಶಮೆಯೆಂಬ ಸಲಿಲವೆ ಅಭಿಷೇಕ. ಭಾವಪರಿಪೂರ್ಣತೆಯೆ ವಸ್ತ್ರ. ಅಹಿತಕುಲ ಆವರಿಸದ ವಿದ್ಯೆಯೇ ಯಜ್ಞಸೂತ್ರ. ಮಂಗಳೋದಯವೆ ಅಲಂಕಾರ. ಅನುಭವದ ಸೊಗಸೆ ಲೇಪನ. ಕರುಣೆಯೇ ಅಕ್ಷತೆ. ವಿಷಯವಾಸನೆಯ ವಿಲಯವೆ ಧೂಪ. ಅಗಲದ ಪರಂಜ್ಯೋತಿಯೇ ದೀಪ. ಭೇದವಡಗಿದ ಮತಿಯೆ ನೈವೇದ್ಯ. ಅಸಮರೂಪಾದ ಸತ್ವಾದಿಗುಣವೃತ್ತಿ ತಾಂಬೂಲ. ವಾದನವೆ ಪರನಾದ. ಸೋಹಂಭಾವದ ಆದರಣೆಯ ಇರವೆ ಪ್ರದಕ್ಷಿಣೆ. ಬಹುತತ್ತ್ವವನ್ನು ಮೀರಿದಿರವೇ ನಮಸ್ಕಾರ. ಶಂಭುಲಿಂಗದಲ್ಲಿ ಸಹಜ ಕೈವಲ್ಯ ಪಡೆವುದೆ ವಿಸರ್ಜನ.

ಇಂತಹದೇ ಒಂದು ವಚನದಲ್ಲಿ ಅಕ್ಕ " ಗುರುಪಾದ ತೀರ್ಥವೆ ಮಂಗಳಮಜ್ಜನ, ವಿಭೂತಿಯೆ ಒಳಗುಂದದರಿಷಿಣ, ದಿಗಂಬರವೆ ದಿವ್ಯಾಂಬರ, ಶಿವಭಕ್ತರ ಪಾದರೇಣುವೆ ಅನುಲೇಪನ, ರುದ್ರಾಕ್ಷಿಯೆ ಮೈದೊಡಿಗೆ, ಶರಣರ ಪಾದರಕ್ಷೆಯೆ ತೊಂಡಿಲು ಬಾಸಿಗ " ಎನ್ನುವ ವಿವರಣಾಚಿತ್ರವನ್ನು ಇಲ್ಲಿ ನೆನೆಯಬಹುದು. ಚೆನ್ನಮಲ್ಲಿಕಾರ್ಜುನದೇವನ ನಿಲುವಾದರೂ ಎಂತಹುದು ? ತನು ಕರಗದವರಲ್ಲಿ ಆತ ಮಜ್ಜನವನೊಲ್ಲ. ಮನ ಕರಗದವರಲ್ಲಿ ಪುಷ್ಪವನೊಲ್ಲ. ಹದುಳಿಗದವರಲ್ಲಿ ಗಂಧಾಕ್ಷತೆಯನೊಲ್ಲ. ಅರಿವು ಕಣ್ದೆರೆಯದವರಲ್ಲಿ



ಆರತಿಯನೊಲ್ಲ. ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲ. ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲ. ತ್ರಿಕರಣಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲ. ಹೃದಯ ಕಮಲ ಅರಳದವರಲ್ಲಂತೂ ಅವನು ಖಂಡಿತವಾಗಿ ಇರಲೊಲ್ಲ !

ಯೋಗವೆಂದರೆ ಏನು? ಚಿತ್ತವೃತ್ತಿನಿರೋಧ. ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ ಮತ್ತು ಶಿವಯೋಗಗಳಡಿಯಲ್ಲಿ ಮನದ ಚಾಂಚಲ್ಯ ನಿವಾರಣೆಗೆ ಅಗತ್ಯವಾದ ಸಂಗತಿಗಳನ್ನು ವಿಸ್ತಾರವಾಗಿ ಚರ್ಚಿಸಲಾಗಿದೆ.

ಈ ಯೋಗಿ ನಿಜಸುಖದ ಅಂಬುಧಿ, ಸಕಲವಿದ್ಯಾಗುಣ ನಿವಾಸ. ಶಾಸ್ತ್ರನಿಗಮಾಗಮ ಪುರಾಣ ದರುಶನ ಮತಾದಿಗಳು ಕಾಣದೆ ಅರಸುವ ತತ್ತ್ವವನ್ನು ಕಣ್ಣಾರೆ ಕಾಣಿಸುವ ನಿರಾಭಾರಿ ದೇಶಿಕವರೇಣ್ಯ.

ಯೋಗಿಗೆ ಸಕಲ ಸಂಸಾರಸಂಗವಿಲ್ಲವೆಂದು ತಿಳಿಯುವುದು ಸುಳ್ಳು - ಎನ್ನುವ ಪದ್ಯವೊಂದಿದೆ. ಆದರೆ, ಈ ಮಾತಿನ ಅರ್ಥ ಬೇರೆ. ಸಕಲ ಗುಣಾತಿಶಯಗಳನ್ನು ಸಂಸಾರದ, ಕುಟುಂಬದ ವ್ಯಕ್ತಿಗಳೊಂದಿಗೆ ಹೋಲಿಸುವ ಮೂಲಕ ಯೋಗಿಯ ಮಹಾತ್ಮೆಯನ್ನು, ಗುರುತನವನ್ನು ವರ್ಣಿಸುವುದು ಕವಿಯ ಮನದಾಂತರ್ಯ.

ವರವಿದ್ಯೆ ವನಿತೆಯಾದರೆ, ಪರಿತೋಷ ಪ್ರೀತಿಪಾತ್ರ ಪುತ್ರ; ವಿರತಿ ಅನುಕೂಲಜನವಾದರೆ, ಕ್ಷಮೆಯೇ ಚರ, ಶಾಂತಿಯೇ ಸುಖ. ಭಕ್ತಿ ಮಾತೆಯಾದರೆ, ಸುಚರಿತನೇ ಪಿತ. ಸತ್ಯವೇ ಕುವರಿ ; ನಂಬುಗೆಯೆ ಆಪ್ತರು. ಅಹಿಂಸೆ ದಾಸಿ, ಅಸ್ತೇಯ ದಾಸ. ಮೈತ್ರಿಯೆ ಪೌತ್ರರಾದರೆ, ಮತಿಯೇ ಗೇಹ; ಆಚಾರವೇ ಕ್ಷೇತ್ರ, ಮುಕ್ತಿ ಎಂಬುದೇ ದೇಶ.

ಈ ಸ್ಥಲದಲ್ಲಿರುವ ಪದ್ಯಗಳು ಯೋಗದ ನಾನಾ ಮುಖಗಳನ್ನು, ಅದರ ಅಂತರಾಳದ ಮರ್ಮಗಳನ್ನು ಸಚಿತ್ರವಾಗಿ ಬಣ್ಣಿಸುತ್ತವೆ. ಅನೇಕ ಪಾರಿಭಾಷಿಕ ತತ್ತ್ವಗಳ ವಿವರಣೆ ಇಲ್ಲಿದೆ. ಯೌಗಿಕ ನಿಲುವಿನಲ್ಲಿ ನಿಜಗುಣರು ತಳೆದಿದ್ದ ಆಸಕ್ತಿ ಹಾಗೂ ಚಿಂತನೆಗೆ ಈ ಪದ್ಯಗಳು ಸಾಕ್ಷಿಯಾಗಿವೆ ಎನ್ನಬಹುದು. ಈ ಪಂಚಯೋಗದಾಚರಣೆ ಏತಕ್ಕೆ? ಮುಕ್ತಿಪದ ಪ್ರಾಪ್ತಿಗೆ, ನಿಜಸುಖವನ್ನು ಪಡೆಯುವುದಕ್ಕೆ. ನಿಜಗುಣರ ಅಂತರ್ವಾಣಿಯ ಮೊರೆಯಾದರೂ ಇಷ್ಟೆ:

" ಯೋಗಿಯೆಂದೆನಿಸೆನ್ನನು ವಿಷಯ ಸುಖ
ಭೋಗಿಯೆನಿಸದೆ ಜಗದೊಳು, ಶಿವನೆ! "

ಯೋಗಿಗಲ್ಲದೆ ದೊರೆವುದೆ ಪರತರ ಮುಕುತಿ? ಯೋಗದಿಂದ ಮುಕ್ತಿ. ಏಕೆಂದರೆ, ಯೋಗದಲ್ಲಿ ವರಹೃದಯಾನುಸಂಧಾನತೆ ಇದೆ; ನಿಜಾನಂದ ಲೀನತೆ ಇದೆ; ಮಿಗಿಲಾಗಿ, ಶಂಭುಲಿಂಗೈಕ್ಯತೆ ಇದೆ.

ಪಂಚಯೋಗಗಳ ತಿರುಳನ್ನು, ಸತ್ವವನ್ನು ಸೂತ್ರರೂಪದಲ್ಲಿ ಬಣ್ಣಿಸುತ್ತ ಸಾಗುತ್ತಾರೆ ನಿಜಗುಣರು. ಕುಂದದೆ ಮಂತ್ರಗಳನ್ನು ಜಪಿಸುವುದೆ ಮಂತ್ರಯೋಗ. ನಾದದ ನಿಜದೊಳಾಗಲಿ,

ಬಿಂದುವಿನ ರಮ್ಯರೂಪಿನೊಳಾಗಲಿ ಅಸುಗೂಡಿ ಭೇದವಳಿದು ಮನವಿದ್ದರದೆ ಲಯಯೋಗ. ಹವಣಿಸಿದಷ್ಟಾಂಗದಿಂದ, ಕರಣಮುದ್ರಾನಿವಹದಿಂದ, ಕುಂಭಕದಿಂದ ಪವನವಿಜಯವೆ ಹಠಯೋಗ. ಅರಿವಿನಿಂದ ಒಳಹೊರಗಣ ಮೂರು ಲಕ್ಷ್ಯದಿಂದರಿದು ತತ್ವವನು ಮಾನಸವೃತ್ತಿ ಕರಿಗೊಂಡುನಿಂದರೆ ಅದೇ ರಾಜಯೋಗ. ಗುರುಶಂಭುಲಿಂಗದರ್ಚನೆ, ಅನುಸಂಧಾನ, ವರಭಕ್ತಿ, ವಿದ್ಯೆ, ಸುವ್ರತ - ಇವು ಅಳವಟ್ಟರೆ ಶಿವಯೋಗ. ಕ್ಲಿಷ್ಟವಾದ ಯೋಗತಂತ್ರವಿಧಿವಿಧಾನಗಳನ್ನು ಅಚ್ಚಗನ್ನಡದಲ್ಲಿ ತಿಳಿಯಹೇಳುವ ನಿಜಗುಣರ ಅಭಿವ್ಯಕ್ತಿ ಸಾಮರ್ಥ್ಯ ಹಾಗೂ ವಿಷಯ ಪರಿಜ್ಞಾನ ಅಸಾಧಾರಣವೆನ್ನಲೇಬೇಕು.

ಯಮ ನಿಯಮ ಪ್ರತ್ಯಾಹಾರ ಧಾರಣ ಧ್ಯಾನ ಸಮಾಧಿ ಕುರಿತಂತೆ ಪುಟ್ಟ ಆದರೆ ಸ್ಪಷ್ಟ ನಿರೂಪಣೆಗಳನ್ನು ನೀಡುವುದರ ಜೊತೆಗೆ ಸಿದ್ಧಾಸನ, ಸ್ವಸ್ತಿಕಾಸನ, ಪದ್ಮಾಸನ, ವೀರಾಸನ ಹಾಗೂ ಸುಖಾಸನ ಎಂಬ ಆಸನಭೇದಗಳ ಬಗ್ಗೆ ಛಂದರೂಪದ ಪದ್ಯಗಳಲ್ಲಿ ಯೋಗ ಪರಿಭಾಷೆಗೊಂದು ಖಚಿತ ವ್ಯಾಖ್ಯಾನ ಕೊಡುವ ಅನುಪಮ ಕಲೆ ನಿಜಗುಣರಿಗೆ ಈ ಕೃತಿಯಲ್ಲಿ ಆಮೂಲಾಗ್ರವಾಗಿ ಸಿದ್ಧಿಸಿದೆ. ಮೂಲ ಬಂಧ, ಉಡ್ಡಿಯಾಣ ಬಂಧ ಹಾಗೂ ಜಾಳಂಧರ ಬಂಧದ ವಿವರಣೆ, ಬಾಹ್ಯ-ಅಂತರಮುದ್ರೆ, ಪೂರ್ವ-ಮಧ್ಯ-ಅಮನಸ್ಕ ತಾರಕತ್ರಯಗಳ ಉದ್ಧೃತಿ, ಪ್ರಾಣಲಿಂಗ-ಭಾವಲಿಂಗದ ಸೂಕ್ಷ್ಮಾವಲೋಕನ, ಜಾಗರ-ಸ್ವಪ್ನ-ಸುಷುಪ್ತಿ-ತುರೀಯ-ತುರೀಯಾತೀತ ಮೊದಲಾದ ಯೋಗಸಂಬಂಧಿತ ಪ್ರಸ್ತಾಪ ಇಲ್ಲಿ ಅಚ್ಚುಕಟ್ಟಾಗಿ ಚರ್ಚಿತವಾಗಿದೆ.

ಯೋಗ ಕುರಿತಂತೆ ನಿಜಗುಣರು ಪ್ರತಿಪಾದಿಸಿರುವ ವಿವರಗಳು ಇಂತಿವೆ :

ತನುಕರಣ ಇಂದ್ರಿಯವೆಲ್ಲದರಲ್ಲಿ ವಿರತಿಜನಿಸಿಹುದೆ ಯಮ. ವನಿತಾದಿ ವಿಷಯದೊಳುದಾಸೀನ ಹಾಗೂ ಆತ್ಮನಿಜದೊಲವೆ ನಿಯಮ. ಚರಿಸುವಿಂದ್ರಿಯವನ್ನು ಉಪಾಯದಿಂದ ಸೆಳೆವುದೆ ಪ್ರತ್ಯಾಹಾರ, ಶಿವಾಶ್ರಯದಲ್ಲಿ ಚಿತ್ತವಿಹುದೆ ಧಾರಣ. ಶುದ್ಧ ಚೈತನ್ಯ ನಾನೆಂಬುದೆ ಧ್ಯಾನ. ಸ್ವರೂಪದಲ್ಲಿ ಮರಳದಚಲ ಭಾವಮಾಗೆ ಅದೆ ಸಮಾಧಿ.

ಯೋಗಿಗೆ ಐದು ಅವಸ್ಥೆಗಳು. ಹೀಗಲ್ಲದಿಲ್ಲವೆಂಬ ಅರಿವು ಆತನಿಗಾದಾಗ, ಮುಕುತಿವನಿತೆ ಒಲಿದು ಕೈಗೂಡುವಳು ಎನ್ನುತಾರೆ ನಿಜಗುಣರು.

i) ಜಾಗರಾವಸ್ಥೆ : ಇಹಪರದ ಭೋಗವನ್ನು ಎಳಸದೆ, ನಿಜಮೋಕ್ಷ ಎಂತಹುದು ತನಗೆಂದು, ಶ್ರುತಿ ಗುರುಗಳನ್ನು ಆಶ್ರಯಿಸಿ ಸಹಜ ಶಮೆ. ಸತ್ಯ-ಬುಧಜನ ಸಂಗತಿ ಮೊದಲಾದ ಬಹುಸುಗುಣದಲ್ಲಿ ಎಚ್ಚರ ತಳೆವುದು.

ii) ಸ್ವಪ್ನಾವಸ್ಥೆ : ಮರೀಚಿಕೆ, ಕಾಮನ ಬಿಲ್ಲು ಹಾಗೂ ಶರತ್ಕಾಲದ ಮೋಡದಂತೆ ಮೋಹಿಸಿ ತೋರುವ ಭೂತಭುವನಾದಿ ವಸ್ತುಗಳು ಹುಸಿಯೆಂದು ತಿಳಿದು ಆತ್ಮಸಾಧನಾಕೃಷಿಯನ್ನು ಎಡೆಬಿಡದೆ ಭಾವಿಸುವುದು.



iii) ಸುಷುಪ್ತಿ ಅವಸ್ಥೆ : ಭೇದವಳಿದ ಅವಿರಳ ಸುಖಬೋಧ ಅಳವಟ್ಟು, ಬಳಿಕ ತನಗಾದ ಪ್ರಾರಬ್ಧ ಭೋಗದಲ್ಲಿ ವಿಕೃತಿಗಳು ಕಳೆದು ಹೊಲಬಿಲ್ಲದ ಅಚಲಿತ ಚಿತ್ತದ ಇರವು.

iv) ತುರೀಯಾವಸ್ಥೆ : ಬಯಲ ಬರಿಕೊಡದಂತೆ ಒಳ-ಹೊರಗಣ ಭಾವನೆಯ ಸಂಶಯವಿಲ್ಲದೆ ಅಂಬುಧಿಯಲ್ಲಿ ಮುಳುಗಿದ ಘಟದಂತೆ ಸ್ವಯವೆನಿಸುವ ಪರಿಪೂರ್ಣತೆ ಕರಿಗೊಂಡು ಅಚ್ಚಳಿಯದೆ ನಿಶ್ಚಯವಾದ ಸ್ಥಿತಿ.

v) ತುರೀಯಾತೀತಾವಸ್ಥೆ : ಶರೀರವಿಡಿದು ಯಾವುದರೊಡನೆಯೂ ಅಭಿಮಾನತೆ ಅಣುವಿನಷ್ಟಿಲ್ಲದೆ, ನಿರುಪಮಸಾಕ್ಷಿಕವು ಶಂಭಲಿಂಗವಾಗಿ ಉಳಿದು ದರ್ಶನಮತವಾದಿಗಳೆಲ್ಲ ತಮತಮಗೆ ತೋಚಿದ ಒಂದೊಂದು ಪರಿಯಲ್ಲಿ ಸ್ತುತಿಸುತ್ತಿರುವ ನಿಲುವು.

ಶಾಸ್ತ್ರವು ಕಾವ್ಯವಾಗುವುದು ಕಷ್ಟದಲ್ಲಿ ಕಷ್ಟದ ಕಾರ್ಯ. ಆದರೆ, 'ಕೈವಲ್ಯ ವಲ್ಲರಿ' ಶಾಸ್ತ್ರಕಾವ್ಯವೆಂತೋ, ಅಂತೆ ಕಾವ್ಯಶಾಸ್ತ್ರವಾಗಿಯೂ ವಿಜೃಂಭಿಸಿದೆ.

***

ಕೈವಲ್ಯ ಸೋಪಾನದ ಕೊನೆಯ ಸ್ಥಲವೇ ಜ್ಞಾನಪ್ರತಿಪಾದನಾ ಸ್ಥಲ. ವಿಷಮ ಸಂಸಾರವಿದೊಂದು ಕನಸು. ಜೀವನಾವರಣದೋಷ ಕಳೆದು, ತಾನಾರೆಂಬುದರತ್ತ ಒಳನೋಟ ಪ್ರಾರಂಭವಾದಾಗ, ಅರಿವಿನ ಸ್ವರೂಪ ಹಾಗೂ ಅದರ ಪ್ರಾಪ್ತಿ ವಿಧಾನಗಳತ್ತ ಮನಸ್ಸು ಹರಿಯುತ್ತದೆ. ಗಂಭೀರ ಸುಖ ಆಗ ಶಂಭುಲಿಂಗನ ಕೃಪೆಯಿಂದ. ಪರಾತ್ಪರ ಪರಮನನ್ನು ಪಡೆಯುವ, ಕಾಣುವ, ಬೆರೆಯುವ ಮಾರ್ಗದರ್ಶನ ಇಲ್ಲಿ ಹೃದಯಂಗಮವಾಗಿ ಚಿತ್ರಿತವಾಗಿದೆ.

ಅರಿವಿನ ಮಹತ್ವವನ್ನು ಸಾರುವ ನಿಜಗುಣರು "ನಂಬು ಜ್ಞಾನವನ್ನೆ. ಕರ್ಮವೆಂಬ ಜಾಲದಲ್ಲಿ ಸಿಲುಕಿ ಹಲುಬದಿರು. ಜ್ಞಾನವೇ ಮುಕ್ತಿಗೆ ಮಾರ್ಗ. ಶಂಭುಲಿಂಗನ ಸುಜ್ಞಾನ ದೃಢವಾದರೆ, ಪರಮಾನಂದ ಕಾದಿದೆ" ಎನ್ನುತ್ತಾರೆ.

ಅಗಣಿತ ಜ್ಞಾನದರ್ಶನದಿಂದ ದುಃಖನಿವೃತ್ತಿ, ಶೋಕನಿವಾರಣೆ. ಅರಿವೆ ವಿಶ್ವಾಶ್ರಯ, ತ್ರಿಪುಟಿ, ಸತ್ಕ್ರಿಯೆ. ಅದೆ ಪರತತ್ವ, ನಿರ್ಲೇಪ, ನಿತ್ಯಾನಂದ. ಅದೆ ನಿತ್ಯ ನಿರ್ಮಲ ಪರಬ್ರಹ್ಮ, ಸದಾನಂದ ಸ್ವಯಂಜ್ಯೋತಿ. ಅರಿವಿನೊಳಿಲ್ಲ ಒಮ್ಮೆ ಮರಹು. ಅರಿವಿಗಿಂತ ಪೆರತೆಂಬುದೊಂದಿಲ್ಲ- ಎನ್ನುವ ದೃಢ ಭಾವನೆ ನಿಜಗುಣರ ಪದ್ಯಗಳ ಇಂಗಿತಾರ್ಥ.

"ಅರಿವೆ ತಾನೆಂದು ನಂಬಿ ನಿಂದೊಡೆ ಮುಕ್ತಿ. ಅರಿವೆ ತಾನೆಂದು ಸಂದೇಹವಿಲ್ಲದಾತನೆ ಜಾಣರ ದೇವ" ಎನ್ನುವುದೆ ನಿಜಗುಣರ ಏಕಾಭಿಪ್ರಾಯ.

"ಅರಸು ನರ್ತಕಿ ತಾಳಧಾರಿ ಸೂರಿಗಳನಾವರಿಸಿ ಬೆಳಗುವ ರಂಗದೆಡೆಯ ಸೊಡರಂತೆ ನೆರೆದ ಅಹಂ ಬುದ್ಧಿ ಇಂದ್ರಿಯಾದಿ ವಿಷಯಂಗಳಾಚರಣ ಸಾಕ್ಷಿಕ ಚಿತ್ತು ತಾನೆಂಬ" ಸುಖವೇನಿದೆಯೋ, ಅದೆ ಪುಣ್ಯ ಫಲ; ಜೀವಭಾವ ಮೀರಿದ ನಿಜನಿಷ್ಠೆ ಅದು.

ಅರಿವಿನಿಂದ ನಿಜಸುಖ ದೊರಕುವ ಸರಪಣಿ ಕ್ರಿಯೆಯನ್ನು ನಿಜಗುಣರು ಶಾಸ್ತ್ರೀಯವಾಗಿ ಮುಂದಿಡುವ ರೀತಿ ಎಂದರೆ: ಜ್ಞಾನದಿಂದ ಮರಹು ಅಳಿಯುತ್ತದೆ. ಮರವೆಯ ಹಾನಿಯಿಂದ ಭೇದಬುದ್ಧಿ ಕೆಡುತ್ತದೆ; ಮಾನಸವಿಕೃತಿ ಕಳೆಯುತ್ತದೆ. ಆಗ ಪುಣ್ಯ ಪಾಪಕರ್ಮವಿಲಯ ಹಿಂಗುತ್ತದೆ; ದೇಹಭಾವ ನಷ್ಟವಾಗುತ್ತದೆ. ಉತ್ತಮ ಸಹಜ ಅವಸ್ಥೆ ಒದಗಿ, ನಿಜಸುಖ ತನಗೆ ತಾನೇ ನೆಲಸುತ್ತದೆ.

ಅರಿವಿನ ದಿಗ್ದರ್ಶನ ಶ್ರೀಗುರುವಿನಿಂದ. ಭಾವುಕರಿಗೆ ಅನುಗುಣವಾಗಿ ತೋರುವ ಗುರುಗಳು ಆರು ತೆರ ಎಂದು ನಿಜಗುಣರು ಸೂಚಿಸುತ್ತಾರೆ. (i) ನಿಷೇಧ ಗುರು: ಆಕರ್ಷಣ ವಶ್ಯಾದಿಗಳಿಂದ ಇಹಸುಖವನ್ನು ಮೇಲೆ ಶೋಕವನ್ನೈದಿಸುವವನು. (ii) ಕಾಮ್ಯ ಗುರು : ಬೇಕೆನಿಸುವ ಸಂಪದವನು ತನಗಿಲ್ಲಿ, ಮುಂದೆ ಪರಲೋಕದ ಲೇಸನು ಕೊಡುವವನು. (iii) ಸೂಚಕ ಗುರು : ಭೇದಗತಿಗಳು ಹೇಯವೆಂದು ಶಮೆ ದಾಂತ್ಯಾದಿ ಸಾಧನವನು ಕುರುಹಿಡುವವನು. (iv) ವಾಚಕಗುರು : ವೇದಸನುಮತವೆನಿಸಿದ ತತ್ವಸಂಪ್ರೀತಿಯನೆ ಬೋಧಿಸಿ ತಿಳುಹುವ ಕುಶಲನು. (v) ಕಾರಕ ಗುರು : ಜೀವಪರಮ ತುರೀಯ ಪರವಸ್ತುಗಳೇಕತ್ವದ ಅನುಭಾವವನು ಅರುಹುವವನು ಮತ್ತು (vi) ವಿಹಿತಗುರು: ಪಾವನಾತ್ಮಕ ಶಂಭುಲಿಂಗನೆ ತಾನಾದ ನಿಜಕೈವಲ್ಯಪದವನು ಕೊಡುವವನು.

ಎಲ್ಲೂ ಸಂದಿಗ್ಧತೆ, ಅನಿಶ್ಚಯತೆ, ಸಂದೇಹಕ್ಕೆ ಆಸ್ಪದವಿರದ ಖಚಿತ ನಿಲುವು ನಿಜಗುಣರದು.

***

"ಜ್ಞಾನಿಯಂದವನರಿಯೆವೆಂಬರು ಅನುಮಾನವೇಕವನಂಗ ತಾನೆ ಸೂಚಿಸುತಿದೆ" ಎಂಬ ಪದ್ಯದಲ್ಲಿ ಒಂದೊಂದು ವಸ್ತು ಸಂಗತಿಯನ್ನು ಇನ್ನೊಂದರೊಡನೆ ಕ್ರಮಬದ್ಧವಾಗಿ ಹೆಣೆದು, ನಿಲುಗಡೆಯಲ್ಲಿ ಚರ್ಚಿತ ವಿಷಯಕ್ಕೊಂದು ಸಮಂಜಸ ಉತ್ತರ ಸಿಗುವಂಥ ಕೌಶಲವನ್ನು ತೋರಲಾಗಿದೆ.

ಹಿತವಿದಹಿತವೆಂಬ ತಿಳಿವಿಗೆ ವಿಷಯವಿರತಿಯೆ ಸೂಚನೆ.

ವಿರತಿಗೆ ವಿಶ್ವದ ನುಡಿವೆತ್ತ ಶಮೆ ತಾನೆ ಸೂಚನೆ.

ಶಮೆಗೆ ಸನ್ಮತವಾದ ವರಮುಕ್ತಿ ಪದದೊಲುಮೆ ಸೂಚನೆ.

ವರಮುಕ್ತಿಯೊಲುಮೆಗೆ ಗುರುಸೇವೆ ಸೂಚನೆ.

ಗುರುಪಾದಸೇವೆಗೆ ವೇದಾರ್ಥ ಸೂಚನೆ.

ವರವೇದಾರ್ಥಕೆ ಶರೀರಾದಿ ನೇತಿಯೆ ಸೂಚನೆ.

ಶರೀರಾದಿ ನೇತಿಗೆ ತಾನಾರೆಂಬುದೆ ಸೂಚನೆ.



ಆರು ನಾನೆಂಬುದಕೆ ಸೋऽಹಂ ಭಾವನೆ ಸೂಚನೆ.

ವಿಚಾರಿತ ಸೋऽಹಂಭಾವಕೆ ಹವಣಿಸದ ಸಾರಸುಖ ಸೂಚನೆ.

ಸುಖಕೆ ನಿತ್ಯನಿಜ ನಿರ್ವಿಕಾರ ಗುರುಶಂಭುಲಿಂಗವಾಗಿಹುದೆ ಸೂಚನೆ.

'ತತ್ವಮಸಿ' ಪದದರ್ಥವನ್ನು ಐದು ಚರಣಗಳ ಪದ್ಯದಲ್ಲಿ ಮನಂಬುವಂತೆ ವರ್ಣಿಸಿರುವ ಪದ್ಯವೊಂದಿದೆ. ಅರ್ಥ, ಲಕ್ಷ್ಯಾರ್ಥಗಳ ಹಿನ್ನೆಲೆಯಲ್ಲಿ ತತ್, ತ್ವಂ, ಅಸಿ ಪದಗಳ ಅಂತರ್ಭಾವವನ್ನು ಕ್ರಮವಾಗಿ ವಿಕೃತಿಯೊಂದಿಲ್ಲದಾನಂದ ಪರಬೊಮ್ಮ, ವಿಶ್ವಜೀವ ಹಾಗೂ ನೇತಿಗಳೆದುಭಯದೌಪಾಧಿಗಳನುಳಿದ ಚೈತನ್ಯ ಎಂಬುದಾಗಿ ಇಲ್ಲಿ ಸೂತ್ರದೋಪಾದಿಯಲ್ಲಿ ಹೇಳಲಾಗಿದೆ.

ವೇದವಾಕ್ಯವನುದ್ಧರಿಸಿ, 'ತ್ವಂ ಬ್ರಹ್ಮಾಸಿ' ತತ್ವದತ್ತ ನಿಜಗುಣರ ಚಿಂತನೆ ವಾಲಿದೆ. ಚಿತ್ತ ಒಂದೆ; ಪರಮಾರ್ಥದಿಂದ ಅದು ಬಹುರೂಪವೆತ್ತಿದೆ. ಅದೇ ಉಪಾಧಿ. ಏಕಾತ್ಮನಾಗಲು ಓರ್ವನಿಗಾದ ಸುಖದುಃಖ ಎಲ್ಲರಿಗಪ್ಪುತ್ತದೆ ಎನ್ನಲಾಗದು. ರವಿಯೊಬ್ಬನೇ ಕೂಪಾದಿ ಜಲದಲ್ಲಿ ಬೇರೆ ಬೇರೆ ಕಲ್ಪನೆ, ರೂಪವನ್ನು ತಾಳಿಲ್ಲವೆ? ಗುರುಶಂಭುಲಿಂಗದ ಭೇದಭಾವನೆ ಸತ್ಯವಲ್ಲವೆಂದು ವೇದವಾಕ್ಯ ಪೇಳಿಲ್ಲವೆ? ಎನ್ನುತ್ತಾರೆ ನಿಜಗುಣರು.

ಮುಕ್ತಿಸುಖ ಸಾಧ್ಯವಾಗದು. ಯಾವಾಗ? ಎಂದಿನಂತೆ ಕಾಮ ಕೋಪ ಲೋಭ ಮದ ಮೋಹ ಮತ್ಸರ, ಭಯ ಶೋಕ, ಹಸಿವು ತೃಷೆ, ದೇಶಕಾಲ ಗತಿ ದೇಹದಭಿಮಾನ, ಕುಲಜಾತಿನಾಮರೂಪಗಳು, ವಿಕೃತಿ ಸಂಸರಣ, ಮಮಕಾರ ನಿಂದೆ ವಂದನೆ ಕುಂದು ಕುಶಲ- ಇವೆಲ್ಲ ತೋರುತ್ತಿದ್ದರೆ, ಇನ್ನು ಆನಂದಬೋಧಾಂಬುಧಿ ಶಂಭುಲಿಂಗವೆಲ್ಲಿ ?

" ಏನ್ನೊಡನೆ ಸಮರಸವಿನ್ನು ಬೇಡೆಲೆ
ಮುನ್ನಿನಂತೆ ತನುವೆ ನೀನನ್ನವೆನಗೆ "

- ಈ ಪದ್ಯದಲ್ಲಿ ತನುವಿನ ವಿಕಾರಗಳತ್ತ ಬೊಟ್ಟು ಮಾಡುತ್ತ, ತಾನು ಹೇಗೆ ವಿಭಿನ್ನ ಎಂಬ ಅಂಶವನ್ನು ಗ್ರಾಹ್ಯವಾಗುವ ತೆರದಲ್ಲಿ "ನೀನು-ನಾನು" ಸಂಭಾಷಣೆಯ ಮೂಲಕ ತಿಳಿಸಲಾಗಿದೆ.

| | |
|---|---|
| ನೀನು | ನಾನು |
| ಪುಸಿ | ನಿಜ |
| ಮಲವೆರೆಡರ ಬೆಸುಗೆ | ಅತಿ ಶುದ್ಧ |
| ಕರ್ಮವಿಸರದೇಳಿಗೆ | ಸಾಕ್ಷಿ |
| ಬಂಧ | ಮೋಕ್ಷ |
| ಜಡ | ಅಜಡ |
| ಬಹುರೂಪ | ಏಕರೂಪ |
| ಕೆಡುವೆ ಎಂದೆಂದು | ನಿತ್ಯ |

| | |
|---|---|
| ಕಡೆಗೆ ಮಣ್ಣು | ವಸ್ತು |
| ಒಂದವಸ್ಥೆ | ಅಖಿಳಾವಸ್ಥೆ |
| ಭೂತವಿಕೃತಿ ಅಂದ | ನಿರ್ವಿಕೃತಿ |
| ಕುಂದು ಹೆಚ್ಚು | ಸಮ |
| ರುಜೆ | ಸೌಖ್ಯ |
| ದೃಶ್ಯ | ದೃಕ್ಕು |
| ಹೇಯ | ಉಪಾದೇಯಾತ್ಮಕ |
| ಮಿಥ್ಯೆಮಾಯೆ | ಮಾಯಾರಹಿತ |

ಭೂತಾದಿ ಪ್ರತಿಬಂಧಕಗಳು ನೀಗದೆ ಮುಕ್ತಿ ದೊರಕದು. ಜಡಬುದ್ಧಿ, ಸಂಗರತಿ, ವಿಷಯಾಸಕ್ತಿ, ತರ್ಕದಭಿಮಾನ, ಚಪಲತೆ ಇದ್ದಲ್ಲಿ ನಿಜಾನಂದ ಬೋಧೆ ಎಲ್ಲಿ ಸಾಧ್ಯ?

ಮುಕ್ತಿ ಪಡೆವ ಮನುಜರು ಯಾರು? ಅಭಿಲಾಷಾಮುಕ್ತ ಕರ್ಮಿ, ಬಾಹ್ಯಕರ್ಮವೆ ಮಿಗಿಲೆಂದು ಚತುರಾಶ್ರಮವನ್ನೈದಿರುವ ಮುಮುಕ್ಷು, ಆತ್ಮನೆ ನಿತ್ಯವೆಂದು ಚಿಂತೆಯಳಿದ ಅಭ್ಯಾಸಿ, ಪರತತ್ವಾವಲೋಕನದಿಂದ ಒಳಹೊರಗಣ ಕೃತ್ಯಾನೇಕವಿಲ್ಲದ ಅನುಭವಿ ಹಾಗೂ ನಿತ್ಯಸುಖದ ಶರಧಿ ಆರೂಢ.

ಸೂಕ್ಷ್ಮಯೋಗ, ವಿನುತಯೋಗ, ಅಧಿಕ ಯೋಗ, ಅಮಳಯೋಗ ಹಾಗೂ ನಿಜಯೋಗದ ಪ್ರಕ್ರಿಯೆಗಳ ವಿಧಿ ನಿರ್ದೇಶನ 'ಯೋಗಾನುಸಂಧಾನದಿಂದ ಮುಕ್ತಿಸುಖಸಿದ್ಧಿ' ಎಂಬಲ್ಲಿನ ಪದ್ಯದ ವಸ್ತು. "ಎರಡೆನ್ನಡೆ, ಒಂದೆಂಬ ಬಗೆಯನಿರಿಸದೆ ಪರವಶಮಿರದೆ ಚೇತರಿಸದೇನೊಂದ ಪೊರಗಾಣಿಸದೆ ಶಂಭುಲಿಂಗವಾಗಿ ತಾನಿರುತಿಹ ನಿಜಮುಕ್ತಿಯನು ಕಂಡಂಗಲ್ಲದೆ" ನಿಜಸುಖದ ಸಮರಸಭಾವ ಸಿಗದೇ ಸಿಗದು !

ಸಹಜ ಪರಬೊಮ್ಮನೆ ತಾನೆಂಬ ಮತಿ ಮರೆಯದಿಹುದೆ ವೇದಾಂತ ಸಮ್ಮತವಾದ ಯೋಗ. ಕರಣಾದಿ ಗುಣವಿಷಯ ತತಿಗೆ ಗುರುಶಂಭುಲಿಂಗವೆ ತಾನಾದೆನೆಂಬ ಪರಿಕಲ್ಪನೆಯನುಳಿದು ತೆರೆಯಡಗಿದಂಬುಧಿಯ ಪರಿಯಂತೆ ಸಲೆ ಸುಮ್ಮನಿಹುದೆ ನಿಜಯೋಗ.

ಆಗ ಧನಕನಕ ವಸ್ತ್ರಭೂಷಣ ವಾಹನರಮ್ಯವಾಸ ವನಿತಾದಿ ವಸ್ತುಗಳ ಭೋಗವೆಲ್ಲ ತೃಣಸಮಾನ. ಒಡಲೊಡಲಿನ ಮೋಹವಿಲ್ಲ, ಮನದೊಳಗಿನ ಚಿಂತೆಯಿಲ್ಲ. ದುರಿತಕರ್ಮದ ಕಾಟವಿಲ್ಲ, ಒಳಹೊರಗಣ ಪೂಜಾನೇಮ ದುರವಣೆಯಿಲ್ಲ. ದುಂದುಗವಿಲ್ಲದ ನಿಜಸುಖ, ನಿತ್ಯಾನಂದದ ಜೀವನ್ಮುಕ್ತಿ ತಾನೆತಾನಾಗಿ ನೆಲೆಗೊಳ್ಳುತ್ತದೆ. ಅದರ ಫಲವಾಗಿ, ಶಂಭುಲಿಂಗನ ಕರುಣಾಕಟಾಕ್ಷವೇ ಮನುಜನ ಚಿತ್ತಪರಿಪಾಕ ಹಾಗೂ ಶಾಂತಿಗೆ ಬೆನ್ನೆಲುಬಾಗುತ್ತದೆ.

"ಆರು ನಾನೆಂದು ವಿಚಾರಿಸಿ ತಿಳಿಯೆ" ಎಂಬಲ್ಲಿ ತನುವಿದಾನಲ್ಲ, ಇಂದ್ರಿಯವಾನಲ್ಲ, ಅಸುವರ್ಗವೆನಿಪವಾನಲ್ಲ, ಚಿತ್ತ ಬುದ್ಧಿಮನವಾನಲ್ಲ, ಇಳೆವಾರಿ ಶಿಖಿ ವಾಯು ನಭ ನಾನಲ್ಲ - ಎನ್ನುವ ಚಿಂತನೆಗೆ ಶಂಕರಾಚಾರ್ಯರೇ ಸ್ಫೂರ್ತಿ ಇದ್ದಿರಬಹುದು. ಆಚಾರ್ಯರ ಅನೇಕ



ಶ್ಲೋಕಗಳು ಇಲ್ಲಿನ ಅಂತರೀಕ್ಷಣೆಗೆ ಪ್ರಭಾವ ಬೀರಿರುವುದು ಸಹಜವೇ ಆಗಿದೆ. ವಚನಕಾರರ ಶಕ್ತಿವಿಶಿಷ್ಟಾದ್ವೈತದ ಅಂತರಂಗದ ಪಡಿನೆಳಲು ಕಾಣುವುದಕ್ಕಿಂತ ಹೆಚ್ಚಾಗಿ ಈ ಪದ್ಯಗಳಲ್ಲಿ ಅದ್ವೈತದ ಛಾಯೆ ದಟ್ಟವಾಗಿ ಹೆಪ್ಪುಗಟ್ಟಿರುವುದು ವ್ಯಕ್ತವಾಗುತ್ತದೆ.

"ಆನು ನೀನೆಂಬುದಳಿದು ಸಲೆನೇಮಸೀಮೆದೋರದ ಶಂಭುಲಿಂಗವಾದುಳುಮೆ ಚಿನ್ಮಾತ್ರವದು ನಿಜ ಕಾಣಿರೈ ... ನಿಜವ ಅರಿದೆವರಿದೆ ಎಂಬಿರಿ, ಅದು ನಿಮ್ಮ ಭಾವನೆಗೆ ಬಂದ ಪರಿಯನು ಪೇಳಿರಿ" ಎಂಬ ಪದ್ಯದಲ್ಲಿ ದೇಹ ಮನ, ಒಳಗು-ಹೊರಗು, ಸಗುಣ-ನಿರ್ಗುಣ ತತ್ವಗಳ ಅಂತರ್‍ನಿಲುಮೆ ಹಾಗೂ ಅದರ ನಿಜದ ತೋರ್ಕೆಯನ್ನು ಪದರ ಪದರವಾಗಿ ಬಿಡಿಸುವ ಚಿತ್ರಣಕೌಶಲವಿದೆ.

ಈ ಬ್ರಹ್ಮವಿಚಾರವನ್ನು ಅರಿತು ತನಗಾದ ಪರಮಾನಂದದ ಹದವನ್ನು ಎಷ್ಟೆಷ್ಟು ತಿಳಿಸಿದರೂ, ನಿಜಗುಣರಿಗೆ ತೃಪ್ತಿಯಿಲ್ಲ. ಅಂಥ ಭಕ್ತಿಪರಾಕಾಷ್ಠೆ ಇಲ್ಲಿದೆ. ತಾನಾರೆಂಬುದರ ಅರ್ಥವನ್ನು ವಿಚಾರಿಸುವ ದಿಸೆಯಲ್ಲಿ, ಚಾರುಗುರುಪದವಿಡಿದು ಸುಖದಲ್ಲಿ ಓಲಾಡುವ ಜ್ಞಾನಿಯ ಸುವಿಚಾರಧಾರೆ ಇಲ್ಲಿದೆ. ಇಲ್ಲಿ ಯುಕ್ತಿ ಗೌಣ, ಮುಕ್ತಿ ಪ್ರಧಾನ. ಅವನೇ ಶಂಭುಲಿಂಗನೊಬ್ಬನೇ ನಿಜಗುಣರ ಸುಖಾಮೃತ ಕೃಪಾಸಿಂಧು, ವರದ ಲೋಕೈಕ ಬಂಧು; ಜಗದಾದಿ ಬೀಜ, ಭಕ್ತಸುರಭೂಜ, ಶರಣವಾರಿಧಿರಾಜ.

"ಉದಯಾಸ್ತಮಾನದೊಳು ನೂರೆಂಟು ನಾಮವನು ಪದುಳದಿಂದ ಓದಿ ಕೇಳಿದವರ್ಗೆ ಶಂಭುಲಿಂಗನ ಕರುಣೆಯಿಂದ ಕೊರತೆಯಿಲ್ಲದೆ ಸಕಲ ಸಂಪದ" ಒಂದುಗೂಡುವುದು ; "ಸದಮಲ ಸದ್‍ಭಕ್ತಿ ಮೇಲೆ ಮೇಲೊದವಿ, ನಿಜಸುಖದ ಮುಕ್ತಿ ದೊರೆವುದು ಸತ್ಯ." ದುರಿತ ಕಂಟಕವಳಿದು ಭೋಗಮೋಕ್ಷ, ಸಿರಿಸಕಲ ಸಿದ್ಧಿ ಸಂಪದ ವಿದ್ಯೆವಿಭವ ಕೈಸಾರುವುದು. ಅಂತೆಯೇ, ಶಾಂಭವಿಯ ನೂರೆಂಟು ಶುಭನಾಮ ಜಪಿಸಿದರೆ, ಸತಿಪುತ್ರ ಸಂತಾನ ಸಕಲ ಸಂಪದಸಿದ್ಧಿ ನಿಶ್ಚಯದಿ ದೊರಕುವುದು.

- ಇದು ಶಿವಕಾರುಣ್ಯಮಹಿಮೆಯ ಬಗ್ಗೆ ನಿಜಗುಣರಿಗಿರುವ ಅಪಾರ ನಂಬಿಕೆ. ಇಷ್ಟಾಗಿ, ಧರ್ಮವೆಂದರೆ ನಂಬುಗೆ, ನೀತಿನಿಷ್ಠೆ ತಾನೆ !

ಮೋಕ್ಷ ಸಂಪಾದನೆಗೆ "ಶಿವಕಾರುಣ್ಯ ಪಡೆ, ವ್ಯಾಮೋಹ ಬಿಡು, ನೀತಿಯಿಂದ ನಡೆ ಹಾಗೂ ಯೋಗ ಆಚರಿಸು" ಎನ್ನುವ ನಿಜಗುಣರ ಒಳಿತಿನ ಸೂತ್ರಗಳು ಹೀಗಿವೆ :

ದುರಿತ ಕರ್ಮವನೊಲ್ಲದಿರು.
ಪುಣ್ಯವನೆ ಮಾಡು.
ಹರನ ಅಡಿಯನ್ನು ಹಿಡಿ.
ಶಾಂತರೊಡನಾಡು.
ಕರುಣವಿರಲಿ ಜೀವರೊಳು.
ನೀತಿವಿದನಾಗು.

ನಿಂದಿಸಿ ನುಡಿಯದಿರು ಆರನು :
ಮನಸಿಗೆ ಬಂದಂತೆ ನಡೆಯದಿರು ಇಹದಲ್ಲಿ.
ಕುಂದುವನಡೆಯದಿರು.
ಕಾಮಾದಿಗಳ ಜಯಿಸು.

ಭವಮಾಲೆಗಲಸು.
ಪುಸಿಯದಿರು.
ಎಡರು ಬಂದು ಕವಿಯಲಂಜದಿರು.
ಸಂಪದದೊಳು ತವೆ ಮದವಳಿದಿರು.
ತತ್ವಸಂತತಿಯನು ವಿವರಿಸಿ ನೋಡು.

ಬಳಸದಿರದ್ವೈತವನು ಬಾಹ್ಯದೊಳು.
ನಿನ್ನೊಳಗೇಕೋಭಾವನೆಯೊಡಗೂಡು.
ಸಮಯನಿಷ್ಠೆ ಕಲಿ.
ವೇದವಿಧಭಕ್ತಿಗಳನಗಲದಿರು.

ಆರು ನಾನೆಂದು ವಿಚಾರಿಸು.
ವಿಷಮ ಸಂಸಾರವಿದನು ಕನಸೆಂದು ಅರಿ.
ಮಾರಮರ್ದನ ಶಂಭುಲಿಂಗವನೊಲಿಸಿ ಗಂಭೀರ ಸುಖದೊಳಿರು.

ಅಪಾರ ಪದಸಂಪತ್ತು, ತರ್ಕಬದ್ಧ ಚಿಂತನಸರಣಿ, ಕೂಡಿಬರುವ ಶಬ್ದ ಸಂಯೋಜನೆ, ಖಚಿತ ನಿಲುವಿನ ಪ್ರತಿಪಾದನೆ, ಮಿಗಿಲಾಗಿ ಇವೆಲ್ಲದರ ಆಂತಿಕ ಉದ್ದೇಶದ ಸಾಫಲ್ಯ- ಇವು ನಿಜಗುಣರ ಪದ್ಯಾವಳಿಯ ಮೇರುಗುಣಗಳಾಗಿವೆ. ಒಂದೆಡೆ ಸರಳತೆಗೆ ಓಗೊಟ್ಟು ಸುಲಭವಾಗಿ ಅರ್ಥವಾಗುವಂತಹ ರಚನೆಗಳಿದ್ದರೆ, ಇನ್ನೊಂದೆಡೆ ಸಂಕೀರ್ಣ ತತ್ತ್ವ ಸಂಗತಿಗಳ ವಿಶ್ಲೇಷಣಾತ್ಮಕ ನಿರೂಪಣಾಚಿತ್ರಗಳಿವೆ. ಅದ್ವೈತ ಶಿಖರದ ಉತ್ತುಂಗ ಪ್ರತಿಪಾದಕರಾಗಿ ನಿಜಗುಣರು ಆಧುನಿಕ ಕನ್ನಡ ಕೈವಲ್ಯ ಸಾಹಿತ್ಯದ ಅಧ್ವರ್ಯುವಾಗಿ ಪ್ರಾಯಶಃ ಅದ್ವಿತೀಯರಾಗಿದ್ದಾರೆ.

ಕೃತಿಯಲ್ಲಿನ ಕೊನೆಯ 'ಜ್ಯೋತಿ ಬೆಳಗುತಿದೆ' ಪದ್ಯವಂತೂ ನೀಲಾಕಾಶದ ನಿರುಪಮ ನಿರಂಜನನಿಗೆ ಎತ್ತಿದ ಮಿಂಚಿನಾರತಿಯಂತಿದೆ. ಎಂಥ ಜ್ಯೋತಿ ಇದು? ಬೆಳಗಿನೊಳಗಣ ಮಹಾಬೆಳಗು. ಮಾತು ಮನಂಗಳಿಂದತ್ತತ್ತ ಮೀರಿದ ಸಾತಿಶಯದ ನಿರುಪಾಧಿಕ ನಿರ್ಮಲ ಬೆಳಕು. ಅರಿವಿನ ಮೇರುಗಿರಿಯ ಪರಂಜ್ಯೋತಿ. ಅಗಮ್ಯ ಅಗೋಚರ ಅಪ್ರತಿಮ ಶಂಭುಲಿಂಗನ ಶ್ರೀಮುಕುಟದ ದೀಪ್ತಿಸಿರಿ !

ಈ ಜ್ಯೋತಿಗೆ ಶಿವಧರ್ಮನಾಳವೆ ಕಂಬ, ವಿವೇಕ ಹೃದಯವೆ ಹಣತೆ, ಸದ್ಭಕ್ತಿಯೆ ತೈಲ, ವಿಮಲ ಕಳೆಯೆ ಬತ್ತಿ. ಮುಸುಕಿದ ವಿಷಯಪತಂಗ ಬಿದ್ದು ಉರುಳಿರುವುದರಿಂದ ತಾಮಸಬುದ್ಧಿಯ ಕತ್ತಲೆ ತೊಲಗಿದೆ. ಹೀಗಾಗಿ ಇಲ್ಲಿ ಸುಜ್ಞಾನವೇ ಮಹಾಪ್ರಭೆ. ಶಂಭುಲಿಂಗವೆ



ಮೋಕ್ಷ ಚಿಂತಾಮಣಿಯೆನಿಸಿ ಕಂಗೊಳಿಸುವ ಈ ಭವ್ಯ ಅನುಭಾವ ಚಿತ್ರ ಸಾಧಕವೃಂದಕ್ಕೆ ನಿಜಗುಣರ ಮಹೋನ್ನತ ಕೊಡುಗೆ.

'ಮನುಜಹೃದಯಾಂಗಣದೊಳೆನಿತೆನಿತೊ ದನಿ ಉದಿಸಿ, ಜೀವಜೀವಕೆ ನಂಟು, ಜಡಚೇತನಕೆ ನಂಟು ... ಎತ್ತಣಿನೊ ದೃಕ್ಪರಿಧಿಯಾಚೆಯಿಂದಲನಂತ ಸತ್ವ ತೆರೆತೆರೆಯಾಗಿ ಬೀಸಿ ಗೂಢದಲಿ ಬಿತ್ತರಿಸುತಿಹುದು ಹೊಸಹೊಸತನವನೆಡೆಬಿಡದೆ ನಿತ್ಯನಿತ್ಯವು ಜಗದಿ'. ದಾರ್ಶನಿಕ ಕವಿ ಡಿವಿಜಿ ಅವರೆನ್ನುವಂತೆ -

" ಅರೆಗಣ್ಣು ನಮದೆಂದು ಕೊರಕೊರಗಿ ಫಲವೇನು ?
ಅರೆಬೆಳಕು ಧರೆಯೊಳೆಂದೊರಲಿ ಸುಖವೇನು ?
ಇರುವ ಕಣ್ಣಿರುವ ಬೆಳಕಿನೊಳಾದನಿತ ನೋಡಿ
ಪರಿಕಿಸಿದೊಡದು ಲಾಭ - ಮಂಕುತಿಮ್ಮ."

□

ಇಷ್ಟಲಿಂಗಕ್ಕೆ ರೂಪನರ್ಪಿಸಿ ದ್ರವ್ಯಶುದ್ಧವಾಯಿತ್ತೆಂದು
ಪ್ರಾಣಲಿಂಗಕ್ಕೆ ಆರೋಗಣೆಯನಿಕ್ಕುವಾಗ
ನಿಚ್ಚಕ್ಕೆ ನಿಚ್ಚ ಕಿಲ್ಬಿಷವೆಂದರಿಯರು.
ಇಷ್ಟಲಿಂಗ - ಪ್ರಾಣಲಿಂಗದ ಆದಿ ಅಂತ್ಯವನಾರೂ ಅರಿಯರು.
ಇದು ಕಾರಣ ಗುಹೇಶ್ವರಾ,
ನಿಮ್ಮ ಶರಣರು ಹಿಂದುಗಾಣದೆ ಮುಂದುಗೆಟ್ಟರು.

- ಅಲ್ಲಮಪ್ರಭು

# ಬಸವಣ್ಣ ಹಾಗೂ ಜ್ಯೋತಿಬಾ ಫುಲೆ

**ಡಾ. ವ್ಹಿ.ಜಿ. ಪೂಜಾರ**

ನಮ್ಮ ದೇಶ ಹಲವು ಧರ್ಮಗಳ, ಹಲವು ಸಂಸ್ಕೃತಿಗಳ ಆಡುಂಬೊಲವಾಗಿದೆ. ಇಲ್ಲಿ ಧರ್ಮದ ಒರತೆ ನಿರಂತರವಾಗಿ ಪ್ರವಹಿಸುವಂತೆ ಅನೇಕ ಮಹಾಪುರುಷರು ನೋಡಿಕೊಂಡಿದ್ದಾರೆ. ಬುದ್ಧ, ಬಸವಣ್ಣ-ಅಂಬೇಡ್ಕರರಂಥ ಮಹಾತ್ಮರು ಈ ನಾಡಿನಲ್ಲಿ ಜನಿಸಿ ಬೆಳಕು ನೀಡಿದ್ದಾರೆ. ಆ ಸಾಲಿನಲ್ಲಿ ಜ್ಯೋತಿಬಾ ಫುಲೆಯವರ ಹೆಸರು ಎದ್ದು ಕಾಣುವಂಥದು. ಹನ್ನೆರಡನೇ ಶತಮಾನದಲ್ಲಿ ಸಮಾನತೆಯ ಹಂದರದ ಮೇಲೆ ನವಸಮಾಜವನ್ನು ನಿರ್ಮಿಸಲು ಅವಿರತ ಶ್ರಮಿಸಿದವರು ಮಹಾತ್ಮಾ ಬಸವೇಶ್ವರರು. ಅಂದು ವರ್ಣಾಶ್ರಮ ಧರ್ಮ ಎಲ್ಲರಲ್ಲೂ ಬೇರು ಬಿಟ್ಟಿತ್ತು. ಮೇಲು-ಕೀಳು, ಉಚ್ಚ-ನೀಚ, ಬಡವ-ಬಲ್ಲಿದ, ಸ್ತ್ರೀ-ಪುರುಷ ಎಂಬ ಭೇದ ಭಾವಗಳು ಜನತೆಯಲ್ಲಿ ರಕ್ತಗತವಾಗಿದ್ದುವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ- ಎಂಬ ವಿಂಗಡನೆ ಅಂದಿನ ಸಮಾಜದಲ್ಲಿ ವಿಷಮಯ ವಾತಾವರಣ ಬಿಂಬಿಸಿತ್ತು. ಸಮಾಜ ಅಂದು ಒಡೆದು ಹೋಳು-ಹೋಳಾಗಿತ್ತು. ಬ್ರಾಹ್ಮಣ ಶ್ರೇಷ್ಠ, ಶೂದ್ರ ಕನಿಷ್ಠ ಎಂಬ ಭಾವನೆ ಎಲ್ಲೆಂದರಲ್ಲಿ ಹಬ್ಬಿ ಹರಡಿತ್ತು. ಇದನ್ನು ಜನತೆಯಿಂದ ಕಿತ್ತೊಗೆಯಲು ಬಸವಣ್ಣನವರು ಕಂಕಣಬದ್ಧರಾದರು. ಜಾತಿ ಭೇದ, ಸ್ತ್ರೀ-ಪುರುಷ ಭೇದ, ವರ್ಗಭೇದಗಳನ್ನು ಹೋಗಲಾಡಿಸಿ ಎಲ್ಲರೂ ಒಂದೇ, ಎಲ್ಲರೂ ನಮ್ಮವರೇ ಮೇಲು-ಕೀಳು ಎಂಬುದೇ ಇಲ್ಲವೆಂದು ಸಾರುವುದರ ಮೂಲಕ ಮಾನವತೆಯನ್ನು ಮೆರೆದರು. ಸಮಾನತೆ-ಸೋದರತ್ವ-ಕೋಮುಸಾಮರಸ್ಯ ಭಾವನೆಗಳನ್ನು ಜನಸಮುದಾಯದಲ್ಲಿ ಬಿತ್ತಿ ಬೆಳೆಯುವುದರ ಮೂಲಕ ಬಸವಣ್ಣನವರು ಜನಮನ್ನಣೆಯನ್ನು ಗಳಿಸಿದರು. ಹನ್ನೆರಡನೇ ಶತಮಾನದಲ್ಲಿ ಶರಣ ಚಳವಳಿಯ ಮುಂದಾಳತ್ವವನ್ನು ವಹಿಸುವುದರ ಮೂಲಕ ಅವರು ಸಮಾಜ ಸುಧಾರಕರಾಗಿ, ಪ್ರಗತಿಶೀಲರಾಗಿ, ವೈಚಾರಿಕರಾಗಿ ಬೆಳೆದದ್ದು ಕನ್ನಡ ನಾಡು ಅಷ್ಟೇ ಏಕೆ? ಇಡೀ ವಿಶ್ವ ಕಂಡ ಅದ್ಭುತ ವ್ಯಕ್ತಿ ಅವರು.

ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶರಣರು ಅಂದಿನ ಸಮಾಜದಲ್ಲಿದ್ದ ಕರ್ಮಠತನವನ್ನು, ಜಾತೀಯತೆಯನ್ನು, ಮೌಢ್ಯ-ಕಂದಾಚಾರಗಳನ್ನು; ಸ್ತ್ರೀ-ಪುರುಷ ಭೇದಭಾವವನ್ನು ಹೋಗಲಾಡಿಸಲು ಬಹುವಾಗಿ ಪ್ರಯತ್ನಿಸಿದರು. ಹೋರಾಟ ನಡೆಸಿದರು. ಬಸವಣ್ಣನವರು ವಿಶೇಷವಾಗಿ ಮಹಿಳೆಯರ ಅಭ್ಯುದಯಕ್ಕಾಗಿ, ಅವರೂ ಪುರುಷರ ಸಮಾನರೆಂದು ಹೋರಾಟ ನಡೆಸಿದುದು ಅಂದಿನ ಕಾಲದಲ್ಲಿ ಅತ್ಯಂತ ಪ್ರಗತಿಪರ



ವಿಚಾರವಾಗಿದೆ. ಮಹಾರಾಷ್ಟ್ರದ ಮಹಾನ್ ಸಂತರೂ, ಪ್ರಗತಿಪರ ವಿಚಾರವಾದಿಗಳೂ ಆದ ಮಹಾತ್ಮ ಜ್ಯೋತಿಬಾ ಫುಲೆಯವರು ಬಸವಣ್ಣನವರು ನಡೆಸಿದ ಹೋರಾಟವನ್ನೇ ಹೆಚ್ಚು ಕಡಿಮೆ ಮುಂದುವರಿಸಿದುದನ್ನು ಅರಿಯುವೆವು. ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮಹಿಳೆಯರೂ ಪುರುಷರಂತೆ ಎಲ್ಲಾ ಕ್ಷೇತ್ರಗಳಲ್ಲೂ ಮುಂದೆ ಬರಬೇಕೆಂದು ಮಹಾತ್ಮ ಜ್ಯೋತಿಬಾ ಫುಲೆ ಅವರು ಹಾಗೂ ಅವರ ಧರ್ಮಪತ್ನಿ ಮಾತಾ ಸಾವಿತ್ರಿಬಾಯಿಫುಲೆ ಅವರು ಬಹುವಾಗಿ ಶ್ರಮಿಸಿದರು. ಬಸವಣ್ಣ ಹಾಗೂ ಜ್ಯೋತಿಬಾ ಫುಲೆ ಅವರು ವಿಶೇಷವಾಗಿ ಕೆಳವರ್ಗದವರನ್ನು, ದಲಿತರನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದೆ ತರಲು ಅವಿರತ ಶ್ರಮಿಸಿದುದಕ್ಕೆ ಅವರ ವಚನ ಹಾಗೂ ಕೃತಿಗಳೇ ನಮಗಿಂದು ಸಾಕ್ಷ್ಯವನ್ನು ಒದಗಿಸುತ್ತವೆ. ಮನುಷ್ಯ ಯಾವುದೋ ಜಾತಿಯಲ್ಲಿ, ಯಾರ ಹೊಟ್ಟೆಯಲ್ಲೋ ಹುಟ್ಟುವುದು ಸಹಜ. ಹುಟ್ಟಿದಾಕ್ಷಣಕ್ಕೆ ಅವರನ್ನು ಮೇಲು-ಕೀಳು ಎಂದು ಭಾವಿಸಕೂಡದು. ದಲಿತರ ಹೊಟ್ಟೆಯಲ್ಲಿ ಹುಟ್ಟಿದವರು ಕೀಳು, ಬ್ರಾಹ್ಮಣರ ಹೊಟ್ಟೆಯಲ್ಲಿ ಹುಟ್ಟಿದವರು ಮೇಲು ಎಂದು ಭಾವಿಸುವ ಕಾಲವೊಂದಿತ್ತು. ಆದರೆ ಬಸವಣ್ಣನವರು ಮತ್ತು ಮಹಾತ್ಮ ಜ್ಯೋತಿಬಾ ಫುಲೆಯವರು ಹುಟ್ಟು ಮನುಷ್ಯನ ಶ್ರೇಷ್ಠತ್ವವನ್ನು ಅಳೆಯುವ ಸಾಧನವಲ್ಲ, ಆತ ಹುಟ್ಟಿದ ಮೇಲೆ ಎಂಥೆಂಥಾ ಕಾರ್ಯಗಳನ್ನು ಮಾಡುತ್ತಾನೆ. ಆ ಕಾರ್ಯಗಳ ಮೇಲೆ ಅವನ ಶ್ರೇಷ್ಠತ್ವವನ್ನು-ಕನಿಷ್ಠತ್ವವನ್ನು ಅಳೆಯಬೇಕೆಂದುದು ತುಂಬ ಸ್ವಾಗತಾರ್ಹವಾದುದಾಗಿದೆ. ಹುಟ್ಟು ಮನುಷ್ಯನ ಶ್ರೇಷ್ಠತ್ವವನ್ನು ಅಳೆಯುವ ಸಾಧನವಾಗಬಾರದೆಂಬುದಕ್ಕೆ ಎಲ್ಲ ಮಹಾತ್ಮರ ಸಹಮತವಿದೆ. ಅದಕ್ಕೇ ಬಸವಣ್ಣನವರು – 'ಇವನಾರವ, ಇವನಾರವ, ಇವನಾರವ ನೆಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ' ಎಂದುದು ಮಾನವ ಕುಲಕೋಟಿಗೇ ಮಾರ್ಗದರ್ಶಿಯಾಗುವಂಥ ನುಡಿಯಾಗಿದೆ. ಸಕಲ ಜೀವಜಂತುಗಳನ್ನು ಸಕಲ ಜೀವಾತ್ಮರನ್ನು ಗೌರವಭಾವನೆಯಿಂದ ಕಾಣಬೇಕೆಂಬುದು ಬಸವಣ್ಣನ ಧ್ಯೇಯವಾಗಿದೆ. ಈ ಧ್ಯೇಯವಾಕ್ಯಕ್ಕೆ ಭಾಷ್ಯ ಬರೆದಂತೆ ಬಸವಣ್ಣನು, ಬದುಕಿ ತೋರಿಸಿದುದಕ್ಕೆ ಆತನ ಅನೇಕ ವಚನಗಳು ನಮಗಿಂದು ಸಾಕ್ಷಿಯಾಗಿವೆ. "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ" ಎಂದು ನುಡಿದ ಬಸವಣ್ಣನ ನುಡಿ ದಿಟವಾದುದಾಗಿದೆ. ಜಾತಿಗಳು ನಾವು ಮಾಡುವ ಉದ್ಯೋಗದಿಂದಲೇ ಬಂದಂಥವು. ಜಾತಿಗೋಡೆಗಳನ್ನು ನಿರ್ಮಿಸಿದವರು ಮನುಷ್ಯರೇ. ಈ ಗೋಡೆಗಳನ್ನು ನೆಲಸಮ ಮಾಡಿದಾಗಲೇ ನಿಜವಾದ ಧರ್ಮವನ್ನು ಅರಿತುಕೊಳ್ಳಲಿಕ್ಕೆ ಸಾಧ್ಯವಾಗುವುದು. 'ಮನುಜ ಕುಲ ತಾನೊಂದೇ ವಲಂ' ಎನ್ನುವ ಪಂಪನ ವಾಣಿಯಂತೆ, ಮನುಜರೆಲ್ಲಾ ಒಂದೇ ಕುಲದವರು ಎಂದು ಭಾವಿಸಿದ ಶರಣರ ನುಡಿಗಡಣದಂತೆ, ಸ್ತ್ರೀ-ಪುರುಷರು ಉಚ್ಚ-ನೀಚರೆಂಬ ಭಾವನೆಯನ್ನು ಕಿತ್ತೊಗೆದು ಎಲ್ಲರೂ ಸಮಾನರು ಎಂದು ಸಾರಿದ ಮಹಾತ್ಮ ಜ್ಯೋತಿಬಾ ಫುಲೆಯವರ ಸಾರ್ವತ್ರಿಕ ಸತ್ಯ ನುಡಿಯಂತೆ ನಾವಿಂದು ನಡೆದುಕೊಳ್ಳಬೇಕಿದೆ, ಅವನ್ನು

ಆಚರಣೆಯಲ್ಲಿ ತರಬೇಕಿದೆ. ಮಹಾತ್ಮ ಜ್ಯೋತಿಬಾ ಫುಲೆಯವರಂತೂ ಅಂದು ಜಾತಿವ್ಯವಸ್ಥೆಯ ವಿರುದ್ಧ ಹೋರಾಡಿ ಸಮಾಜದಲ್ಲಿ ಸಮಾನತೆಯನ್ನು ತರಬೇಕೆನ್ನುವ ಕನಸು ಕಂಡಿದ್ದರು. ಬಸವಣ್ಣನವರೂ ಸಮಾನತೆಯ ಹಂದರದ ಮೇಲೆ ನವಸಮಾಜವನ್ನು ನಿರ್ಮಿಸಬೇಕೆಂದು ಕನಸು ಕಂಡಿದ್ದರು. ಇವರೀರ್ವರೂ ತಮ್ಮೀ ಕನಸನ್ನು ನನಸಾಗಿಸಲು ಹಲವು ಹತ್ತಾರು ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಪೂರೈಸಿದುದನ್ನು ನಾವು ಅರಿಯುವೆವು. ಶಿಕ್ಷಣ ಎಲ್ಲರಿಗೂ ದೊರೆಯಬೇಕು. ಶಿಕ್ಷಣ ದೊರೆತಲ್ಲದೆ ಜನತೆಯಲ್ಲಿ ಮನೆಮಾಡಿಕೊಂಡಿದ್ದ ಅಜ್ಞಾನ ತೊಲಗದು ಎಂದು ಈರ್ವರೂ ನಂಬಿದ್ದರು. ಶಿಕ್ಷಣ ಪ್ರಸಾರಕ್ಕಾಗಿ ಈರ್ವರೂ ಹಲವು ಹತ್ತು ದಿಸೆಯಲ್ಲಿ ಶ್ರಮಿಸಿದರು. ಬಸವಣ್ಣ ಅಂದು ನಡೆಸಿದ ದಾಸೋಹ ಮಹಾಮನೆಯಲ್ಲಿನ ಕಾರ್ಯಕ್ರಮಗಳಲ್ಲಿ ಅನುಭವ ಮಂಟಪದಲ್ಲಿ ನಡೆಸಿದ ಆಧ್ಯಾತ್ಮಿಕ ಚರ್ಚೆಗಳಲ್ಲಿ ಅನೇಕ ಜನ ಶರಣ-ಶರಣೆಯರು ಪಾಲ್ಗೊಂಡು ತಮ್ಮ ಭಾವನೆಗಳನ್ನು ವಿನಿಮಯಮಾಡಿಕೊಂಡರು. ಕೆಲವರು ಆ ಭಾವನೆಗಳಿಗೆ ವಚನಗಳ ರೂಪು ಕೊಟ್ಟರು. ಅವೇ ಇಂದು ನಮಗೆ ವಚನಗಳಾಗಿ, ಅಮೂಲ್ಯ ನಿಧಿಗಳಾಗಿ ದೊರೆತಿವೆ. ಸಾಕ್ಷರತೆಯ ಪ್ರಮಾಣ ಅತ್ಯಂತ ಕಡಿಮೆಯಿದ್ದ ಅಂದಿನ ದಿನಮಾನಗಳಲ್ಲಿ ಹಲವು ಕಾಯಕಗಳನ್ನು ಕೈಕೊಂಡ ಸಮಾಜದ ವಿವಿಧ ಸ್ತರದ ಶರಣ-ಶರಣೆಯರು ವಚನಗಳನ್ನು ಬರೆದದ್ದು ಅದ್ವಿತೀಯವಾದುದಾಗಿದೆ. ಕಮ್ಮಾರ, ಬಡಿಗ, ಅಗಸ, ನಾಪಿತಕ್, ಅಂಬಿಗ, ವೈದ್ಯ, ದನಗಾಹಿ, ಹೂಗಾರ, ಕೃಷಿಕ, ಕೂಲಿಕಾರ ಚರ್ಮಕಾರ, ಬೆಸ್ತ ಮುಂತಾದ ವೃತ್ತಿಗಳಲ್ಲಿ ತೊಡಗಿದ ಶರಣ-ಶರಣೆಯರು ಅಂದು ಶಿಕ್ಷಿತರಾಗಿ ವಚನ ರಚನೆಗೆ ತೊಡಗಿದುದು ನಿಜಕ್ಕೂ ಸ್ವಾಗತಾರ್ಹವಾದುದಾಗಿದೆ. ಇದರಂತೆಯೇ ಮಹಾತ್ಮಜ್ಯೋತಿಬಾಫುಲೆಯವರು ಮಹಾರಾಷ್ಟ್ರ ರಾಜ್ಯದಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ಹಿಂದುಳಿದವರನ್ನು ಶಿಕ್ಷಿತರನ್ನಾಗಿ ಮಾಡಲು ಶಾಲೆಗಳನ್ನು ತೆರೆದು ಅವಿರತ ಶ್ರಮಿಸಿದುದು ಮೆಚ್ಚುವಂಥದಾಗಿದೆ. ವರ್ಣಾಶ್ರಮಧರ್ಮದ ಆಧಿಕ್ಯವಿದ್ದ ಅಂದಿನ ಸಮಾಜದಲ್ಲಿ ವಿದ್ಯೆ ಪಡೆಯುವ ಹಕ್ಕು ಬ್ರಾಹ್ಮಣರಿಗೇ ಮೀಸಲಾಗಿತ್ತು. ಇನ್ನುಳಿದವರು ಹಾಗೂ ದಲಿತರು ವಿದ್ಯೆ ಪಡೆಯುವ ಹಕ್ಕಿನಿಂದ ವಂಚಿತರಾಗಿದ್ದರು. ಅಷ್ಟೇ ಅಲ್ಲ ದಲಿತರು ವೇದ-ಮಂತ್ರಗಳನ್ನು ಕೇಳಿಸಿಕೊಂಡರೆ ಅವರ ಕಿವಿಯಲ್ಲಿ ಕಾಸಿದ ಸೀಸವನ್ನು ಹೊಯ್ಯುತ್ತಿದ್ದರು. ಮಂತ್ರಪಠನ ಮಾಡಿದರೆ ಅವರ ನಾಲಿಗೆಯನ್ನು ಕತ್ತರಿಸಲಾಗುತ್ತಿತ್ತು. ಇಂಥ ಹೇಯವಾದ, ತಾರತಮ್ಯದಿಂದ ಕೂಡಿದ ಸಮಾಜದಲ್ಲಿ ಜ್ಯೋತಿಬಾ ಫುಲೆ ಹಾಗೂ ಅವರ ಪತ್ನಿ ಸಾವಿತ್ರಿಬಾಯಿ ಅವರು ಕೆಳವರ್ಗದವರಿಗಾಗಿ ದಲಿತರಾಗಿ ಶಾಲೆಗಳನ್ನು ತೆರೆದು ಅವರನ್ನು ಶಿಕ್ಷಿತರಾಗಿಸಲು ತಮ್ಮ ಜೀವಿತದುದ್ದಕ್ಕೂ ಹೋರಾಟ ನಡೆಸಿದರು. ಇವರ ಈ ಕಾಯಕವನ್ನು ಕಂಡು ಹೊಟ್ಟೆಕಿಚ್ಚುಪಟ್ಟುಕೊಂಡ ಮೇಲ್ವರ್ಗದವರು ಇವರನ್ನು ಪರಿಪರಿಯಾಗಿ ಕಾಡಿದರು. ಶಾಲೆಗಳನ್ನು ಮುಚ್ಚುವಂತೆ ಒತ್ತಡ ತಂದರು. ಜ್ಯೋತಿ ಬಾಫುಲೆಯವರ ತಂದೆಯ ಮೇಲೆ ಒತ್ತಡ ತಂದು ಜ್ಯೋತಿಬಾ ಫುಲೆಯವರನ್ನು ಮೇಲ್ವರ್ಗದವರು ಊರು ಬಿಡಿಸಿದರು. ಸ್ವತಃ



ಶಿಕ್ಷಕಿಯಾಗಿ ಕೆಳವರ್ಗದವರಿಗೆ ಶಿಕ್ಷಣ ನೀಡಲು ಪಣತೊಟ್ಟ ಫುಲೆಯವರ ಧರ್ಮಪತ್ನಿ ಸಾವಿತ್ರಿಬಾಯಿ ಅವರ ಮೇಲೆ ಹೊಲಸು ಎಸೆದರು, ಗಾಜಿನ ಚೂರು ಎಸೆದರು, ನಾನಾ ವಿಧದ ಕಷ್ಟಗಳನ್ನು ಕೊಟ್ಟರು. ಮೇಲ್ವರ್ಗದವರು ಎಷ್ಟೇ ಕಷ್ಟ ಕೊಟ್ಟರೂ ಸಾವಿತ್ರಿ ಬಾಯಿಯವರು ತಮ್ಮ ಕರ್ತವ್ಯದಿಂದ ಕಿಂಚಿತ್ತೂ ಕದಲಲಿಲ್ಲ. ತಮ್ಮ ಮೈಮೇಲೆ ಹೊಲಸು ಎರಚಿದರೂ ಅದನ್ನು ಸಹಿಸಿಕೊಂಡು ಬೇರೆ ಉಡಿಗೆ ತೊಟ್ಟು ಶಿಕ್ಷಣ ನೀಡುವ ಪವಿತ್ರ ಕಾರ್ಯದಲ್ಲಿ ಅವರು ತೊಡಗಿದುದು ನಿಜಕ್ಕೂ ಅನುಕರಣೀಯವಾದುದಾಗಿದೆ. ಬಡವರ, ಕೆಳವರ್ಗದವರ ದೀನದಲಿತರ ಬಾಳಿಗೆ ಶಿಕ್ಷಣದ ಮೂಲಕ ಬೆಳಕು ನೀಡಿದರು. ಶಿಕ್ಷಣದ ಮೂಲಕ ಅವರಲ್ಲಿ ಮನೆಮಾಡಿಕೊಂಡಿದ್ದ ಅಜ್ಞಾನವನ್ನು ಹೊಡೆದೋಡಿಸಿದರು. ಕೆಳವರ್ಗದವರು ಮುಂದೆ ಬರಬೇಕಾದರೆ ಅವರು ಶಿಕ್ಷಣ ಪಡೆಯುವುದು ಒಂದೇ ದಾರಿ ಎಂಬುದನ್ನಿವರು ಮನಗಂಡಿದ್ದರು. ಆದ್ದರಿಂದ ಶಿಕ್ಷಣ ನೀಡುವ ಪವಿತ್ರಕಾರ್ಯದಲ್ಲಿ ಇವರು ತನ್ಮಯರಾಗಿದ್ದರು.

ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ನಾವಿಂದು ಶಿಕ್ಷಣ ತಜ್ಞರೆಂದೂ, ಭಾರತ ಸಂವಿಧಾನದ ಜನಕರೆಂದೂ, ದೀನ ದಲಿತರ ಬಂಧುವೆಂದೂ ಕೊಂಡಾಡುವೆವು. ಅವರು ಕೆಸರಿನಲ್ಲಿ ಅರಳಿದ ಕಮಲವಿದ್ದಂತೆ. ಶಿಕ್ಷಣ ಪಡೆಯಲು ಅವರು ನಡೆಸಿದ ಹೋರಾಟ ರೋಮಾಂಚನಕಾರಿಯಾದುದು. ಇತಿಹಾಸದ ಪುಟಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಇಂದು ಅಜರಾಮರರಾಗಿದ್ದಾರೆ. ಅವರನ್ನು ಇಂದು ಜಗತ್ತೇ ಸ್ಮರಿಸುತ್ತದೆ. ಆದರೆ ಇಂಥ ಮಹಾತ್ಮರು ಮಹಾತ್ಮ ಜ್ಯೋತಿಬಾಫುಲೆ ಅವರನ್ನು ತಮ್ಮ ಗುರುಗಳೆಂದು ಭಾವಿಸಿದ್ದರು. ಗೌತಮ ಬುದ್ಧ, ಕಬೀರ ಹಾಗೂ ಮಹಾತ್ಮ ಜ್ಯೋತಿಬಾ ಫುಲೆ ಅವರನ್ನು ಅಂಬೇಡ್ಕರರು ತಮ್ಮ ಗುರುಗಳೆಂದು, ಮಾರ್ಗದರ್ಶಿಗಳೆಂದು ಗೌರವದಿಂದ ಸ್ಮರಿಸಿಕೊಳ್ಳುತ್ತಿದ್ದರು. ಇದರಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಅಂದು ಮಹಾತ್ಮ ಜ್ಯೋತಿಬಾಫುಲೆ ಅವರು ಕೆಳವರ್ಗಗಳ ಹಾಗೂ ದೀನದಲಿತರ ಏಳ್ಗೆಗಾಗಿ ಎಷ್ಟೊಂದು ಶ್ರಮಿಸಿದರು ಎಂಬುದು ತಿಳಿಯುವುದು. ಅವರು ಸ್ತ್ರೀಯರ, ಹಿಂದುಳಿದವರ ಏಳ್ಗೆಗಾಗಿ 'ಸತ್ಯಶೋಧಕ ಸಮಾಜ'ವನ್ನು ಹುಟ್ಟುಹಾಕಿದರು. ಈ ಸಂಸ್ಥೆಯ ಮೂಲಕ ಅನೇಕ ಪ್ರಗತಿಪರ ವಿಚಾರಗಳನ್ನು ತಿಳಿಸುತ್ತ ಜನತೆಯ ಅಭಿವೃದ್ಧಿಗಾಗಿ ಶ್ರಮಿಸಿದರು. ಶೂದ್ರರಿಗೆ ಶಿಕ್ಷಣ ಕೊಡಿಸುವಲ್ಲಿ ಈ ಸಮಾಜದ ಮೂಲಕ ಬಹುವಾಗಿ ಫುಲೆ ದಂಪತಿಗಳು ಶ್ರಮಿಸಿದರು. ೧೮೪೮ರಲ್ಲಿ ಪುಣೆಯಲ್ಲಿ ಶೂದ್ರರಿಗಾಗಿ ಶಿಕ್ಷಣಕೊಡಿಸಲು ಶಾಲೆಯೊಂದನ್ನು ಪ್ರಾರಂಭಿಸಿದರು. ಆಗ ಇನ್ನುಳಿದ ಶಾಲೆ-ಕಾಲೇಜುಗಳಲ್ಲಿ ಬ್ರಾಹ್ಮಣರಿಗೆ ಹಾಗೂ ಇನ್ನುಳಿದ ಮುಂದುವರಿದವರಿಗೆ ಮಾತ್ರ ಶಿಕ್ಷಣ ಲಭ್ಯವಾಗುತ್ತಿತ್ತು. ಶೂದ್ರರಿಗೆ ಅಕ್ಷರದ ಅರಿವು ಮೂಡಿಸಿ ಅವರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ತರಬೇಕೆಂದು ಫುಲೆ ದಂಪತಿಗಳು ಪಟ್ಟ ಪರಿಶ್ರಮ ಅಷ್ಟಿಷ್ಟಲ್ಲ. ಇವರು ತೆಗೆದ ಶಾಲೆಯನ್ನು ಮುಚ್ಚಬೇಕೆಂದು ವೈದಿಕ ಸಮುದಾಯದವರು ಒತ್ತಡ ತಂದುದಲ್ಲದೆ, ಅವರ ತಾಯಿ ತಂದೆಗಳನ್ನು ಅಗಲಿ

ಬೇರೆಡೆ ವಾಸಿಸುವಂತೆ ಮಾಡಿದರು. ಫುಲೆ ದಂಪತಿಗಳಿಗೆ ತಮ್ಮ ಬದುಕಿನುದ್ದಕ್ಕೂ ಸಂಪ್ರದಾಯವಾದಿಗಳಿಂದ ಕರ್ಮಠರಿಂದ ವಿಧ ವಿಧವಾದ ಕಷ್ಟ ಕೋಟಲೆಗಳು ಉಂಟಾದುವು. ಆದರೂ ಅವರು ಈ ಕಷ್ಟಗಳನ್ನೆಲ್ಲ ಮೆಟ್ಟಿನಿಂತರು. ಅವರು ಜ್ಞಾನವೆಂಬ ಜ್ಯೋತಿಯನ್ನು ಸರ್ವರ ಹೃದಯದಲ್ಲಿ ಬೆಳಗಿಸಲು ತಾವು ಅಗ್ನಿಕುಂಡದಲ್ಲಿ ನಿಂತರು. ಮೇಣಬತ್ತಿ ತನ್ನನ್ನೇ ಸುಟ್ಟುಕೊಂಡು ಸುತ್ತಣ ಪರಿಸರಕ್ಕೆಲ್ಲ ಬೆಳಕು ನೀಡುವಂತೆ ಬೆಳಕು ನೀಡಿದರು ಸಕಲರಿಗೂ ಲೇಸಾಗಲಿ ಎಂಬುದೇ ಅವರ ಜೀವನದ ಧ್ಯೇಯವಾಗಿತ್ತು.

ಮಹಾತ್ಮ ಬಸವಣ್ಣನವರೂ ವಿಶ್ವದ ಎಲ್ಲ ಜನರೂ ನನ್ನವರು, ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂದು ಭಾವಿಸಿದರು ಮತ್ತು ಆ ರೀತಿ ತಮ್ಮ ಬದುಕಿನುದ್ದಕ್ಕೂ ನಡೆದುಕೊಂಡರು. ಅವರು ತಮ್ಮೊಂದು ವಚನದಲ್ಲಿ ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ, ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ ಎಂದುದು ಅವರ ವಿಶಾಲಹೃದಯಕ್ಕೆ ಸಾಕ್ಷಿಯಾಗಿದೆ. ಜನರೆಲ್ಲರೂ ವಿಚಾರವಂತರಾಗಬೇಕು, ಶಿಕ್ಷಿತರಾಗಬೇಕು, ಮೌಢ್ಯಗಳನ್ನೆಲ್ಲ ಕಿತ್ತೊಗೆಯಬೇಕೆಂದು ವಿಧವಿಧವಾದ ರೀತಿಯಲ್ಲಿ ಬಸವಣ್ಣನವರು ಜನಸಾಮಾನ್ಯರಿಗೆ ಬೋಧೆ ಮಾಡಿದ್ದುಂಟು. ಶುಷ್ಕ ಧಾರ್ಮಿಕ ಆಚರಣೆಗಳಲ್ಲಿ ತೊಡಗಿದ್ದ ಕರ್ಮಠರನ್ನು ಹಿಂದೆ ಮುಂದೆ ನೋಡದೆ ಅವರು ಖಂಡಿಸಿದ್ದುಂಟು. ತಮ್ಮ ಅನೇಕ ವಚನಗಳಲ್ಲಿ ವಿಡಂಬಿಸಿದ್ದುಂಟು. ಮಡಿ-ಮೈಲಿಗೆ, ಮಾಡುವ ಕರ್ಮಠ ಭಕ್ತರನ್ನಂತೂ ಅವರು ತರಾಟೆಗೆ ತೆಗೆದುಕೊಂಡಿದ್ದಾರೆ. ಅಂಥವರು "ಮೀಂಬುಲಿಗನ ಹಕ್ಕಿಯಂತೆ ನೀರತಡಿಯಲ್ಲಿದ್ದು ಮುಳು ಮುಳುಗಿ ಏಳುವರಯ್ಯಾ", ನೀರಕಂಡಲ್ಲಿ ಮುಳುಗುವರಯ್ಯಾ, ಮರನ ಕಂಡಲ್ಲಿ ಸುತ್ತುವರಯ್ಯ, ಬತ್ತುವ ಜಲ, ಒಣಗುವ ಮರ, ದೇವರೆಂದು ತಿಳಿದಿರುವರಯ್ಯ ಎಂದು ವಿಡಂಬಿಸಿದ್ದುಂಟು. ಸಕಲ ಜನರಲ್ಲಿ ವೈಚಾರಿಕ ಭಾವನೆಯನ್ನು ಒತ್ತಿ ಬೆಳೆದು ಎಲ್ಲರನ್ನೂ ಶಿಕ್ಷಿತರನ್ನಾಗಿ ಮಾಡುವ ಉದ್ದೇಶ ಬಸವಣ್ಣನವರದಾಗಿತ್ತು. ಅದಕ್ಕೆಂದೇ ಅವರು ಜಾತಿ-ಮತ-ಪಂಥ ಇವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಮನುಷ್ಯರೆಲ್ಲಾ ಒಂದೇ ಎಂದು ಭಾವಿಸಿದರು ಮತ್ತು ಆ ರೀತಿ ತಮ್ಮ ಅನೇಕ ವಚನಗಳಲ್ಲಿ ನುಡಿದರು. ಎಲ್ಲರ ಮೈಯಲ್ಲಿ ಹರಿವ ರಕ್ತ ಒಂದೇ, ಎಲ್ಲರೂ ಉಸಿರಾಡಿಸುವ ಗಾಳಿ ಒಂದೇ, ಎಲ್ಲರೂ ನಿಂತ ನೆಲ ಒಂದೇ, ಎಲ್ಲರೂ ಬಳಸುವ ಜಲ ಒಂದೇ ಹೀಗಿರುವಾಗಿ ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಎಂಬ ಭೇದ ಭಾವ ಎಲ್ಲಿದೆ? ಎಂದು ಅವರು ಪ್ರಶ್ನಿಸಿದ್ದು ನಿಜಕ್ಕೂ ಅಂದಿನ ದಿನಮಾನಗಳಲ್ಲಿ ತುಂಬ ಪ್ರಗತಿಪರವಾದುದಾಗಿದೆ. ಇಷ್ಟೇ ಅಲ್ಲ ಅವರು ಕಲ್ಲುಮಣ್ಣುಗಳಿಂದ ಕಟ್ಟಿದ ದೇವಾಲಯ ಬಿದ್ದುಹೋಗುತ್ತದೆ. ಅದಕ್ಕೆ ಚಲನಶೀಲತೆ ಇಲ್ಲ. ಮನುಷ್ಯನ ದೇಹವೇ ದೇವಾಲಯ, ಆತನ ಒಳಗಿರುವ ಆತ್ಮವೇ ಚೈತನ್ಯವೇ ದೇವರೆಂದು ನುಡಿದುದು ತುಂಬ ಸಮಂಜಸವಾದುದಾಗಿದೆ. ಕಲ್ಲು-ಮಣ್ಣು-ಇಟ್ಟಿಗೆ-ಸಿಮೆಂಟು-ಗಾರೆಗಳಿಂದ ಕಟ್ಟಿದ ದೇವಾಲಯಕ್ಕೆ ನಾಶವೆಂಬುದು ಇದ್ದೇ ಇದೆ. ದೇವಾಲಯ ಬಿದ್ದ ಮೇಲೆ ದೇವರಲ್ಲಿ ಉಳಿಯುತ್ತದೆ. ಮನುಷ್ಯನ ಅಂತರಂಗದಲ್ಲಿರುವ ಚೈತನ್ಯವೇ ದೇವರು.



ಅದು ಚಲನಶೀಲವಾಗಿರುತ್ತದೆ. ಮನುಷ್ಯನಿಗೆ-ಮನುಷ್ಯತ್ವಕ್ಕೆ ಅವರು ತುಂಬ ಬೆಲೆ ಕೊಟ್ಟುದುದನ್ನು ಅವರ ವಚನಗಳುದ್ದಕ್ಕೂ ಕಾಣುವೆವು. ಶರಣ ಚಳುವಳಿಯ ನೇತೃತ್ವ ವಹಿಸಿದ ಬಸವಣ್ಣನವರದು ತುಂಬ ಪ್ರಗತಿಪರವಾದ, ಚಿಂತನ ಪರವಾದ, ವೈಜ್ಞಾನಿಕ ಮನೋಭಾವವನ್ನುಳ್ಳ ಮನಸ್ಸು. ಅವರು ಎಂದೂ ಪರಿಸ್ಥಿತಿಯೊಡನೆ ಅಂದಿನ ಸಮಕಾಲೀನ ಸಮಾಜದ ವಿದ್ಯಮಾನಗಳೊಂದಿಗೆ – ಸಾಂಪ್ರದಾಯಿಕರೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ. ಆನೆ ನಡೆದುದೇ ಮಾರ್ಗ ಎಂಬಂತೆ ಅವರು ಧೀರರಾಗಿ ನಡೆದು ತೋರಿಸಿದರು. ಮಹಿಳೆಯರಿಗೂ ಅವರು ಸ್ವಾತಂತ್ರ್ಯ ನೀಡಿದರು. ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷಗಳಲ್ಲಿ ಮಹಿಳೆಯೂ ಪುರುಷನ ಸಮ ಭಾಗ ಸ್ವೀಕರಿಸಲು ಅರ್ಹಳೆಂಬುದನ್ನು ಇತಿಹಾಸದಲ್ಲಿ ಮೊದಲಬಾರಿಗೆ ತೋರಿಸಿಕೊಟ್ಟುದು ಅವರ ಹೆಚ್ಚುಗಾರಿಕೆಯಾಗಿದೆ.

ಬಸವಣ್ಣನವರ ಪ್ರಗತಿಪರ ಆಲೋಚನೆಗಳನ್ನು ನಾವು ಮಹಾತ್ಮ ಜ್ಯೋತಿಬಾಫುಲೆ ಅವರಲ್ಲಿ ದಟ್ಟವಾಗಿ ಕಾಣುವೆವು. ಅವರು ತಮ್ಮ ಮನೆಯನ್ನೇ ಬಡ ಹಾಗೂ ಹಿಂದುಳಿದ ಅಸ್ಪೃಶ್ಯ ಮಕ್ಕಳ ಶಿಕ್ಷಣಕ್ಕಾಗಿ ಬಿಟ್ಟುಕೊಟ್ಟುದು, ಅಸ್ಪೃಶ್ಯರಿಗೆ ಕುಡಿಯಲು ನೀರು ಬೇಕೆಂದು ತಾವು ಬಳಸುವ ತಮ್ಮ ಸ್ವಂತ ಭಾವಿಯನ್ನೇ ನೀಡಿದುದು ಅಂದಿನ ದಿನಗಳಲ್ಲಿ ತುಂಬ ಪ್ರಗತಿಪರವಾದುದಾಗಿದೆ. ಆದುದರಿಂದಲೇ ಇವರಿಗೆ ಜನ ಮಹಾತ್ಮಾ ಎಂದು ಕರೆದಿರುವಂತಿದೆ. ಗಾಂಧೀಜಿಯವರಿಗಿಂತ ಮೊದಲೇ ಇವರಿಗೆ 'ಮಹಾತ್ಮ' ಎನ್ನುವ ಗೌರವಸೂಚಕ ವಿಶೇಷಣ ಪ್ರಾಪ್ತವಾದುದು ಇವರ ಹೆಚ್ಚುಗಾರಿಕೆಯಾಗಿದೆ. ವಿಧವೆಯರು ತಮ್ಮ ಬದುಕನ್ನು ಸುಸೂತ್ರವಾಗಿ ಸಾಗಿಸಲಿ ಎಂದು ಅವರಿಗಾಗಿ ವಿಧವಾಶ್ರಮವನ್ನು ಸ್ಥಾಪಿಸಿದರು. 'ಸತ್ಯಶೋಧಕ' ಸಂಘವನ್ನು ಕಟ್ಟುವುದರ ಮೂಲಕ ಜನಕಲ್ಯಾಣ ಕಾರ್ಯಗಳನ್ನು ಮಾಡಿದರು. ಪುಣೆಯ ಮಹಾನಗರ ಪಾಲಿಕೆಯ ಸದಸ್ಯರಾಗಿ ಜನಸೇವೆ ಮಾಡಿದರು. ಕೃಷಿಕರ ಅಭಿವೃದ್ಧಿಗಾಗಿ ಹೋರಾಟ ಮಾಡಿದರು ಜನತೆಯಲ್ಲಿ ಮನೆಮಾಡಿಕೊಂಡಿದ್ದ ಮೌಢ್ಯಗಳನ್ನು ತೊಲಗಿಸಲು ವಿಧವಿಧವಾಗಿ ಶ್ರಮಿಸಿದರು. ಮಹಿಳೆಯರು ವಿಧವೆಯಾದೊಡನೆ ಕೇಶಮುಂಡನ ಮಾಡಿಸ್ತಾ ಇದ್ದುದು ಇವರಿಗೆ ಸರಿ ಕಾಣಲಿಲ್ಲ. ಅದನ್ನು ತಡೆಯಲು ಶ್ರಮಿಸಿದರಲ್ಲದೆ, ಹಜಾಮರಿಗೆ ಕೇಶಮುಂಡನ ಮಾಡಬಾರದೆಂದು ವಿನಂತಿಸಿಕೊಂಡರು ಮತ್ತು ವಿಧವೆಯರೂ ಹಣೆಗೆ ಕುಂಕುಮ ಹಚ್ಚಿಕೊಳ್ಳಬೇಕೆಂದು ಅವರಿಗೆ ತಿಳಿಸಿ ಹೇಳಿದರು. ಇವರ ಇಂಥ ಕಾರ್ಯಗಳು ಸಂಪ್ರದಾಯವಾದಿಗಳಿಗೆ ಸರಿಕಾಣಲಿಲ್ಲ. ಆದರೂ ಅವರು ತಮ್ಮ ಈ ಪ್ರಗತಿಪರ ಕಾರ್ಯಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಲು ಹೋರಾಡಿದರು. ಜ್ಯೋತಿಬಾಫುಲೆ ಅವರಿಗೆ ಮಕ್ಕಳಿರಲಿಲ್ಲ. ಮಗುವೊಂದನ್ನು ದತ್ತು ತೆಗೆದುಕೊಂಡರು. ಆತನೇ ಯಶವಂತರಾವ್ ಫುಲೆ ಅವರು. ತಮ್ಮ ತಂದೆಯ ಪ್ರಗತಿಪರ ವಿಚಾರಗಳನ್ನು ಇವರು ಹೊಂದಿದ್ದರು. ಇವರು ತೀರಿಹೋದ ನಂತರ ಅಂಬೇಡ್ಕರ್ ಅವರು ತಮ್ಮ ಮಗನಿಗೆ ಯಶವಂತರಾವ್ ಎಂದು ಹೆಸರಿಟ್ಟರು. ಇದರಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರು ಜ್ಯೋತಿಬಾ ಫುಲೆ ಮನೆತನದ ಮೇಲಿಟ್ಟ ಪ್ರೀತಿ, ವಿಶ್ವಾಸ, ಗೌರವ ಎಷ್ಟೆಂಬುದು

ವಿದಿತವಾಗುವುದು. ಜ್ಯೋತಿಬಾಫುಲೆ ಅವರ ಪ್ರಭಾವ ಕೇವಲ ಡಾ. ಅಂಬೇಡ್ಕರ್ ಅವರ ಮೇಲಷ್ಟೇ ಆಗಲಿಲ್ಲ. ಅವರ ಪ್ರಭಾವ ಕೊಲ್ಹಾಪುರದ ಶಾಹು ಮಹಾರಾಜರ ಮೇಲೂ ಆಯ್ತು. ಅವರು ಮಹಾತ್ಮ ಫುಲೆ ಅವರ ಸಮಾಜಕಾರ್ಯಗಳನ್ನು, ಸಾಮಾಜಿಕ ನ್ಯಾಯ ಪದ್ಧತಿಯನ್ನು ಅನುಷ್ಠಾನಗೊಳಿಸಲು ಹೆಣಗಿದುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಹೇಗೆ ಕನ್ನಡ ನಾಡಿನಲ್ಲಿ ಬಸವಾದಿ ಶರಣರ ಪ್ರಭಾವ ಮುಂದಿನ ಕವಿಗಳ, ಶರಣರ, ಸಂತರ, ದಾಸರ, ಅನುಭಾವಿ ಕವಿಗಳ ಮೇಲಾದಂತೆ ಮಹಾತ್ಮ ಜ್ಯೋತಿಬಾ ಫುಲೆ ಅವರ ಪ್ರಭಾವವು ದೇಶದ ನಾನಾ ಕಡೆಗಳಲ್ಲಿದ್ದ ಮಹನೀಯರ ಮೇಲಾಯ್ತು. ಇದರ ಫಲವಾಗಿಯೇ ಅಸ್ಪೃಶ್ಯರು, ಕೆಳವರ್ಗದವರು, ಶೋಷಿತರು ಶಿಕ್ಷಣ ಪಡೆದು ಮುಂದೆ ಬರುವಂತಾಯಿತ್ತು. ಭಾರತದ ಇತಿಹಾಸದಲ್ಲಿ ಮಹಾತ್ಮ ಜ್ಯೋತಿಬಾ ಫುಲೆ ಅವರ ಹೆಸರು ಬಸವಣ್ಣನವರಂತೆಯೇ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದಾಗಿದೆ. ಈರ್ವರೂ ಸಮಾಜ ಸುಧಾರಣೆಗಾಗಿ, ಲೋಕಕಲ್ಯಾಣಕ್ಕಾಗಿ ತಮ್ಮ ಬದುಕಿನುದ್ದಕ್ಕೂ ಶ್ರಮಿಸಿದ ಮಹನೀಯರು. ಕೆಳವರ್ಗದವರ, ಅಸ್ಪೃಶ್ಯರ ಪರವಾಗಿ ನಿಂತುಕೊಂಡು ಹೋರಾಟ ನಡೆಸಿದುದನ್ನು ಈರ್ವರ ಚರಿತ್ರೆಯಲ್ಲೂ ಕಾಣುವೆವು.

□

ಬೇರಿಲ್ಲದ ಗಿಡುವಿಂಗೆ ಪರಿಮಳವಿಲ್ಲದ ಪುಷ್ಪ ಹುಟ್ಟಿ,
ರೂಹಿಲ್ಲದ ಅನಲನು ಅವಗ್ರಹಿಸಿತ್ತು ನೋಡಾ
ವೃಕ್ಷವಿಲ್ಲದ ದಳದಲ್ಲಿ ಒಂದು ಪಕ್ಷಿ ಹುಟ್ಟಿತ್ತು ನೋಡಾ !
ಅಲ್ಲಲ್ಲಿ ಕಾಣದೆ ನೆತ್ತಿಯ ನಯನದಲ್ಲಿ ನೋಡಿತ್ತಲ್ಲಾ !
ನಿತ್ಯಾನಂದ ಪರಿಪೂರ್ಣದ ನಿಲವಿನ
ಅಮೃತ ಬಿಂದುವಿನ ರಸವ ದಣಿಯಲುಂಡು
ಪಶ್ಚಿಮದಲ್ಲಿ ಗುಹೇಶ್ವರಲಿಂಗವ ಸ್ವೀಕರಿಸಿತ್ತಲ್ಲಾ !

- ಅಲ್ಲಮಪ್ರಭು

# ಎರಡು ಚಿಂತನೆಗಳು

**ಜಿ.ಹೆಚ್. ಹನ್ನೆರಡು ಮಠ**

## ಕಂಪ್ಯೂಟರ್ ಯುಗದಲ್ಲಿ ಕಾಯಕ ಸಮನ್ವಯ!

ಹೂವಿನೊಂದಿಗೆ ಬೇರನ್ನು ಪ್ರೀತಿಸಿದವರು ಶರಣರು!
ಬಾನಿನೊಂದಿಗೆ ನೆಲವನ್ನು ನಂಬಿದವರು!
ಅಮೃತಕ್ಕಿಂತ ಮೆಯ ಬೆವರನ್ನು ಅಧಿಕವೆಂದು ತಿಳಿದವರು!
ಶರಣರು ಗುಡಿಯ ಶಿಖರವನ್ನು ನೋಡಿದವರಲ್ಲ... ನೆಲದ
ಕಡ್ಡಿ-ಕೆಸರು ಕಂಡವರು.

ದೇಹವೇ ದೇವಾಲಯ.... ಮನವೇ ಲಿಂಗ.... ಮಾತೆಂಬುದು ಜ್ಯೋತಿರ್ಲಿಂಗ.... ಕಾಯಕವೇ ಕೈಲಾಸ ಎಂದ ಪ್ರಯೋಗಶೀಲ-ಪ್ರಗತಿಶೀಲ ದೈವಿ ಯಾತ್ರಿಗಳು ಅವರು.

ಈ ಜೀವನವೇ ಮಾಯೆ....ಕನಸು....ಭ್ರಮೆ....ಇಲ್ಯೂಜನ್.... ಮಿಥ್ಯೆ.... ಸುಳ್ಳು....ಟೊಳ್ಳು ಎಂದವರು ಶರಣರಲ್ಲ. ಬದುಕಿನ ದ್ವಂದ್ವಗಳನ್ನು ಒಪ್ಪಿಕೊಂಡು ಅಪ್ಪಿಕೊಂಡವರು ಅವರು. ಕರ್ತವ್ಯವೇ ಕರ್ತಾರನ ಕಮ್ಮಟವೆಂದು ನಂಬಿದವರು. ಕರ್ಮೋದ್ಯೋಗ ಭೂಮಿಯ ಕುಶಲ ರೂವಾರಿಗಳು. ಬ್ರಹ್ಮ ಸತ್ಯಾ ಜಗನ್ಮಿಥ್ಯಾ.... ಎಂದು ಓಡಿಹೋದ ಪಲಾಯನವಾದಿಗಳು ಅವರಲ್ಲವೇ ಅಲ್ಲ!

ಶ್ರೀ ಅರವಿಂದರು ಧರಣಿಯ ಮಹಾಪರಿವರ್ತನೆಯನ್ನು (Transformation of World) ಪೂರ್ಣಯೋಗವೆಂದು ಗುರುತಿಸಿದರು. ಅವರು ತಮ್ಮ "ಯೋಗ ಸಮನ್ವಯ" (Synthesis of Yoga) ಕೃತಿಯಲ್ಲಿ ಜೀವನವೇ ಯೋಗ (All life is yoga) ಎಂಬ ಸಿದ್ಧಾಂತವನ್ನು ಮುಂದಿಟ್ಟಂತೆ, ಶರಣರು ಪ್ರಯೋಗಮುಖಿಗಳಾಗಿ; ನಡೆಲಿಂಗ-ನುಡಿಲಿಂಗಗಳಾಗಿ, ಮಂತ್ರ ಶರೀರಿಗಳೂ-ವಿಭೂತಿಕಾಯರೂ-ಪ್ರಸಾದಶರೀರಿಗಳೂ ಆಗಿ; ಬದುಕಿನ ಹೊರಸು ಹೆಣೆದವರು.

"ಅಬ್ಬಾ.... ಆತಾ ಪುಣ್ಯಾತ್ಮಾ ಕಣ್ರೀ.... ದುಡೆಂಗಿಲ್ಲಾ ದುಃಖಾಪಡೆಂಗಿಲ್ಲಾ.... ಥೇಟ ದೊರಿಹಾಂಗ ಕುಂತ ಉಂತಾನೆ ನೋಡ್ರಿ....!"

ಹೀಗೆ ಒಂದು ಕಾಲಕ್ಕೆ ನಾವು ಹೇಳಿದ್ದು ಸುಳ್ಳಲ್ಲ! ಅರ್ಥಾತ್.... ಒಂದು ಹನಿ ಬೆವರು ಸುಡದೆ.... ಒಂದು ಗುಲಗಂಜಿ ರಕ್ತ ಖರ್ಚು ಮಾಡದೇ....ಇನ್ನೊಬ್ಬರ ಶ್ರಮದಲ್ಲಿ ಖೂಬಾಗಿ ಖುಶಿಯಿಂದ ಕೂಳು ತಿಂಬುವವನೇ ಕುಲಶ್ರೇಷ್ಠ ಅಂತ ಅಂದಿನ ನಮ್ಮ ಅಂದಾಜು.

ದುಡಿಮೆಯ ವ್ಯಾಕರಣ ಒಂದೇ ಆದರೂ ಅದರ ಸಂಧಿ ಸಮಾಸಗಳು ಇಂದಿನ ಸಂಕೀರ್ಣ ಯಾಂತ್ರೀಕೃತ ಜೀವನದಲ್ಲಿ ಬೇರೆ ರೂಪ ಪಡೆದದ್ದನ್ನು ನಾವು ಎಚ್ಚರಿಕೆಯಿಂದ ಗಮನಿಸಬೇಕಾಗಿದೆ. ಅಂದು ನಮ್ಮ ಕೈಕಾಲುಗಳು ಮಾಡುವ ಕೆಲಸಕಾರ್ಯ ಇಂದು ಸ್ವಯಂಚಾಲಿತ ಕಂಪ್ಯೂಟರ್ ಯಂತ್ರಗಳು ಸಾವಿರಪಟ್ಟು, ಲಕ್ಷಪಟ್ಟು ನಿಖರವಾಗಿ ಮಾಡಿ ಮುಗಿಸಿಬಿಡುತ್ತಿವೆ. ಈ ಇಲೆಕ್ಟ್ರಾನಿಕ್ ಉಪಕರಣಗಳು ಬಂದ ಮೇಲೆ ಮನುಷ್ಯ ಮೈಗಳ್ಳನಾದ ಎಂಬುದು ಹಳೆಯ ವ್ಯಾಖ್ಯಾನ. ಅದು ತಪ್ಪು. ಎಂದಿಗಿಂತ ಇಂದಿಗೆ ನಮ್ಮ ಹೊಸ ಯುಗದ ನವಯುವಕ-ಯುವತಿಯರಲ್ಲಿ 'ದುಡಿಮೆ'ಯ ಹೊಸ ರೂಪ ಸ್ವರೂಪಗಳು ಬದಲಾವಣೆಯ ವಿಭಿನ್ನ ಕಾರ್ಯಕ್ಷಮತೆಯಲ್ಲಿ ಹಂಚಿಹೋಗಿವೆ. ಈ ನಿಟ್ಟಿನಲ್ಲಿ ನಮ್ಮ ಅತ್ಯಾಧುನಿಕ ಯುವ ಚೇತನಗಳನ್ನು ನಾವು ಹಿಂದೆಮುಂದೆ ನೋಡದೆ.... 'ಕೆಲಸಗೇಡಿಗಳು'....'ಆಲಸಿಗಳು'....ಎಂದು ಮೂದಲಿಸುವುದು ಥೇಟ ಬಾವಿಯಲ್ಲಿ ಕುಂತ ಕಪ್ಪೆಯ ಮಾತು. ನಮ್ಮ ತರುಣರು ಖಂಡಿತವಾಗಿಯೂ ದುಡಿಯಬಲ್ಲವರಾಗಿದ್ದಾರೆ. ಆದರೆ ಅವರ ದುಡಿಮೆಯ ಮೆಥಮೆಟಿಕ್ಸ್ ಮಾತ್ರ ಬದಲಾಗಿದೆ, ಅಷ್ಟೆ.

ಈ ಕಂಪ್ಯೂಟರ್‌ಗಳನ್ನು ಕೂಡ ನಿರ್ಮಾಣ ಮಾಡಿದ "ಸೂಪರ್ ಕಂಪ್ಯೂಟರ್" ಒಂದಿದೆ. ಅದೇ ನಮ್ಮ ಮನಸ್ಸು-ದೇಹಗಳ ಜೀವಾತ್ಮ ಸಂಗಮ. ಶರೀರ ಸಂವಹನೆಗೆ ಶ್ರಮ, ವ್ಯಾಯಾಮ ಬೇಕೇಬೇಕು. ಕೇವಲ ಮಿದುಳಿಗೆ ಮಾತ್ರ ತಾಲೀಮು ಕೊಟ್ಟು, ಶರೀರವನ್ನು ಸುಮ್ಮನೆ ಕಂಪ್ಯೂಟರ್ ಯಂತ್ರದ ಮುಂದೆ ಕುಳ್ಳಿರಿಸಿದರೆ; ಮುಂದೆ ಒಂದು ದಿನ ಆ ಕಂಪ್ಯೂಟರ್ ಬಟನ್ ಕೂಡಾ ಒತ್ತಲಾರದಷ್ಟು ದುರ್ಬಲವಾದೀತು. ದುಡಿಯಬಲ್ಲದ್ದು ಉಳಿಯುತ್ತದೆ.... ದುಡಿಯಲಾರದ್ದು ಕೊಳೆಯುತ್ತದೆ.... ಇದು ಪ್ರಕೃತಿ ಧರ್ಮ. ಶರೀರಸ್ವಾಸ್ಥ್ಯಕ್ಕೆ ಆರೋಗ್ಯಕರ ಆಹಾರ ಹಾಗೂ ವ್ಯಾಯಾಮ ಎಷ್ಟು ಮಹತ್ವವೋ; ಮನದ ಸ್ವಾಸ್ಥ್ಯಕ್ಕೆ ನಿರಂತರ ತೊಡಗುವಿಕೆ ಹಾಗೂ ಧ್ಯಾನಯೋಗ ಅಷ್ಟೇ ಮಹತ್ವ.

ಗೀತೆ ಢಾಣಾಢಂಗುರವಾಗಿ ಸಾರಿದ ಸಿದ್ಧಾಂತವೇ ಕರ್ಮಯೋಗ. "ಕೂತು ಉಂಡರೆ ಕುಡಿಕೆ ಹೊನ್ನು ಸಾಲದು" ಎಂದು; ಅಥವಾ...." ಬೀದಿ ಕೂಸು ಬೆಳೀತು.... ಕ್ವಾಣಿ ಕೂಸು ಕೊಳೀತು...." ಎಂದು ಜನಲೋಕದ ಜೀವನ ಸಿದ್ಧಾಂತ ಹೇಳುತ್ತಿದೆ. ಇಂದು ಜನಚಿಂತನೆಯ ಸಹಸ್ರ ವರ್ಷಗಳ ಪ್ರಯೋಗ ಸತ್ಯ!

## ಅಂತರಂಗದ ಆಧ್ಯಾತ್ಮಿಕ ಥೆರೆಪಿ: ಶಾಂತಿ!

ನಮ್ಮ ಊಟದ ತಟ್ಟೆಯಲ್ಲಿ ವೆಜಿಟೆಬಲ್ ಪಲಾವ್.... ಮದ್ದೂರ ವಡೆ.... ಮೊಸರನ್ನ.... ಗುಲಾಬ್ ಜಾಮೂನ್ ಇದೆ. ನಾವು ಉಣ್ಣುತ್ತಿದ್ದೇವೆ. ಆದರೆ ನಮ್ಮ ಮನಸ್ಸು ಅಲ್ಲಿ ಇಲ್ಲ. ಮನದಲ್ಲಿಯೇ ಆಫೀಸಿನೊಳಗೆ ಅವಸರದಿಂದ ಹೊಕ್ಕು.... ತುರ್ತು ಕೆಲಸವೊಂದರ ಅರ್ಜಂಟ ಫೈಲ ತಿರುವಿಹಾಕುತ್ತಿದ್ದೇವೆ.



ಹೆದ್ದಾರಿಯಲ್ಲಿ ನಮ್ಮ ಹವಾನಿಯಂತ್ರಿತ ಅತ್ಯಾಧುನಿಕ ಕಾರು ವೇಗದಿಂದ ಓಡಿಸುತ್ತಿದ್ದೇವೆ. ಆದರೆ ನಮ್ಮ ಮನಸ್ಸು ಆ ಕಾರಿನಲ್ಲಿ ಇಲ್ಲವೇ ಇಲ್ಲ. ಯಾವುದೋ ತಲೆತಿನ್ನುವ ಕೋರ್ಟ್ ಕೇಸಿಗಾಗಿ ವಕೀಲರ ಮುಂದೆ ಚಡಪಡಿಸುತ್ತಿದೆ.

ಹೋಗಲಿ.... ನಮ್ಮ ಬಣ್ಣದ ಬಂಗಲೆಯಲ್ಲಿ ಬಂಗಾರದಂಥ ಮಡದಿ-ಮಕ್ಕಳೊಂದಿಗೆ ತೂಗುಮಂಚದಲ್ಲಿ ಕುಂತು ತೂಗುತ್ತ ಮಾತಾಡುತ್ತಿದ್ದೇವೆ. ಆದರೆ ನಮ್ಮ ಮನಸ್ಸು ಅಲ್ಲಿಂದ ಆಬ್ಸೆಂಟ್ ಆಗಿ....ನಮ್ಮ ಫ್ಯಾಕ್ಟರಿಯ ಪ್ರೊಡಕ್ಟ್‌ಗಳಿಗೆ ಸಕಾಲಿಕ ಡಿಮಾಂಡ್ ಬಾರದೇ....ಭೂತಾಕಾರವಾಗಿ ಬೆಳೆಯುತ್ತಿರುವ ಬ್ಯಾಂಕ್ ಇಂಟರಸ್ಟ್ ಜಮಾ ಮಾಡುವಲ್ಲಿ ಪ್ರಜೆಂಟ್ ಆಗಿದೆ. ಆಗ ಆ ನಲ್ಲೊಲವಿನ ನಲ್ಲೆ ನಮ್ಮ ಗುಂಗುಖೋರ ಮನದ (Absent-mindedness) ಗೊಂಡಾರಣ್ಯ ಕಂಡು ತಬ್ಬಿಬ್ಬಾಗುತ್ತಾಳೆ! ಇದೆಲ್ಲ ಮಾನಸಿಕ ಪಲಾಯನ ! ಎಲ್ಲಿಯೋ ಒತ್ತಡ.... ಎಲ್ಲಿಯೋ ಸಿಡಿತ !

ಈಗ ನಮ್ಮೊಳಗೆ ನಾವಿಲ್ಲ. ನಮ್ಮೊಂದಿಗೆ ನಾವು ನೆಮ್ಮದಿಯಿಂದ ಬದುಕಿಲ್ಲ! ಹೀಗೇಕೆ? ಎಲ್ಲಿ ಮಾಯವಾಯಿತು ಆ ನಮ್ಮ ಶಾಂತಿ.... ತೃಪ್ತಿ.... ನೆಮ್ಮದಿ ತುಂಬಿದ ಸಂತೃಪ್ತಿಯ ಬದುಕು?

ನಮ್ಮ ಇಂದಿನ ಸರಿಸರದ ಒತ್ತಡ ಹಾಗೂ ಯಾತನೆಗಳ (Stress and Strain) ಈ ಗದ್ದಲ ಗಡಿಬಿಡಿಯಲ್ಲಿ ನಮ್ಮೊಳಗೆ ನಾವು ತಪ್ಪಿಸಿಕೊಂಡಿದ್ದೇವೆ. ಒಳಗೆ ಕಳಕೊಂಡಿದ್ದನ್ನು ಹೊರಗೆ ಹುಡುಕುತ್ತಿದ್ದೇವೆ!

"ಅಜ್ಞಾನವೆಂಬ ತೊಟ್ಟಿಲೊಳಗೆ, ಜ್ಞಾನವೆಂಬ ಶಿಶುವ ಮಲಗಿಸಿ....ತೂಗಿ ಜೋಗುಳವಾಡುತ್ತಿದ್ದಾಳೆ ಭ್ರಾಂತಿಯೆಂಬ ತಾಯಿ!"....ಎಂದು ಅಲ್ಲಮಪ್ರಭು ಹೇಳಿದ್ದು ಇಂಥ ಅದ್ಭುತ ಅಶಾಂತರ ಬಗ್ಗೆ! ಇಡೀ ಜಗತ್ತು ಇಂಥ ತವಕ-ತಲ್ಲಣಗಳಿಂದ ಚೆಂಗೆದ್ದು ಚೀರಿದ ಭಯಾನಕ ಭೂತ ಚೇಷ್ಟೆಯಲ್ಲಿ ಬಂಧಿತವಾಗಿದೆ.

ಶಾಂತಿಯು ನಮ್ಮೊಳಗೇ ಇದ್ದು ನಮ್ಮೊಳಗೇ ಕಳೆದು ಹೋದ ಗುಪ್ತರತ್ನ! ನಾವು ನಮ್ಮೊಳಗೇ ನಿಂದಾಗ ಶಾಂತಿಯ ಚುಂಬನ. ಅದೇ ಶಿವನೊಲುಮೆಯ ನಂದನ. "ಉಪ್ಪವ್ವ ಉಪ್ಪು" ಆಟದಂತೆ ನಾವು ಕಂಬಕಂಬಕ್ಕೆ ಉಪ್ಪು ಬೇಡಿ ಹೋಗುತ್ತೇವೆ. ಉಪ್ಪು ಸಿಗಲಿಲ್ಲ.... ಕಂಬವೂ ಸಿಗಲಿಲ್ಲ!

"ಲೋಕದ ಚೇಷ್ಟೆಗೆ ರವಿ ಬೀಜವಾದಂತೆ.... ಕರಣಂಗಳ ಚೇಷ್ಟೆಗೆ ಮನವೇ ಬೀಜ!"....ಅಕ್ಕ ಮಹಾದೇವಿಯ ಈ ಮಾತು ಯಾವ ಕಾಲಕ್ಕಾದರೂ ಪ್ರಯೋಗ ಸತ್ಯ!

ಧ್ಯಾನ, ಯೋಗ, ಪ್ರಾರ್ಥನೆ, ಪೂಜೆಗಳು ಇಲ್ಲದಿದ್ದರೆ ನಮ್ಮ ವ್ಯಾವಹಾರಿಕ ಬದುಕು ಯಾವ ಕಾಲಕ್ಕಾದರೂ ಅಶಾಂತಿಯ, ಅತೃಪ್ತಿಯ ಕಿಚ್ಚಿನ ಕೊಂಡಕ್ಕೆ ಎಸೆಯಲ್ಪಡುತ್ತದೆ.

ಇಂದ್ರಿಯಗಳ ಅಸಂಖ್ಯಾತ ಚಲನೆ-ಚಾಲನೆಗಳಿಗೆಲ್ಲ "ಮನೋಬೀಜ"ದ ಸುಶ್ರೂಷೆ ಅತ್ಯಗತ್ಯ.

ಶಿವಯೋಗವು ಶರಣರು ಸಾರಿದ ಸನ್ಯಾಸದೀಕ್ಷೆಯಲ್ಲ; ನಿತ್ಯ ಸುಂದರ ಜೀವನ ರಕ್ಷೆ! ಹನ್ನೆರಡನೆಯ ಶತಮಾನ ಸಾಂಘಿಕವಾಗಿ ಕಂಡುಕೊಂಡ ಜೀವನ ಹಾಗೂ ಯೋಗದ ಸಮನ್ವಯ ಪ್ರಯೋಗ....ಇಂದಿನ ಅಶಾಂತ ವಿಶ್ವದ ಕೆಂಡದ ಕೊಂಡದಲ್ಲಿ ಬೇಯುತ್ತಿರುವ ಮನುಕುಲಕ್ಕೆ ಅಮೃತ ಸಮಾನ ಆಧ್ಯಾತ್ಮಿಕ ಥೆರೆಪಿ!

□

ಲಿಂಗಸ್ಥಲವ ಬಲ್ಲೆನೆಂಬ ಪರಬ್ರಹ್ಮಿಗಳು ನೀವು ಕೇಳಿರೆ
ಲಿಂಗಸ್ಥಲ ನಿಃಶೂನ್ಯವಾಯಿತ್ತು ಸಂಗಮದೇವರ ಬೆನ್ನಿನಲ್ಲಿ.
ಜಂಗಮಸ್ಥಲವ ಬಲ್ಲೆನೆಂಬ ಪರಬ್ರಹ್ಮಿಗಳು ನೀವು ಕೇಳಿರೆ.
ಜಂಗಮಸ್ಥಲ ನಿಃಶೂನ್ಯವಾಯಿತ್ತು. ಅಲ್ಲಮಪ್ರಭುದೇವರ ಬೆನ್ನಿನಲ್ಲಿ.
ಭಕ್ತಿಸ್ಥಲವ ಬಲ್ಲೆನೆಂಬ ಪರಬ್ರಹ್ಮಿಗಳು ನೀವು ಕೇಳಿರೆ,
ಭಕ್ತಿಸ್ಥಲ ನಿಃಶೂನ್ಯವಾಯಿತ್ತು ಸಂಗನಬಸವರಾಜದೇವರ ಬೆನ್ನಿನಲ್ಲಿ.
ಪ್ರಾಣಲಿಂಗಿಸ್ಥಲವ ಬಲ್ಲೆನೆಂಬ ಪರಬ್ರಹ್ಮಿಗಳು ನೀವು ಕೇಳಿರೆ,
ಪ್ರಾಣಲಿಂಗಿಸ್ಥಲ ನಿಃಶೂನ್ಯವಾಯಿತ್ತು ಸಿದ್ಧರಾಮೇಶ್ವರದೇವರ ಬೆನ್ನಿನಲ್ಲಿ.
ಪ್ರಸಾದಿಸ್ಥಲವ ಬಲ್ಲೆನೆಂಬ ಪರಬ್ರಹ್ಮಿಗಳು ನೀವು ಕೇಳಿರೆ
ಪ್ರಸಾದಿಸ್ಥಲ ನಿಃಶೂನ್ಯವಾಯಿತ್ತು ಚಿಕ್ಕದಣ್ಣಾಯಕರ ಬೆನ್ನಿನಲ್ಲಿ.
ಐಕ್ಯಸ್ಥಲವ ಬಲ್ಲೆನೆಂಬ ಪರಬ್ರಹ್ಮಿಗಳು ನೀವು ಕೇಳಿರೆ,
ಐಕ್ಯಸ್ಥಲ ನಿಃಶೂನ್ಯವಾಯಿತ್ತು ಅಜಗಣ್ಣದೇವರ ಬೆನ್ನಿನಲ್ಲಿ.
ಇಂತೆನ್ನ ಷಟ್‌ಸ್ಥಲಂಗಳು ಒಬ್ಬೊಬ್ಬರ ಬೆನ್ನಿನಲ್ಲಿ ನಿಃಶೂನ್ಯವಾದವು.
ಎನಗಿನ್ನಾವ ಕಿಂಚಿತು ಸ್ಥಲವೂ ಇಲ್ಲವಯ್ಯಾ, ಚನ್ನಮಲ್ಲಿಕಾರ್ಜುನಯ್ಯಾ.

**- ಅಕ್ಕಮಹಾದೇವಿ**

# ಶರಣೆ ಹೇಮರಡ್ಡಿ ಮಲ್ಲಮ್ಮ

**ಡಾ. ರುದ್ರಣ್ಣ ಚಿಲಮಿ**

ವೀರವಿರಾಗಿಣಿ ಅಕ್ಕಮಹಾದೇವಿಯ ತರುವಾಯ ಗಂಗಾಂಬಿಕೆ-ನೀಲಾಂಬಿಕೆ, ಮುಕ್ತಾಯಕ್ಕ, ಬೊಂತಾದೇವಿ, ಆಯ್ದಕ್ಕಿ ಲಕ್ಕಮ್ಮ, ಅಕ್ಕಮ್ಮ, ಲಿಂಗಮ್ಮ, ಕೇತಲದೇವಿ, ಸಂಕವ್ವೆ, ಕಾಳವ್ವೆಯರು, ಅಮುಗೆಯ ರಾಯಮ್ಮ (ವರದಾನಿಯಮ್ಮ), ಮಸಣಮ್ಮ, ಕಾರಿಕಾಲಮ್ಮೆ, ಸತ್ಯಕ್ಕ, ಗುಡ್ಡಾಪುರದ ದಾನಮ್ಮದೇವಿ, ಸಜ್ಜಲಗುಡ್ಡದ ಶರಣಮ್ಮ– ಮುಂತಾದ ಶರಣೆಯರು ೧೨ನೆಯ ಶತಮಾನದ ಆಸುಪಾಸು ಬಾಳ ಬೆಳಗಿದ ಪುಣ್ಯವಂತೆಯರ ಈ ನಾಡು ಪುನೀತವಾಗಿ ಪುಣ್ಯದ ಬೀಡಾಗಿದೆ. ಹನ್ನೆರಡನೆಯ ಶತಮಾನದ ಕಾಲಘಟ್ಟ ಸರಿದ ಮೇಲೆ ಶರಣೆಯರು ಉದಯಿಸಲಿಲ್ಲವೇನೋ ಎಂಬಂತೆ ಶರಣೆಯರಿಲ್ಲದ ಸಂಸ್ಕೃತಿ ನೆಲದ ಮರೆಯ ನಿಧಾನದಂತಾಯಿತೆಂದೇ ಹೇಳಬೇಕಾಗುತ್ತದೆ. ಸುಮಾರು ಮುನ್ನೂರು ವರುಷಗಳ ತರುವಾಯ ಅಂದರೆ ೧೫ನೆಯ ಶತಮಾನದಲ್ಲಿ "ರಡ್ಡೀ ಕುಲದೀಪಕಳಾದ ಹೇಮರಡ್ಡಿ ಮಲ್ಲಮ್ಮನು" ಮಹಿಳಾಮಣಿಗಳಲ್ಲಿಯೇ ಶರಣೆಮಣಿಯಾಗಿ ಕಂಗೊಳಿಸಿರುವಳು.

ನಮ್ಮ ದೇಶದ ಇತಿಹಾಸದ ಪುಟಗಳನ್ನು ತಿರುವಿಹಾಕಿದಾಗ ಜೀವನದ ವಿವಿಧ ಕ್ಷೇತ್ರಗಳಿಗೆ ಪುರುಷರು ಸಲ್ಲಿಸಿದಷ್ಟು ಸೇವೆಯನ್ನು ಸ್ತ್ರೀಯರು ಸಲ್ಲಿಸಿಲ್ಲವೇನೋ. ಹಾಗೆ ಸೇವೆ ಸಲ್ಲಿಸಿ ರಾಷ್ಟ್ರಕ್ಕೆ ಬೆಳಕು ನೀಡಿದ ಪ್ರತಿಯೊಬ್ಬ ಸತ್ಪುರುಷನ ಜೀವನದಲ್ಲಿ ಸ್ತ್ರೀಯ ಶ್ರಮ, ಸ್ಫೂರ್ತಿ, ಬೆಂಬಲ ಇದ್ದೇಯಿದೆಯೆಂಬುದನ್ನು ಅಲ್ಲಗಳೆಯಲಾಗದು. ಮಹಿಳೆಯು ಮಹಾತ್ಮರ ಜೀವನದಲ್ಲಿ ಮಾತೆ, ಮಡದಿ, ಸಹೋದರಿ, ಅತ್ತಿಗೆ, ನಾದಿನಿಯಾಗಿ ಅವರ ಶ್ರೇಯಸ್ಸಿಗೆ ಕಾರಣಳಾಗಿರುವಳು. ಅಂಥ ಸ್ತ್ರೀ ಕುಲದಲ್ಲಿ ಹೇಮರಡ್ಡಿ ಮಲ್ಲಮ್ಮನ ಜೀವನವೂ ಮಹತ್ವದ ಮೈಲುಗಲ್ಲಾಗಿದೆ. ಮಲ್ಲಮ್ಮನ ಮಹಿಮೆಯನ್ನು ಜನಪದರು ಸ್ತುತಿಸಿದ್ದು ಹೀಗೆ:

ಸೊಸಿ ಇದ್ದರ ಎಂಥಾಕಿರಬೇಕ
ಹೇಮರಡ್ಡಿ ಮಲ್ಲಮ್ಮನಂಥಾಕಿರಬೇಕ

ಎಂದು ಜನಪದ ಗೀತೆಗಳ ಮೂಲಕ ಪ್ರಸಿದ್ಧಿಯನ್ನು ಪಡೆದಿರುವ ಮಲ್ಲಮ್ಮನು ೧೨ನೆಯ ಶತಮಾನದ ಶಿವಶರಣೆಯರಂತೆ ವಚನಗಳನ್ನು ರಚಿಸಿಲ್ಲ. ಅಲ್ಲದೆ ಇಂಥ ಶರಣೆಯನ್ನು ಕುರಿತು ಅಂದಿನಿಂದ ಇಂದಿನವರೆವಿಗೂ ಮಲ್ಲಮ್ಮನ ಬಗೆಗಿರುವ ಸಾಹಿತ್ಯ ಕೃತಿಗಳೂ ಅತೀ ಕಡಿಮೆ ಪ್ರಮಾಣದಲ್ಲಿವೆ. ಆದರೂ ಹೇಮರಡ್ಡಿ ಮಲ್ಲಮ್ಮನು ಆದರ್ಶ ಸೊಸೆಯಾಗಿ,

ಸದ್ಗೃಹಿಣಿಯಾಗಿ, ಕಾಯಕಯೋಗಿಯಾಗಿ, ಯೋಗಿಣಿಯಾಗಿ, ಜಗದ್ವಂದ್ಯ ಮಾತೆಯಾಗಿ–ಇಂದಿಗೂ ಶಿವಶರಣೆಯರಷ್ಟೇ ಕೀರ್ತಿವಂತಳಾಗಿರುವಳೆಂಬುದಕ್ಕೆ ಆಕೆಯ ಬದುಕಿದ ರೀತಿಯೇ ಕಾರಣವಾಗಿದೆ. ಇಂಥ ಶರಣೆ-ಸಾಧ್ವಿಮಣಿ ಹೇಮರಡ್ಡಿ ಮಲ್ಲಮ್ಮನ ಕುರಿತಾಗಿ ನಲವಡಿಯ ಶ್ರೀಕಂಠಶಾಸ್ತ್ರಿಗಳು – ನಾಟಕ ರಚಿಸಿದ್ದು, ಗದಗದಲ್ಲದು ೫೦೦ ಪ್ರಯೋಗಗಳನ್ನು ಕಂಡಿದೆಯೆಂದರೆ ಆ ಮಾತೆಯ ಪಾತ್ರ ಅದೆಷ್ಟು ಅಗಾಧವಾಗಿತ್ತೆಂಬುದು ತಿಳಿದುಬರುತ್ತದೆ. ಮಲ್ಲಮ್ಮನ ಚರಿತ್ರೆಯ ಕುರಿತು ಬೆರಳೆಣಿಕೆಯಷ್ಟು ಕೃತಿಗಳು ಮಾತ್ರ ಬೆಳಕು ಕಂಡಿದ್ದು ಸತ್ಯ. ಸದ್ಯಕ್ಕೆ (೧೮ ಶ.ದ) ಜೈನಾಪುರದ ರುದ್ರಕವಿಯು ಸಾಂಗತ್ಯ ಛಂದಸ್ಸಿನಲ್ಲಿ 'ಹೇಮರಡ್ಡಿ ಮಲ್ಲಮ್ಮನ ಪುರಾಣ' ಬರೆದ ಕೃತಿಯೇ ಮೊಟ್ಟಮೊದಲಿನದಾಗಿದೆ. ಆದರಿದು ಹಸ್ತಪ್ರತಿಯಲ್ಲಿದ್ದು ಕ.ವಿ.ವಿ. ಗ್ರಂಥಭಂಡಾರದಲ್ಲಿದೆ.

ಇದು ಇನ್ನು ವರೆಗೂ ಮುದ್ರಣ ಕಂಡಿಲ್ಲ. ಅನಂತರ ೧೯೨೬ರಲ್ಲಿ ದ್ಯಾಂಪುರದ ಚೆನ್ನವೀರ ಕವಿಯು ಷಟ್ಪದಿಯ ಛಂದೋರೂಪದಲ್ಲಿ 'ಹೇಮರಡ್ಡಿ ಮಲ್ಲಮ್ಮನ ಚರಿತ್ರೆ' ಎಂಬುದಾಗಿ ರಚಿಸಿರುವರು. ಇದು ೧೮ ಸಂಧಿಗಳುಳ್ಳ ೮೨೬ ಪದ್ಯಗಳಲ್ಲಿದೆ. "ರಡ್ಡೀ ಕುಲದೀಪಕಳಾದ ಶ್ರೀ ಹೇಮರಡ್ಡಿ ಮಲ್ಲಮ್ಮನ ಚರಿತ್ರೆ" ಎಂಬುದನ್ನು ರಡ್ಡೇರ ನಾಗನೂರಿನ ಹ.ರಂ. ಮುಳ್ಳೂರ ರಡ್ಡಿಯವರು ಬರೆದಿರುವರು. ಇದೂ ೧೮ ಸಂಧಿಗಳ ೮೦೫ ಷಟ್ಪದಿಯ ಪದ್ಯಗಳುಳ್ಳ ಗ್ರಂಥವಿದಾಗಿದೆ. ಇದನ್ನೇ ಬದಾಮಿಯ ಶಿವರುದ್ರ ಹುನಗುಂದ ಎಂಬುವವರು ಇತ್ತೀಚಿಗೆ ಗದ್ಯದಲ್ಲಿ ಬರೆದಿರುವುದರಿಂದ ಓದುಗರಿಗೆ ಸುಲಭವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ – ಏಕೆಂದರೆ ಸಾಂಗತ್ಯ, ಷಟ್ಪದಿಗಳಲ್ಲಿ ಓದಿ ತಿಳಿದುಕೊಳ್ಳುವುದು ಕಠಿಣವೇ ಸರಿ. ಇಂದು ಹುನಗುಂದ ಬರೆದ ಕೃತಿಯೂ ಲಭ್ಯವಿಲ್ಲ. ಶ್ರೀಕಂಠ ಶಾಸ್ತ್ರಿಗಳು ಪೂರ್ವಾರ್ಧ, ಉತ್ತರಾರ್ಧದಲ್ಲಿ ಹೇಮರಡ್ಡಿ ಮಲ್ಲಮ್ಮನ ಬಗೆಗೆ ನಾಟಕ ಬರೆದಿರುವರು. ಇದು ಒಳ್ಳೆಯ ಪ್ರಖ್ಯಾತಿ ಪಡೆದಂತಹ ಕೃತಿಯಾಗಿದೆ.

ಮಲ್ಲಮ್ಮನ ಮೈದುನನ ಹೆಸರಿನ ಗ್ರಂಥಗಳಲ್ಲಿ ಮಲ್ಲಮ್ಮನ ಬಗೆಗೆ ಲೇಖನಗಳ ರೂಪದಲ್ಲಿ ಬರಹಗಳು ಸಿಗುತ್ತವೆ. ಮತ್ತೊಂದು ಕೃತಿ 'ಶರಣೆ ಹೇಮರಡ್ಡಿ ಮಲ್ಲಮ್ಮ' ಎಂಬುದು ಸಂತೋಷಕುಮಾರರು ಸಂಗ್ರಹಿಸಿ ರಚಿಸಿದ್ದುದಾಗಿದೆ. 'ಹೇಮರಡ್ಡಿ ಮಲ್ಲಮ್ಮ' ಧಾರವಾಡಿ ಕ.ವಿ.ವಿ. ಉಪನ್ಯಾಸ ಗ್ರಂಥಮಾಲೆಯ ವತಿಯಿಂದ ಡಾ. ಶಾಂತಾದೇವಿ ಸಣ್ಣೆಲ್ಲಪ್ಪನವರ ಅವರು ೧೯೯೧ರಲ್ಲಿ ಪ್ರಕಟಿಸಿದ ಉತ್ತಮ ಕೃತಿಯಾಗಿದೆ. ಸರಳ ಭಾಷೆ, ನೇರ ಮಾತುಗಳಲ್ಲಿದ್ದು ಸಹೃದಯಲೋಕಕ್ಕೆ ಆಪ್ಯಾಯಮಾನವಾಗಿದೆ. ಅನಂತರ ೧೯೯೩ರಲ್ಲಿ ಪ್ರೊ. ಎನ್.ಡಿ. ಬಂಡಿವಾಡಪ್ಪನವರು 'ಶಿವಶರಣೆ ಹೇಮರಡ್ಡಿ ಮಲ್ಲಮ್ಮ' ಎಂಬುದಾಗಿ ಪ್ರಕಟಿಸಿರುವರು – ಹೀಗೆ ಈ ಶರಣೆಯ ಕುರಿತು ಹತ್ತು-ಹನ್ನೆರಡು ಕೃತಿಗಳು ಮಾತ್ರವಾದರೂ ಪ್ರಕಟಗೊಂಡು ಆ ಮಾತೆಯ ಹೆಸರನ್ನು ಚಿರಕಾಲ ನೆನಪಿಡುವಂತಾಗಿದೆ.



ಭಾರತೀಯ ಸಂಸ್ಕೃತಿಯ ಸಿರಿಯನ್ನು ಪೋಷಿಸಿದ ಮಹಾದೇವತೆ – ಮಹಾಮಾತೆ ಹೇಮರಡ್ಡಿ ಮಲ್ಲಮ್ಮನ ಪೂರ್ವಜರು ಆಂಧ್ರಪ್ರದೇಶದವರು. ತೆಲುಗಿನಲ್ಲಿ 'ವೇಮ'ವಿದ್ದು ಕನ್ನಡದಲ್ಲಿದು 'ಹೇಮ'ವಾಗಿದೆ. ಶ್ರೀಶೈಲದ ದಕ್ಷಿಣಕ್ಕಿರುವ "ವೆಲ್ಲಟೂರು ಜಿಲ್ಲೆಗೆ ಸೇರಿದ ರಾಮಾಪುರ ಮಲ್ಲಮ್ಮನ ತವರೂರು." ಆ ರಾಮಾಪುರದ "ಸಿರಿವಂತ-ನಾಗರೆಡ್ಡಿ-ಗೌರಮ್ಮ ದಂಪತಿಗಳ" ಬಹು ದಿನಗಳ ಸಂತಾನದ ಫಲವಾಗಿ ಜನಿಸಿದವಳು ಮಲ್ಲಮ್ಮ. ಶ್ರೀಶೈಲ ಮಲ್ಲಿಕಾರ್ಜುನದೇವನೇ ಈ ಮನೆತನದ ಆರಾಧ್ಯದೇವತೆ. ಈತನ ಆಶೀರ್ವಾದದ ಬಲದಿಂದ ಜನಿಸಿದ ಮಲ್ಲಮ್ಮ ತಾನು ಹುಟ್ಟಿದ ಮತ್ತು ಕೊಟ್ಟ ಮನೆತನಗಳೆರಡರ ಗೌರವವನ್ನು ಹೆಚ್ಚಿಸಿದವಳು. ಅವಳದು ಜ್ಯೋತಿಯಂತಹ ಬದುಕಾಗಿತ್ತು. ಈ ಪ್ರಪಂಚದಲ್ಲಿ ಲಕ್ಷಗಟ್ಟಲೇ ಮಹಿಳೆಯರಾಗಿ ಹೋಗಿದ್ದಾರೆ. ಆದರೆ ಹೇಮರಡ್ಡಿ ಮಲ್ಲಮ್ಮನಂತೆ ಹೆಸರುವಾಸಿಯಾದವರು ವಿರಳವೆಂದೇ ಹೇಳಬೇಕಾಗುತ್ತದೆ. ಈಕೆ ಸತಿ ಸಾಧ್ವಿಮಣಿ ಸಕ್ಕೂಬಾಯಿ ಮತ್ತು ಮೀರಾಬಾಯಿಯವರಂತಿದ್ದವಳು.

"ವೇಮ" ರಡ್ಡಿ ವಂಶದ ಮೂಲಪುರುಷ. ಇವನ ವಂಶಜರೆಲ್ಲ "ವೇಮ" ಹಾಗೂ ತಮ್ಮ ಕುಲಸೂಚಕವಾದ "ರೆಡ್ಡಿ" ಪದವನ್ನು ತಮ್ಮ ಹೆಸರಿನ ಮುಂದೆ ಸೇರಿಸಿಕೊಂಡರು. ಅದು 'ವೇಮರೆಡ್ಡಿ'ಯಾಗಿ ಮುಂದೆ ಬರಬರುತ್ತ 'ಹೇಮರಡ್ಡಿ'ಯಾಯಿತು. ಕುಮಾರಗಿರಿರೆಡ್ಡಿಯು ಮಲ್ಲಮ್ಮನ ಮಾವ. ಈತ ಕುಮಾರಗಿರಿರೆಡ್ಡಿ ಹೇಮರೆಡ್ಡಿ > ಚಿನ್ನರೆಡ್ಡಿ – ಎಂಬುದಾಗಿಯೂ ಕರೆಯಿಸಿಕೊಂಡಿರುವನು. ಈತನ ಪತ್ನಿಯು ಪದ್ಮಾವತಿಯು. ಹೇಮರಡ್ಡಿ (ಕುಮಾರಗಿರಿರೆಡ್ಡಿ)– ಪದ್ಮಾವತಿಯರ ಮಗನೇ ಭರಮರೆಡ್ಡಿಯು. ಈತನೇ ಮಲ್ಲಮ್ಮನ ಪತಿಯು. ಇವರ ಪೂರ್ವಜರು ಅರಸರಾಗಿರಬೇಕೆಂದು ತೋರುತ್ತದೆ.

ಕ್ರಿ.ಶ. ೧೩೨೪ರಲ್ಲಿ ವೇಮರೆಡ್ಡಿಯು ಶ್ರೀಶೈಲ ಸಮೀಪದ ಕೊಂಡವೀಡಿನಲ್ಲಿ ರಾಜ್ಯವನ್ನು ಸ್ಥಾಪಿಸಿದ್ದನೆಂದು ಡಾ. ಸಣ್ಣೆಲ್ಲಪ್ಪನವರು ತಮ್ಮ ಕೃತಿಯಲ್ಲಿ (ಪುಟ. ೩ರಲ್ಲಿ) ಉಲ್ಲೇಖಿಸಿದ್ದಾರೆ. ಈತನ ತರುವಾಯ ಪೋಲಯ ವೇಮರೆಡ್ಡಿ, ದೇಸಟಿ ವೇಮಾರೆಡ್ಡಿ, ಅನಪೋತರೆಡ್ಡಿ, ಅನವೇಮರೆಡ್ಡಿ, ವೇಮಾರೆಡ್ಡಿ (ಕುಮಾರಗಿರಿರೆಡ್ಡಿ), ಪೆದಕೋಮಟಿ ವೇಮಭೂಪಾಲ, ರಾಚವೇಮಾರೆಡ್ಡಿ – ಇವರೆಲ್ಲರೂ ಕ್ರಮವಾಗಿ ೧೭, ೩೦, ೧೫, ೧೪, ೨೦, ೪-ವರ್ಷಗಳ ವರೆಗೆ ರಾಜ್ಯದಾಡಳಿತವನ್ನು ಮಾಡಿದ್ದು, ಒಟ್ಟು ಒಂದುನೂರು ವರ್ಷಗಳಷ್ಟು ಆಳ್ವಿಕೆ ಮಾಡಿರುವರೆಂಬುದಾಗಿ ತಿಳಿದುಬರುತ್ತದೆ. ಹೆಚ್ಚಿನ ಮಾಹಿತಿಗಾಗಿ ಡಾ. ಸಣ್ಣೆಲ್ಲಪ್ಪನವರ - ಮೆಡಂ ಅವರ 'ಹೇಮರಡ್ಡಿ ಮಲ್ಲಮ್ಮ'ನ ಕೃತಿಯನ್ನು ನೋಡಬಹುದು. ಗದ್ಯದಲ್ಲಿದೆ.

ಶಿಶುನಾಳ ಶರೀಫ ಶಿವಯೋಗಿಗಳೂ ಹೇಮರಡ್ಡಿ ಮಲ್ಲಮ್ಮನನ್ನು ಸ್ತುತಿಸಿರುವರು. ಅವರು ಹಿಂದೂ-ಮುಸ್ಲಿಂ ಭಾವೈಕ್ಯತೆಯ ಪ್ರತೀಕವಾಗಿದ್ದರು. ಅಂಥ ಶರೀಫರು ತಮ್ಮದೊಂದು ತತ್ತ್ವಪದದಲ್ಲಿ ಮಲ್ಲಮ್ಮನನ್ನು ಕುರಿತು ಬರೆದದ್ದು ಹೀಗಿದೆ :

ರಾಂಪುರದ ನಾಗರೆಡ್ಡಿ ಗೌರಮ್ಮನ ಸುಪುತ್ರಿ
ಹೇಮರಡ್ಡಿ ಮಲ್ಲಮ್ಮ ಸಿದ್ದಾಪುರದ ಸೊಸಿ
ಶ್ರೀಶೈಲದ ಮಲ್ಲಿಕಾರ್ಜುನನ ಪೂಜಿಸಿ ಅತ್ತೆ-ನೆಗೆಣ್ಣಿಯರ ಕಾಟ ಸಹಿಸಿ
ಮಬ್ಬುಗಂಡನ ಮಹಾದೇವನೆಂದು ಮನ್ನಿಸಿ
ಮತಿಗೇಡಿ ಮೈದುನ ಭೋಗಿ ವೇಮನ ಮಾಡಿದಳು
ಮಹಾಯೋಗಿಯ ಮತ್ತೆ ಮಹಾತಾಯಿ ಮಲ್ಲಾಂಬೆ
ಬೆಳಗಿದಳು ರಡ್ಡಿ ಕುಲವನು!

ಎಂಬೀ ಪದ್ಯವನ್ನು ಗಮನಿಸಿದರೆ ಮಲ್ಲಮ್ಮನ ಬಗೆಗೆ ಕಿರುಚರಿತ್ರೆಯೇ ಸಿಗುವಂತಾಗಿದೆ. ಜನರ ಬಾಯಿಯಲ್ಲಿರುವ ಬೆಂಕಿಯ ದಾನದ ಮಲ್ಲಮ್ಮ; ಸೊಸೆಯಿದ್ದರ ಮಲ್ಲಮ್ಮನಂಥಾಕಿರಬೇಕು – ಎಂಬುದಾಗಿ ಜನಪದರ ಮನೆಮಾತಾಗಿದೆ. ಈಕೆ ಸ್ತ್ರೀಕುಲಕ್ಕೇ ದಾರಿದೀಪವಾಗಿದ್ದಾಳೆ.

ಮಲ್ಲಮ್ಮನ ತವರೂರಿನ ಮನೆದೇವರು ಶ್ರೀಶೈಲದ ಮಲ್ಲಿಕಾರ್ಜುನದೇವನಾದರೆ, ಪತಿಯ ಮನೆದೇವತೆ ತಿರುಪತಿಯ-ತಿರುಮಲದ ತಿಮ್ಮಪ್ಪ ಅಥವಾ ವೆಂಕಟರಮಣನು. ಹೀಗಾಗಿ ವೀರಶೈವರೆಡ್ಡಿ, ಲಿಂಗಾಯತರೆಡ್ಡಿ ಅಥವಾ ವಿಭೂತಿರೆಡ್ಡಿ, ನಾಮದರೆಡ್ಡಿ, ಪಾಕನಾಕರೆಡ್ಡಿ ಎಂಬುದಾಗಿ ಒಳಪಂಗಡಗಳಿವೆ. "ರಡ್ಡಿ-ಬಂಗಾರ ಕಡ್ಡಿ" ಎಂಬ ಹೆಸರಿಗೆ ತಕ್ಕವರಿವರು. ಆಂಧ್ರದಲ್ಲಿ ಇವರನ್ನು 'ರೆಡ್ಡಿ'ಗಳೆಂದೂ; ಕರ್ನಾಟಕದಲ್ಲಿ 'ರಡ್ಡಿ'ಗಳೆಂದೂ ಕರೆಯುತ್ತಿರುವುದು ವಾಡಿಕೆ. ಈ ಎರಡೂ ಮನೆತನಗಳಿಗೂ ಹೇಮರಡ್ಡಿ ಮಲ್ಲಮ್ಮನು ಪೂಜನೀಯ ದೇವತೆ, ಮಹಾಮಾತೆಯಾಗಿದ್ದಾಳೆ. ಮಲ್ಲಮ್ಮನು ನೋವು-ಸಂಕಟ-ಕಷ್ಟ-ನಷ್ಟಗಳೆಂಬ ಬೆಂಕಿಯಲ್ಲಿ ಬೆಂದು ಚೊಕ್ಕ ಚಿನ್ನವಾದವಳು. ಈಕೆಯ ಚರಿತ್ರೆಯು ಕೇವಲ ಮಹಿಳಾ ಲೋಕಕ್ಕಷ್ಟೇ ಅಲ್ಲ ಪುರುಷರಿಗೂ ಮಾರ್ಗದರ್ಶಿಕೆಯಾಗಿದೆ.

ಈಕೆಯು ಶ್ರೀಶೈಲ ಮಲ್ಲಿಕಾರ್ಜುನನ ಕಾರುಣ್ಯದಿಂದ ಜನಿಸಿದ ಮಲ್ಲಮ್ಮನಿಗೆ ಆಕೆಯ ತಂದೆ ಧರ್ಮ, ಶಾಸ್ತ್ರ, ಪುರಾಣದ ಕಥೆಗಳನ್ನು ಮುಂದೆ ಕುಳ್ಳಿರಿಸಿಕೊಂಡು ತಿಳಿಸಿ ಹೇಳುತ್ತಿದ್ದನು. ಈ ಸಂಸ್ಕಾರದ ಫಲವೆಂಬಂತೆ ಮಲ್ಲಮ್ಮನಲ್ಲಿ ಮಲ್ಲಿಕಾರ್ಜುನನ ಪೂಜೆ, ಜಪ-ತಪ, ಧ್ಯಾನದ ಹಂಬಲ ಬಲಿಯುತ್ತ ಬಂದಿತು. ನಾಗರೆಡ್ಡಿ-ಗೌರಮ್ಮ ದಂಪತಿಗಳ ಮುದ್ದಿನ ಮಗುವಾಗಿ ಬೆಳೆದ ಮಲ್ಲಮ್ಮನು ಪ್ರಾಯಕ್ಕೆ ಬರುತ್ತಾಳೆ.

ಇಂಥ ಅಪರೂಪದ, ಅಪೂರ್ವ ರೂಪಲಾವಣ್ಯವತಿಯಾದ ಏಕೈಕ ಸುಪುತ್ರಿಯಾದ ಮಲ್ಲಮ್ಮನನ್ನು ಶ್ರೀಶೈಲಕ್ಕೆ ಸಮೀಪವಾದ 'ಸಿದ್ದಾಪುರದ' ಕುಮಾರಗಿರಿ ರೆಡ್ಡಿಯ ಮಗ ಭರಮರೆಡ್ಡಿಗೆ ಮದುವೆ ಮಾಡಿಕೊಡುತ್ತಾರೆ. ಭರಮರೆಡ್ಡಿಯು ಮಂದಮತಿಯಾಗಿದ್ದನೆಂಬುದನ್ನೀಗಾಗಲೇ ಹೇಳಲಾಗಿದೆ. ಗಂಡನ ಮನೆಗೆ ಕಳುಹುವಾಗ- ಈಕೆಯ ತಂದೆ-



ತಾಯಿಗಳು ಗಂಡನ ಮನೆಯಲ್ಲಿ ಹೇಗಿರಬೇಕೆಂಬ ಬಾಳಿನ ಸೂತ್ರಗಳನ್ನು ಹೇಳಿಕೊಡುತ್ತಾರೆ. ಮಗಳೇ ನೀ ನಿತ್ಯವೂ ಅತ್ತೆ-ಮಾವಂದಿರರ-ಹಿರಿಯರ ಸೇವೆ ಮಾಡು, ಸತಿಗೆ ಪತಿಯೇ ಪರಮ ಪರದೈವವು ಮತ್ತು ಭಾಗ್ಯ! ಪತಿಗಿಂತ ಪರದೈವವು ಮತ್ತೊಂದಿಲ್ಲ. ಅವನ ಮಾತಿಗೆ ಎದುರಾಡದೇ ತಲೆಬಾಗಿ ನಡೆಯುವುದು ಸತಿಯಾದವಳ ಧರ್ಮ, ಅತ್ತೆಯ ಮನೆಯ ಸರ್ವ ಬಳಗವನ್ನು ಪ್ರೀತಿಯಿಂದ ಕಾಣು ಎಂಬುದಾಗಿ ತಿಳಿಸಿ ಹೇಳಿ ಭಾರವಾದ ಹೃದಯದಿಂದ ಕಳುಹಿಸಿದರು. ತಂದೆ-ತಾಯಿಗೆ ತಕ್ಕ ಮಗಳಾಗಿ ಹದಿಬದೆಯ ಧರ್ಮದಲ್ಲಿ ಬದುಕು ಸಾಗಿಸುವ ಛಲ ತೊಟ್ಟು ಮುಂದುವರೆದಳು.

ಇತ್ತ ಪತಿಯ ಊರಿನ ಕಡೆಗೆ ಬರಗಾಲ ಛಾಯೆ ಚಾಚಿತ್ತು. ಬತ್ತಿ ಬರಡಾದ ಭೂಮಿ ಬಾಯ್ದೆರೆದಿತ್ತು. ಈ ಮನೆತನದವರು ರಾಜ್ಯವನ್ನೂ ಕಳೆದುಕೊಂಡಿದ್ದರು. ಮಲ್ಲಮ್ಮನ ಆಗಮನದಿಂದಾಗಿ ಪತಿಯ ಮನೆಯು ಬಂಗಾರದ ಗಟ್ಟಿಯಾಯಿತು. ಸಿದ್ಧಾಪುರವು ಪ್ರತಿ ವರ್ಷಕ್ಕಿಂತಲೂ ಹೆಚ್ಚು ಮಳೆ-ಬೆಳೆ, ಸುಖ-ಸಮೃದ್ಧಿಯಿಂದ ತುಂಬಿ ತುಳುಕಿತು. ಸತ್ಪುರುಷರು ಸ್ಪರ್ಶಿಸಿದ ಧರೆಯೆಲ್ಲವೂ ಪಾವನವೆಂಬಂತಾಯಿತು. ತಂದೆ-ತಾಯಿಗಳ ಆಣತಿಯಂತೆ ಮಲ್ಲಮ್ಮನು ನಸುಕಿನ ಜಾವದಲ್ಲಿಯೇ ಎದ್ದು, ದೇವರ ನೆನೆಯುತ್ತ, ಮುಖ ಮಾರ್ಜನ ಮಾಡಿಕೊಂಡು, ಹಣೆಗೆ ತಿಲಕ ಮತ್ತು ವಿಭೂತಿಗಳನ್ನು ಧರಿಸಿ, ಭಕ್ತಿಯಿಂದ ಪತಿ ಮತ್ತು ಅತ್ತೆ-ಮಾವಂದಿರ ಪಾದಗಳಿಗೆರಗಿ, ಮನೆಯ ಮತ್ತು ಅಂಗಳದ ಕಸವನ್ನು ತೆಗೆದು ರಂಗವಲ್ಲಿಯನ್ನು ಹಾಕಿ, ಅನಂತರದಲ್ಲಿ ಮನೆಯ ಪಾತ್ರೆಗಳನ್ನೆಲ್ಲ ಸ್ವಚ್ಛವಾಗಿ ಬೆಳಗಿ-ತೊಳೆದಿಟ್ಟು, ನೀರು ತಂದು ಸ್ನಾನ ಮಾಡಿ, ಪೂಜೆ-ಜಪ-ತಪ ಪೂರೈಸಿಕೊಂಡು, ಅಡಿಗೆ ಸಿದ್ಧಪಡಿಸಿ ಎಲ್ಲರಿಗೂ ಊಟಕ್ಕೆ ಉಣಬಡಿಸಿ, ಕೊನೆಯಲ್ಲಿ ತಾನು ಊಟ ಮಾಡುತ್ತಿದ್ದಳು. ಇದು ನಿತ್ಯವೂ ನಡೆಯುತ್ತಿದ್ದ ಕಾರ್ಯಚಟುವಟಿಕೆಯಾಗಿತ್ತು.

ಈಕೆಯ, ಈ ರೀತಿ-ನೀತಿ; ಪದ್ಧತಿ, ಪೂಜೆ-ಪುನಸ್ಕಾರ ಮುಂತಾದ ವಿಧಿವಿಧಾನಗಳನ್ನು ಕಂಡ ಮಾವನಾದ ಹೇಮರಡ್ಡಿಯು ಮನದಲ್ಲಿ ಹಿರಿಹಿರಿ ಹಿಗ್ಗಿದನಲ್ಲದೆ ನನ್ನ ಮನೆಗೆ ಇಂಥ ಸೊಸೆ ಬಂದಿರುವುದು ತನ್ನ ಪುಣ್ಯವಿಶೇಷವೆಂದೇ ತಿಳಿದನು. ಮಲ್ಲಮ್ಮನು ಕೇವಲ ಸದಾ ಶೀಲಸಂಪನ್ನೆಯಾಗಿರದೇ ದುಃಖಿಗಳಿಗೆ, ನೊಂದವರಿಗೆ, ಹಸಿದವರಿಗೆ, ಬಡಬಗ್ಗರಿಗೆ, ಸದಾ ಸಹಾಯ ಮಾಡುತ್ತಲಿದ್ದಳು. ಸರ್ವರಲ್ಲಿಯೂ ಸಮಬಾಳು ತಳೆದಿದ್ದಳು. ಅಲ್ಲದೆ ಈಕೆ ಮನೆಗೆಲಸದಲ್ಲಿ ನಿರತಳಾದಾಗಲೂ ಸತತವಾಗಿ ಚೆನ್ನಮಲ್ಲಿಕಾರ್ಜುನದೇವನನ್ನು ಅಕ್ಕಮಹಾದೇವಿಯು ಸ್ಮರಿಸುತ್ತಿದ್ದಂತೆಯೇ ಧ್ಯಾನಾಸಕ್ತಳಾಗುತ್ತಿದ್ದಳು. ಪರರನ್ನು ತನ್ನಂತೆಯೇ ಕಾಣುವ, ಹಿಂಸೆಯನ್ನು ಸಹಿಸದೇ ನಿವಾರಿಸುತ್ತ, ಶಿವಭಕ್ತರನ್ನು ಪೂಜ್ಯತೆಯಿಂದ ಕಾಣುತ್ತ, ಎಳ್ಳಷ್ಟೂ ಕಳಂಕವಿಲ್ಲದ ಈ ಮಹಾಮಾತೆಯ ಚರಿತ್ರೆಯನ್ನು ಹೇಳಲು ನನ್ನ ಒಂದೇ ನಾಲಿಗೆಗೆ ಸಾಧ್ಯವಿಲ್ಲವೆಂದು ಚೆನ್ನಕವಿಗಳು ಬಣ್ಣಿಸಿದ್ದಾರೆ.

ಇತ್ತ ಆಕೆಯ ಪತಿ ಭರಮರೆಡ್ಡಿಯ ಬಗೆಗೆ ಅವಹೇಳನಕಾರಿ ಮಾತುಗಳು ಊರ ಜನತೆಯಿಂದ ಕೇಳಿ ಬರುತ್ತಿತ್ತು. ಕಾರಣ ಈಕೆಯ ಪತಿಯು ಅತಿ ಮುಗ್ಧನೂ, ಸಾಧು ಸ್ವಭಾವದವನಾಗಿದ್ದನು. ಆತನನ್ನು ಜನತೆ ಹುಚ್ಚನೆಂದೂ ಕರೆಯುತ್ತಿತ್ತು. ಆದರೆ ಮಲ್ಲಮ್ಮ ಮಾತ್ರ ಇವರ್‍ಯಾರ ಮಾತುಗಳನ್ನು ಗಮನಕ್ಕೆ ತಂದುಕೊಳ್ಳದೇ ತನ್ನ ಪತಿಯು ಸಾಕ್ಷಾತ್ ಚೆನ್ನ ಮಲ್ಲಿಕಾರ್ಜುನನೆಂದೇ ಅನನ್ಯ ಭಕ್ತಿಯಿಂದ ಪ್ರೀತಿಯಿಂದ ಕಂಡು ಉಪಚರಿಸುತ್ತಿದ್ದಳು. ಸಿದ್ಧಾಪುರಕ್ಕೆ ಮಲ್ಲಮ್ಮನ ಆಗಮನದಿಂದ ಹೆಚ್ಚು ಮಳೆ-ಬೆಳೆಯನ್ನು ಪಡೆದುಕೊಂಡು ಸಂತುಷ್ಟ-ಸಂತೃಪ್ತಿ ಹೊಂದಿದ ಊರ ಜನರೆಲ್ಲರೂ ಆಕೆಯನ್ನು ನಮ್ಮೂರ ಭಾಗ್ಯದ ದೇವತೆಯೆಂದು ಭಾವಿಸಿದ್ದರು. ಆಕೆಯನ್ನು ಗುಣಗಾನ ಮಾಡಿ, ಹಾಡಿ ಹೊಗಳುತ್ತಿದ್ದರು. ಅಲ್ಲದೆ ಯಾರಿಗೆ ಏನೇ ಸಮಸ್ಯೆ ತೊಂದರೆ-ಕಂಟಕಗಳು ಬಂದರೆ ತಕ್ಷಣವೇ ಮಲ್ಲಮ್ಮನ ಕಡೆಗೆ ಬಂದು ಪರಿಹರಿಸಿಕೊಂಡು ಹೋಗುತ್ತಿದ್ದರು.

ಈಕೆಯ ಜನಾನುರಾಗ-ಜನಪ್ರಿಯತೆಗಳು ನೆಗೆಯಣ್ಣೆಯರಲ್ಲಿ ಮಾತ್ಸರ್ಯವನ್ನುಂಟು ಮಾಡಿತು. ಅವರಲ್ಲಿ ದುಷ್ಟ ಬುದ್ಧಿ ದುರ್ಗುಣಗಳು ತುಂಬಿಕೊಂಡವು. ಮನೆಯಲ್ಲಿರುವ ಹಿರಿಯ ಸೊಸೆಯಂದಿರರಾದ ತಮಗಿಲ್ಲದ ಊರ ಜನರ ಪ್ರೀತಿ, ಗೌರವ, ಹೊಗಳಿಕೆಗಳು ಮಲ್ಲಮ್ಮನಿಗೆ ದೊರೆಯುತ್ತಿರುವುದನ್ನು ಕಂಡು ಕರುಬಿದರು. ಆಕೆ ಈ ಮನೆಯಲ್ಲಿದ್ದರೆ ಇನ್ನೂ – ಅಪಮಾನವಾಗುವುದೆಂದು ತಿಳಿದು ಹೇಗಾದರೂ ಮಾಡಿ ಆಕೆಯನ್ನು ಹೊರಹಾಕುವ ಯೋಚನೆ-ಯೋಜನೆ ಮಾಡುವರು. ಎಂದಿನಂತೆ ಮಲ್ಲಮ್ಮನು ಪತಿಭಕ್ತಿಯಿಂದ ಮತ್ತು ಪವಿತ್ರ ಭಾವದಿಂದ ಮನೆಗೆಲಸಗಳನ್ನು ಮಾಡುತ್ತಿದ್ದರೂ ಅದು ಸರಿಯಾಗಿಲ್ಲ, ಇದು ಸರಿಯಾಗಿಲ್ಲ, ಸ್ವಚ್ಛವಾಗಿಲ್ಲವೆಂದೇ ಆಪಾದನೆ ಮಾಡುತ್ತಿದ್ದ ನೆಗೆಣ್ಣೆಯರು–ಹಸಿದವರಿಗೆ ಅನ್ನದಾನ ಮಾಡಿ ಮನೆಯನ್ನೇ ಬರಿದು ಮಾಡುತ್ತಾಳೆ. ಮುಂಜಾನೆಯೆದ್ದು ಸ್ನಾನ-ಪೂಜೆಗಳಲ್ಲಿ ತೊಡಗಿದರೆ-ಮನೆಗೆಲಸಗಳನ್ನು ಮಾಡುವವರು ಯಾರು?

ಈಕೆ ಕಣ್ಣು ಮುಚ್ಚಿ ಧ್ಯಾನ ಮಾಡುವುದು ದೇವರನ್ನಲ್ಲ, ತನ್ನ ಗಂಡ ಹುಚ್ಚನಿರುವುದರಿಂದ ಪರಪುರುಷನೊಡನೆ ಅನೈತಿಕ ಸಂಬಂಧ ಹೊಂದಿರುವಳು – ಎಂದು ಮುಂತಾದ ಇಲ್ಲ-ಸಲ್ಲದ ಅಪವಾದ ಹೊರಿಸಿ ಅತ್ತೆ-ಮಾವಂದಿರರ ಮುಂದೆ ಹೇಳಲು ಭರಮರೆಡ್ಡಿಯ ತಾಯಿ ಪದ್ಮಾವತಿಯೂ ಸಹ ಸೊಸೆಯರ ಮಾತುಗಳಿಗೆ ವಿಚಾರಿಸದೇ, ಅವರ ಮಾತುಗಳು ನಿಜವಿವೆಯೆಂದೇ ಭಾವಿಸಿದ್ದು-ಮಲ್ಲಮ್ಮನನ್ನು ಒದ್ದು ಹೊರ ನೂಕುವಳು. ಅದೂ ಎಲ್ಲಿಗೆಂದರೆ ಹುಲಿ-ಸಿಂಹ, ಕಾಡುಮೃಗಗಳಿರುವ ಶ್ರೀಶೈಲದ ಗುಡ್ಡಗಾಡು ಪ್ರದೇಶಕ್ಕೆ ದನಕಾಯ್ದುಕೊಂಡು ಬರುವುದು, ಅಲ್ಲಿ ದನ ಕಾಯುತ್ತ ಸಗಣಿ ಸಂಗ್ರಹಿಸಿ ದೊಡ್ಡದಾದ ತಿಪ್ಪೆಯನ್ನು ಮಾಡಬೇಕೆಂದು ಅತ್ತೆ ಆಜ್ಞಾಪಿಸಿದಳು. ಜೊತೆಗೆ ವಾರಗಿತ್ತಿಯರೂ (ನೆಗೆಣ್ಣೆಯರೂ) ಬಾಯಿಗೆ ಬಂದಂತೇ ಬಯ್ಯುತ್ತಾರೆ.



ಮಲ್ಲಮ್ಮ ಇವರಾಡುವ ಮಾತುಗಳಿಗೆ ಕಿಂಚಿತ್ತೂ ಸಹ ಚಂಚಲಗೊಳ್ಳದೆ ಚನ್ನಮಲ್ಲಿಕಾರ್ಜುನನ ಪರಮ ಆರಾಧಕಳಾದ ಆಕೆ ಗುಪ್ತಯೋಗಿಣಿಯಾಗಿದ್ದಳು. ಇದು ಆ ಪರಮಾತ್ಮನನ್ನು ಸ್ತುತಿಸುವ, ಧ್ಯಾನಿಸುವ ಒಳ್ಳೆಯ ಕಾಲವೆಂದು ಭಾವಿಸಿ ಅತ್ತೆಯು ಹೇಳಿದ ಕೆಲಸಗಳನ್ನು ಮನಃಪೂರ್ವಕವಾಗಿ ಪೂರೈಸುತ್ತಾಳೆ. ಮಲ್ಲಮ್ಮನು ಅತ್ತೆಯ ಒದೆತದಿಂದ, ಅವಳ ಪಾದಗಳ ಸ್ಪರ್ಶ ನನಗೆ ಪುಣ್ಯ ಪ್ರಾಪ್ತವಾಯಿತೆಂದೇ ಬಗೆದಳು. ಹಗಲು-ರಾತ್ರಿ ಅಡವಿಯ ಗುಡಿಸಲಲ್ಲಿಯೇ ಇದ್ದುಕೊಂಡು; ದಿನಕ್ಕೊಂದು ಸಲ ಮನೆಗೆ ಬಂದು ಬೀಸುವ, ನೀರು ತರುವ, ಕಸ ಗೂಡಿಸುವ ಎಲ್ಲ ಕೆಲಸಗಳನ್ನು ಮಾಡಿ ತಿರುಗಿ ಹೋಗುವಾಗ ತನಗೆ ಊಟ ಒಯ್ಯಬೇಕೆಂದು ಅತ್ತೆ ಹೇಳುತ್ತಾಳೆ.

ಸಹನಾಮೂರ್ತಿ ಹಾಗೂ ಜ್ಞಾನನಿಧಿಯಾದ ಮಲ್ಲಮ್ಮನಿಗೆ ಅತ್ತೆಯ ಈ ಸಿಡಿಲಾಜ್ಞೆಯಿಂದ ಆಘಾತವಾಗಲಿಲ್ಲ. ಆದರೂ ಮಲ್ಲಮ್ಮನಲ್ಲಿರುವ ಕೊರಗು ಏನೆಂದರೆ – ತನಗಿನ್ನು ತನ್ನ ಪತಿಯ ಮತ್ತು ಉಳಿದ ಹಿರಿಯರ ಸೇವೆ ಸಿಗುವುದಿಲ್ಲ, ಅತ್ತ ನೆಗೆಣ್ಣೆಯರು ಎಷ್ಟೇ ಕಷ್ಟ ಕೊಟ್ಟರೂ ಸಹಿಸಿಕೊಳ್ಳಬಲ್ಲೆ; ಆದರೆ ಪತಿ ಮತ್ತಿತರರ ಸೇವೆ ಬಿಟ್ಟಿರುವುದು ಸಾಧ್ಯವಿಲ್ಲವೆಂದು ದುಃಖಿಸಿದಳು. ನಿಷ್ಕರುಣಿ ಅತ್ತೆ-ನೆಗೆಣ್ಣೆಯರರ ಮಧ್ಯದಲ್ಲಿ ಒಂದು ಗಳಿಗೆ ಹೊತ್ತಾದರೂ ಬಾಳಲು ಅವಕಾಶ ಕೊಡಿರೆಂದು ಬೇಡಿಕೊಂಡಳಂತೆ.

ಮಲ್ಲಮ್ಮನ ಸದ್ಗುಣಗಳನ್ನರಿತವನೊಬ್ಬನೆಂದರೆ ಆಕೆಯ ಮಾವ. ಸೊಸೆಗೆ ಈ ಪರಿಸ್ಥಿತಿ ಬಂದುದನ್ನು ಕಂಡು ಮಮ್ಮಲ ಮರುಗುತ್ತಾನೆ. ತಾನೂ ತನ್ನ ಪತ್ನಿಯೆದುರಿಗೆ ಅಸಹಾಯಕ ಸ್ಥಿತಿಯಲ್ಲಿದ್ದಾನೆ. ಹುಲಿಯಂತೆ ಗರ್ಜಿಸುವ ಪತ್ನಿಯ ಹಾಗೂ ಹೊಟ್ಟೆಕಿಚ್ಚಿನ ಸೊಸೆಯಂದಿರರ ಮುಂದೆ ಆತನ ಆಟ ಏನೂ ನಡೆಯುತ್ತಿರಲಿಲ್ಲ. ಇವರಿಗೆ ಅಜ್ಞಾನವೆಂಬ ಅಂಧಕ್ಕಾರ ಆವರಿಸಿದೆಯೆಂದು ಮನದಲ್ಲಿ ಮರುಗಿದ ಹೇಮರಡ್ಡಿಯು ಏನು ಮಾಡಬೇಕೆಂಬುದೇ ತಿಳಿಯದಂತಾಯಿತು. ಮಲ್ಲಮ್ಮ ಮಾತ್ರ ತನ್ನನ್ನು ಶ್ರೀಶೈಲದಡವಿಗೆ ಅಟ್ಟಿದ್ದುದು ಚೆನ್ನಮಲ್ಲಿಕಾರ್ಜುನನ ಪೂಜೆಗೆ ಮತ್ತು ೩೩ ಕೋಟಿ ದೇವತೆಗಳನ್ನೊಳಗೊಂಡ ಗೋಮಾತೆಯ ಸೇವೆಗೆ ಒಂದು ದೃಷ್ಟಿಯಿಂದ ಅನುಕೂಲವೇ ಆಯಿತೆಂದುಕೊಂಡಳು. ಅಲ್ಲದೆ ದಿನಕ್ಕೊಂದು ಬಾರಿ ಮನೆಗೆ ಬಂದು ಮನೆಗೆಲಸ ಮಾಡಲು ಬರಹೇಳಿದ್ದು–ಅತ್ತೆ ತನಗೆ ತನ್ನ ಪತಿಯ ದರ್ಶನಕ್ಕೊದಗಿದ ಅವಕಾಶ ಎಂದು ತಿಳಿದುಕೊಂಡು ಅಡವಿಗೆ ನಡೆದಳು.

ಈಕೆಯ ಈ ಸ್ಥಿತಿಗೆ ಮಾವನು ಮರುಗಿದನಾದರೂ, ಮನೆಯವರ ಈ ಚಿತ್ರಹಿಂಸೆಯಾದರೂ ತಪ್ಪಿತು. ಮುಂಜಾನೆಯಿಂದ ರಾತ್ರಿ ಮಲಗುವ ವರೆವಿಗೂ ವಿಶ್ರಾಂತಿಯೆಂಬುದೇ ಇರುತ್ತಿರಲಿಲ್ಲ, ಅಡವಿಯಲ್ಲಿರುವ ಗುಡಿಸಲಲ್ಲಿಯಾದರೂ ಆರಾಮಾಗಿರುತ್ತಾಳೆಯೆಂದು ನಿಟ್ಟುಸಿರು ಬಿಟ್ಟನು. ಮನೆಯಲ್ಲಿ ಆಕೆಗೆ ಸ್ವಾತಂತ್ರ್ಯವೇ ಇಲ್ಲ. ಕತ್ತೆಯಂತೆ ದುಡಿದರೂ ಆಕೆಗೆ ಬೈಗುಳಗಳ ಸುರಿಮಳೆ ತಪ್ಪುತ್ತಿರಲಿಲ್ಲ. ಮನೆಗೆಲಸಗಳನ್ನು

ಅದೆಷ್ಟು ಅಚ್ಚುಕಟ್ಟು; ಚೆನ್ನಾಗಿ ಮಾಡಿದರೂ ತಪ್ಪುಗಳನ್ನೇ ಹುಡುಕಿ ಶಿಕ್ಷಿಸುತ್ತಿದ್ದರು. ಮೇಲಾಗಿ ಎಲ್ಲರೂ ತಿಂದುಂಡು ಉಳಿದ, ಅದೂ ಹಳಸಿದ ಅನ್ನವನ್ನು ಮಲ್ಲಮ್ಮನಿಗೆ ಊಟಕ್ಕೆ ಕೊಡುತ್ತಿದ್ದರು. ದೇವರ ಪೂಜೆಗೆ ಕೂಡ ಸಮಯ ಸಿಗದಷ್ಟು ಕೆಲಸಗಳನ್ನು ಹಚ್ಚುತ್ತಿದ್ದರು.

ಆದರೆ ಮಲ್ಲಮ್ಮನು ಕಾಯಕದಲ್ಲಿಯೇ ದೇವನಾಮಸ್ಮರಣೆ ಮಾಡುತ್ತಿದ್ದಳು. ಇದು ಶರಣರಾದವರ ನೈತಿಕ ಸಿದ್ಧಾಂತ. ಚಾಡಿ, ಚುಚ್ಚು ಮಾತು, ಜಗಳ, ಕಿರಿಕಿರಿಯಿಂದ ಬಳಲಿರುವ ಅರಮನೆಗಿಂತ ಇವುಗಳಿಲ್ಲದ ಗುಡಿಸಲೇ ಲೇಸೆಂದು ಹೇಮರಡ್ಡಿಯು ಭಾವಿಸಿದನು. ಅಡವಿಯಲ್ಲಿ ಆಕೆ ನಿರಾತಂಕವಾಗಿ ಚೆನ್ನಮಲ್ಲಿಕಾರ್ಜುನನ ಧ್ಯಾನ, ಪೂಜೆ, ಜಪ, ತಪ, ವ್ರತಗಳನ್ನು ನಡೆಸುತ್ತ ಆನಂದದಲ್ಲಿ ಕಾಲ ಕಳೆಯಬಹುದೆಂದು ಭಾವಿಸಿದ ಹೇಮರಡ್ಡಿ; ಅಲ್ಲದೆ ಈ ದುಷ್ಟರ ಕಾಟ ತಪ್ಪಿತಲ್ಲವೆಂದು ಬಗೆದ ಮಾವನು ಗುಡಿಸಲಲ್ಲಿಯಾದರೂ ಆನಂದದಿಂದಿರಲೆಂದು ಹಾರೈಸಿದನು.

ಲೌಕಿಕವನ್ನು ಮೀರಿ ಅಲೌಕಿಕ ಪ್ರಪಂಚದಲ್ಲಿ ಕಾಲಿಟ್ಟ ಮಹಿಮಾಪುರುಷನಿಗೆ ಕಾಡೇನು ನಾಡೇನು? ಎನ್ನುವಂತೆ ಜ್ಞಾನಿಯಾದ ಮಲ್ಲಮ್ಮನಿಗೆ ತನಗೊದಗಿದ ಪರಿಸ್ಥಿತಿಗೆ ಅಳುಕದೇ ಕಾಡಿಗೆ ನಡೆದಾಗ ಊರ ಜನರು ತಂತಮ್ಮಲ್ಲಿಯೇ ಇದೆಂಥ ವಿಷಮ ಪರಿಸ್ಥಿತಿ ಈಕೆಗೊದಗಿದೆ! ಇವಳಿಗಾಗುತ್ತಿರುವ ಅನ್ಯಾಯ-ಕೇಡನ್ನು ಕಂಡು ಜಗವು ಸೈರಿಸದು. ಈಕೆಯ ಅತ್ತೆ-ಮಾವ, ಹಿರಿಯ ಸೊಸೆಯಂದಿರರು ಇವರೆಂಥ ಮನುಜರು? ಇವರೆಂಥ ಗಂಡಸರು? ಕಟುಕ ಹೃದಯಿಗಳು, ನೀಚರು ಇಂಥವರನ್ನು ನಾವು ಇಂದಿನ ತನಕವೂ ಎಲ್ಲಿಯೂ ಕಂಡಿರಲಿಲ್ಲವೆಂದು ಮಲ್ಲಮ್ಮನಿಗಾಗಿ ಮಮ್ಮಲ ಮರುಗಿದರು. ಇಷ್ಟಾದರೂ ಆಕೆ ನಗುನಗುತ್ತಾ ಕಾಡಿಗೆ ಹೋಗುತ್ತಾಳೆ, ದನಕಾಯುವ ಮತ್ತು ಸಗಣಿ ಸಂಗ್ರಹಿಸುವ, ಅವುಗಳಿಗೆ ಮೇವು ಹಾಕಿ ನೀರು ಕುಡಿಸುವ ಕೆಲಸದಲ್ಲಿ ಮಗ್ನಳಾಗುತ್ತಾಳೆ. ಇಷ್ಟೆಲ್ಲವಾದರೂ ಆಕೆ ತನ್ನ ತಂದೆ-ತಾಯಿಗಳಿಗೆ ತನಗುಂಟಾದ ಕಷ್ಟಗಳನ್ನು ಎಲ್ಲೆಲ್ಲಿಯೂ–ಯಾರಲ್ಲಿಯೂ ಹೇಳಿಕೊಳ್ಳಲಿಲ್ಲ. ಆ ಚೆನ್ನಮಲ್ಲಿಕಾರ್ಜುನನ ಮೇಲೆಯೇ ಭಾರ ಹಾಕಿ ಕಾರ್ಯತತ್ಪರಳಾಗುತ್ತಾಳೆ. ಇದನ್ನೆಲ್ಲ ಕಂಡರೆ ಮಲ್ಲಮ್ಮನು ಮಹಾಮಾತೆ–ಮಹಾಮಹಿಳೆ, ಅಸಾಮಾನ್ಯ ಸ್ತ್ರೀಯಳಾಗಿರದೇ ಸಾಕ್ಷಾತ್ ದೇವತೆಯಾಗಿದ್ದಾಳೆಯೆಂದಿತು ಕೂಡಿದ ಜನತೆ.

ತವರುಮನೆಯಲ್ಲಿ ಎಂದೂ ಬಿಸಿಲು ಕಾಣದ, ಹೂವಿನಂತೆ ಸುಖಿಯಾಗಿ ಬೆಳೆದ, ಕಷ್ಟವನ್ನೇ ಕಂಡರಿಯದ ಕೋಮಲೆಗೆ ಪತಿಯ ಮನೆಯ ಪರಿತಾಪ ಮೀನನ್ನು ನೀರಿನಿಂದ ಹೊರಗೆಸೆದಂತಾಗಿತ್ತು. ಆದರೂ ಆಕೆಗೆ ಇವುಗಳಿಂದ ದುಃಖಿಸದ, ಕೊರಗದ, ಚಿಂತಿಸದ ಧೀಮಂತ ವೀರಮಹಿಳೆಯಾಗಿದ್ದಳೆನ್ನಬೇಕು. ಸಾಮಾನ್ಯ ಮಹಿಳೆಯರಾದರೆ ಬೀದಿರಂಪ-ಹಾದಿರಂಪ ಮಾಡುತ್ತಿದ್ದಳು. ಆದರೀಕೆ ಶರಣೆ-ಸಾಧ್ವಿ ಶಿರೋಮಣಿ- ಬರುವುದೆಲ್ಲ ಬರಲಿ



ಎಂದು ಚೆನ್ನಮಲ್ಲಿಕಾರ್ಜುನನನ್ನು ಮನದಲ್ಲಿ ಸ್ಥಿರಗೊಳಿಸಿಕೊಂಡಳು. ಉರಿ ಬರಲಿ-ಸಿರಿ ಬರಲಿ ಎಲ್ಲವನ್ನೂ ಆತನಿಗರ್ಪಿಸಿ ಚಿಂತಿಸದೇ ತದೇಕಚಿತ್ತದಿಂದ, ಸಮಚಿತ್ತವನ್ನಾಗಿಸಿಕೊಂಡು ತನ್ನ ಕಾಯಕದಲ್ಲಿ ನಿರತಳಾಗುತ್ತಿದ್ದಳು. ಅಡವಿಯಲ್ಲಿ ಕಲ್ಲು ಮುಳ್ಳುಗಳನ್ನು ತುಳಿಯುತ್ತ, ಬರಿಗಾಲಿನಿಂದಲೇ ನಡೆಯುತ್ತ, ಆಕಳುಗಳನ್ನು ಕಾಯುತ್ತ ಸಗಣಿಯನ್ನು ಸಂಗ್ರಹಿಸುತ್ತಿದ್ದಳು. ದಿನವೂ ದನಗಳಿಗೆ ನೀರು ಕುಡಿಸುವುದು, ಅವುಗಳ ಮೈ ತೊಳೆಯುವುದು, ಅವುಗಳ ಸೇವೆ ಮಾಡುತ್ತ ದನದ ಕೊಟ್ಟಿಗೆಯಲ್ಲೇ ಮಲಗುತ್ತಿದ್ದಳು. ಮಲಗಲು ಹಾಸಿಗೆ-ಹೊದಿಕೆಗಳೇ ಇರಲಿಲ್ಲ; ಭೂಮಿಯೇ ಹಾಸಿಗೆ – ಆಕಾಶವೇ ಹೊದಿಕೆಯಾಗಿತ್ತು. ಮೈಮೇಲಿರುವ ಉಟ್ಟ ಸೀರೆಯ ಹೊರತಾಗಿ ಮತ್ತೊಂದು ಸೀರೆಯಿರಲಿಲ್ಲ. ಇರುವುದೊಂದೇ ಸೀರೆಯಲ್ಲಿಯೇ ಅರ್ಧ ಭಾಗ ಮಾಡಿಕೊಂಡು ಸ್ನಾನ ಮಾಡಿ ಒಂದು ತುಂಡು ಉಡುವುದು ಇನ್ನೊಂದು ತುಂಡನ್ನು ಮಡಿ ಮಾಡಿ ಒಣಗಿಸಲು ಹಾಕುವುದು; ಮರುದಿವಸ ಅದನ್ನು ಉಡುವುದು ಇದುವೇ ದಿನದ ಉಡುಪಾಗಿತ್ತು. ಇಷ್ಟೆಲ್ಲ ತೊಂದರೆಗಳಾದರೂ ಈ ಅವಸ್ಥೆಗೆ ತಾನೆಂದೂ ದುಃಖಿಸಲಿಲ್ಲ ಮತ್ತು ಯಾರನ್ನೂ ನಿಂದಿಸಲಿಲ್ಲ. ಅಲ್ಲದೆ ಚೆನ್ನಮಲ್ಲಿಕಾರ್ಜುನದೇವನ ಮುಂದೆಯೂ ಪ್ರಸ್ತಾಪಿಸಲಿಲ್ಲ; ಅದೆಂತು ಸಹನಾಮೂರ್ತಿಯಾಕೆ ಅಲ್ಲವೆ! ತವರೂರಿಗೂ ಹೇಳಿ ಕಳಿಸಲಿಲ್ಲ. ಅವರಿಗೆ ಒಂದು ವೇಳೆ ತಿಳಿಸಿದರೆ ಅವರು ತನಗಾಗಿ ಕೊರಗದೇ ಇರಲಾರರೆಂದು ಭಾವಿಸಿದವಳು ಮಲ್ಲಮ್ಮ. ಎಂಥ ಎಂಟೆದೆಯ ಬಂಟೆ ಈ ಮಲ್ಲಮ್ಮ? ಒಂದು ವೇಳೆ ಇವೆಲ್ಲವನ್ನೂ ಅನ್ಯರ ಮುಂದೆ ಬಣ್ಣಿಸಿದರೆ ಗಂಡನ ಮನೆಗೆ ಶ್ರೇಯಸ್ಕರವಲ್ಲವೆಂದು ಮನದಲ್ಲಿ ಬಗೆದು; ಎಲ್ಲವನ್ನೂ ನುಂಗಿಕೊಂಡು ನಗುನಗುತ್ತ ನಂಜುಂಡೇಶ್ವರನ ಸೇವೆಯಲ್ಲಿ ತಲ್ಲೀನಳಾಗುತ್ತಿದ್ದಳು.

ಎಂದಿನಂತೆ ಆಕಳುಗಳನ್ನು ಹಿಂಡಿ ಹಾಲನ್ನು ಮನೆಗೆ ಒಯ್ದುಕೊಟ್ಟು ಮನೆಯಲ್ಲಿಯ ಎಲ್ಲ ಕೆಲಸ ಮಾಡುತ್ತಿದ್ದ ಅವಳಿಗೆ ಶೇಷಾನ್ನವನ್ನು ಅದೂ ಹಳಸಿದನ್ನವನ್ನು ಕೊಡುತ್ತಿದ್ದ ನೆಗೆಣ್ಣಿಯರ ಮಾತುಗಳಿಗೆ ಎದುರಾಡದೆ ಪಂಚಾಮೃತ-ದೇವಾನ್ನವೆಂದು ಭಾವಿಸಿ ಸೇವಿಸುತ್ತಿದ್ದಳು. ನೆಗೆಣ್ಣಿಯರು ಅದೆಂಥ ಕಿಡಿಗೇಡಿಗಳೆಂದರೆ – ಹಳಸಿದನ್ನವನ್ನು ಕೊಡುತ್ತಿದ್ದರೂ, ಅದು ಮಲ್ಲಮ್ಮನ ಕೈಗೆ ಬರುತ್ತಿದ್ದಂತೆಯೇ ಪಕ್ವಾನ್ನವಾಗುತ್ತಿತ್ತು. ದೇವದೇವನನ್ನು ಸ್ಮರಿಸುತ್ತ ಸೇವಿಸುತ್ತಿದ್ದಳು. ಆದರೆ ಒಂದು ದಿನ ಅದೇ ಅನ್ನಕ್ಕೂ ಗತಿಯಿಲ್ಲವೆಂಬಂತೆ ಬಾಗಿಲ ಮುಂದೆ ಭಿಕ್ಷುಕರು ಬರಲು ತಾನು ಉಣ್ಣುವುದನ್ನು ಅವರಿಗೇ ಕೊಟ್ಟು ಬರೀ ಹೊಟ್ಟೆಯಿಂದಲೇ ದೇವರನ್ನು ನೆನೆಯುತ್ತಿದ್ದಳು. ನಮ್ಮಿಬ್ಬರಿಗೂ ಇಂದು ಉಪವಾಸವೇ ಗತಿಯೆಂದು ಹೇಳುತ್ತಿದ್ದಳು. ಈ ರೀತಿಯ ಕಷ್ಟಕರ ಜೀವನ ಸಹಿಸದ ಆಕೆಯ ಮನೆಯವರಾದ ಅತ್ತೆ-ನೆಗೆಣ್ಣಿಯರು ಅರಿಯದಾದರು. ಸೊಸೆಯ (ಮಲ್ಲಮ್ಮ) ಗುಣವನ್ನರಿತ ಮಾವನ ಮಾತೂ ಅವನ ಹೆಂಡತಿ ಪದ್ಮಾವತಿಯ ಮುಂದೆ ಏನೂ ನಡೆಯುತ್ತಿರಲಿಲ್ಲ. ಮೇಲಾಗಿ ಮಲ್ಲಮ್ಮನ ಗಂಡ ಅತೀವ ಮುಗ್ಧ ಸ್ವಭಾವದವನಾಗಿದ್ದನು. ತಂದೆಯಂತೆಯೇ

ತಾಯಿಗೆ ಹೆದರುತ್ತಿದ್ದನು.

ಭರಮರಡ್ಡಿಯ ಸದ್ಗುಣವನ್ನು ಮನೆಯ ಹೆಂಗಸರು ದುರುಪಯೋಗಪಡಿಸಿಕೊಳ್ಳಲು ತುದಿಗಾಲ ಮೇಲೆಯೇ ನಿಂತಿದ್ದರು. "ಮಲ್ಲಿಕಾರ್ಜುನಾ, ಮಲ್ಲಿಕಾರ್ಜುನಾ" ಎಂದು ಮಲ್ಲಮ್ಮನು ಜಪಿಸುತ್ತಾ ಕುಳಿತುಕೊಂಡದ್ದನ್ನು ಕಂಡ ಆಕೆಯ ನೆಗೆಣ್ಣಿಯರು ಅಪಾರ್ಥ ಕಲ್ಪಿಸಿ ಭರಮರಡ್ಡಿಯ ತಲೆಯಲ್ಲಿ ತುಂಬಿದ್ದು ಹೀಗೆ – "ಭರಮರಡ್ಡಿ ನೀನು ಹುಚ್ಚನಿರುವಿ; ನಿನ್ನ ಹೆಂಡತಿಯು ಅಡವಿಯಲ್ಲಿ ಪರಪುರುಷನೊಡನೆ ಅನೈತಿಕ ಸಂಬಂಧ ಹೊಂದಿದ್ದಾಳೆ. ನೀನು ಕೂಡಲೇ ಹೋಗಿ ಆಕೆಯನ್ನು ಕೊಂದು ಬಾ, ನಿನಗೆ ಈಕೆಯಗಿಂತಲೂ ಸುಂದರವಾದ ಹೆಣ್ಣು ತಂದು ಮದುವೆ ಮಾಡುತ್ತೇವೆ" ಎಂದು ಹೇಳಿದರು. ಭರಮರಡ್ಡಿಯ ತಾಯಿಯೂ ಇವರೆಲ್ಲರ ಮಾತುಗಳಿಗೆ ಧ್ವನಿಗೂಡಿಸಿದಳು.

ಈ ಮಾತು ಭರಮರಡ್ಡಿಗೆ ಮಂಗನಿಗೆ ಸರಾಯಿ ಕುಡಿಸಿದಂತಾಯಿತು. ಇವರ ಮಾತು ಕೇಳಕೇಳುತ್ತಿದ್ದಂತೆಯೇ ತಡ ಕೈಯಲ್ಲಿ ಕೊಡಲಿ ಹಿಡಿದುಕೊಂಡು ಮಲ್ಲಮ್ಮನಿರುವ ಕಾಡಿಗೆ ಲಗುಬಗೆಯಿಂದ ಹೋದ. ಪತ್ನಿಯನ್ನು ದೂರದಿಂದ ಕಂಡ; ಆತ ಬಂದಾಗ ಮಲ್ಲಮ್ಮನು ಚೆನ್ನಮಲ್ಲಿಕಾರ್ಜುನನ ಧ್ಯಾನದಲ್ಲಿ ಮುಳುಗಿದ್ದಳು, ಆಗ ಆಕೆ ಬಾಹ್ಯಪ್ರಪಂಚವನ್ನೇ ಮರೆತಿದ್ದಳು. ಆತ ದೂರ ನಿಂತು ದಿಟ್ಟಿಸುತ್ತಾನೆ – ಮತ್ತು ಆಕೆಯ ಮುಂದಿರುವ ಶಿವಲಿಂಗವನ್ನು ತದೇಕಚಿತ್ತದಿಂದ ದಿಟ್ಟಿಸುತ್ತಾನೆ. ತನಗರಿವಿಲ್ಲದೆಯೇ ಎಷ್ಟೋ ಅವಧಿಯ ವರೆಗೆ ನಿಂತುಬಿಟ್ಟನು. ಕ್ಷಣಮಾತ್ರದಲ್ಲಿ ಅವನಿಗೆ ಚೆನ್ನಮಲ್ಲಿಕಾರ್ಜುನನ ಮಹಾಚೈತನ್ಯದ ದಿವ್ಯ ದರ್ಶನವಾಯಿತು. ಈ ಘಟನೆಯಿಂದಾತ ದಿಙ್ಮೂಢನಾದ. ಮಲ್ಲಮ್ಮನ ಸಾತ್ವಿಕತೆಯ ಪರಿಣಾಮದಿಂದಾಗಿ ಭರಮರಡ್ಡಿಯ ಹೆಗಲ ಮೇಲಿರುವ ಕೊಡಲಿ ಕೈಜಾರಿ ನೆಲಕ್ಕೆ ಬಿದ್ದಿತು. ನಿಧಾನವಾಗಿ ಮುಂದೆ ಬಂದು ಮಲ್ಲಮ್ಮನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ನನ್ನದು ತಪ್ಪಾಯಿತು! ತಾಯಿಯ ಮಾತು ಕೇಳಿ ನಿನ್ನನ್ನು ಕೊಲಲ್ಲು ಬಂದೆನು; ತಪ್ಪಾಯಿತು ಕ್ಷಮಿಸು: ಕ್ಷಮಿಸೆಂದು ದುಃಖಿಸಿದನು. ಆತ್ಮಾನಂದದ ಆನಂದದಲ್ಲಿ ಮುಳುಗಿದ್ದ ಮಲ್ಲಮ್ಮನು ಪತಿಯ ಧ್ವನಿ ಕೇಳಿ ಎಚ್ಚೆತ್ತು ಶಿವ ಶಿವಾ ಎಂದು ಅವರ ಪಾದಗಳಿಗೆರಗಿದಳು. ಸ್ವಾಮಿ ಒಡೆಯಾ ನೀವು ಮಾಡಿದಂತಹ ತಪ್ಪೇನು? ನಾನು ಕ್ಷಮಿಸುವುದೆಂದರೇನು?ಎಲ್ಲವೂ ಆ ಚೆನ್ನಮಲ್ಲಿಕಾರ್ಜುನದೇವನು ಎಸಗಿದ ಲೀಲೆಯಲ್ಲವೆ? ಎಂದಳು.

ಇತ್ತ ಮಲ್ಲಮ್ಮನನ್ನು ಅಡವಿಗೆ ಅಟ್ಟಿದಂದಿನಿಂದ ಹೇಮರಡ್ಡಿಯ ಮನೆಗೆ ಕತ್ತಲೆಯು ಕವಿಯಿತು, ಬಡತನ ಕಾಲಿಟ್ಟಿತು, ದಾರಿದ್ರ್ಯವು ಹೆಚ್ಚಿತು. ಮಲ್ಲಮ್ಮನಿಗೆ ಹಿಂಸಿಸಿದ ಪರಿಣಾಮದಿಂದಾಗಿ ಮೊದಲಿದ್ದ ಶ್ರೀಮಂತಿಕೆ ಕಳೆದುಹೋಯಿತು. ಇವರನ್ನು ಪರೀಕ್ಷಿಸುವುದರ ಸಲುವಾಗಿ ಸಾಕ್ಷಾತ್ ಚೆನ್ನಮಲ್ಲಿಕಾರ್ಜುನದೇವನೇ ಭಿಕ್ಷಾರ್ಥಿಯಾಗಿ ಇವರ ಮನೆ ಬಾಗಿಲಿಗೆ ಬಂದು, ಬಾಗಿಲಲ್ಲಿ ನಿಂತು ಹೊಟ್ಟೆಗೆ ಆಹಾರವಿಲ್ಲದೇ ಸಾಯುತ್ತಲಿರುವೆನು ತಾಯಿ! ದಯೆ



ತೋರಿ ಅನ್ನವನ್ನು ನೀಡಿ ಪುಣ್ಯ ಕಟ್ಟಿಕೊಳ್ಳಿರಿ. ನಮ್ಮಂಥ ಭಿಕ್ಷುಕರು ಬದುಕುವುದೇ ನೀವು ನೀಡಿದ ಅನ್ನದಿಂದ ಮುಂತಾದ ಮಾತುಗಳಿಂದ ಅಂಗಲಾಚಿ ಅನ್ನ ಅನ್ನವೆಂದು ಕೇಳಿದನು. ಆಗ ಅತ್ತೆ-ಸೊಸೆಯಂದಿರೆಲ್ಲರೂ ನಿನಗೇನಾಗಿದೆ ಧಾಡಿ? ಗಟ್ಟಿಮುಟ್ಟಾಗಿದ್ದೀಯಾ ದುಡಿದು ತಿನ್ನಬಾರದೇ ಮೂರ್ಖಾ? ಹೋಗು ನಾವು ನೀಡಲಾರೆವು ಎಂದು ಬಯ್ದು ಕಳಿಸಿದರು.

ಇದರಿಂದ ಅಪಮಾನಗೊಂಡ ದೇವನು ನೇರವಾಗಿ ಮಲ್ಲಮ್ಮನಿರುವೆಡೆಗೆ ಬಂದು ನಿಮ್ಮ ಮಾವ–ನೆಗೆಣ್ಣೆಯರು ಹೀಗೆಂದು ಹಿಯ್ಯಾಳಿಸಿದರು. ಅವರಿಂದ ನನಗೆ ನೋವಾಗಿದೆ. ಆದ್ದರಿಂದ ನನ್ನ ತಪಸ್ಸು ಹಾಳಾದರೂ ಚಿಂತೆಯಿಲ್ಲ. ಅವರಿಗೆಲ್ಲರಿಗೂ ಕೆಮ್ಮು, ಕ್ಷಯ, ನಾರುಹುಣ್ಣು ಮುಂತಾದ 360 ರೋಗಗಳನ್ನು ತಗುಲಿಸುವೆನು ಎಂದು ಗುಡುಗಿದನು. ಇದನ್ನು ಕೇಳಿದ ಮಲ್ಲಮ್ಮನ ಮನಸ್ಸು ತಳಮಳಗೊಂಡಿತು.

ದೇವಾ! ನನ್ನ ಮನೆಯವರಿಗೆ ಕೇಡಾಗುವುದನ್ನು ಸಹಿಸಲಾರೆನು. ಹಾಗಾಗಲು ಮಹಾಸಾಧ್ವಿ ಮಲ್ಲಮ್ಮನು ಬಿಡಲಿಲ್ಲ. ತನ್ನನ್ನು ಹಿಂಸಿಸಿದವರಿಗೆ ಎಳ್ಳಷ್ಟೂ ಹಿಂಸೆಯಾಗಬಾರದು, ಅವರಿಗೆ ಶಾಪವೂ ತಟ್ಟಬಾರದೆಂದು ದೇವನಲ್ಲಿ ಅಂಗಲಾಚಿ ಬೇಡಿಕೊಂಡಳು. ನೋಡಿ ಚೆನ್ನಮಲ್ಲಿಕಾರ್ಜುನದೇವನೇ ಹೇಮರಡ್ಡಿ ಮನೆಯವರಿಗೆ ಶಾಪಕೊಟ್ಟು ಅವರನ್ನು ಗೋಳಾಡಿಸಿದರೆ – ಅವನಿಗೆ ಭಿಕ್ಷೆ ನೀಡದವರ ಮನೆಯನ್ನು ನಾಶ ಮಾಡಿದ ಹೊಟ್ಟೆಕಿಚ್ಚಿನ ಸ್ವಾಮಿಯೆಂದು ಕೆಟ್ಟ ಹೆಸರು ಬರುವುದು. ಅವರು ಬುದ್ಧಿಯಿಲ್ಲದವರು ನಿಜ; ಎಷ್ಟಾದರೂ ನೀನು ಬುದ್ಧಿಯಿದ್ದವನು. ನೀನು ಅವರನ್ನು ಕಾಪಾಡು ಪರಮಾತ್ಮಾ ! ಈ ಹಟ ದಿಟವಾಗಿಯೂ ಸರಿಯಲ್ಲ. ಮಹಾದೇವನಾದ ನೀನು ಕ್ಷಮಾಗುಣವನ್ನು ಮೆರೆಯಬೇಕು. ನನ್ನನ್ನು ನೋಡಿಯಾದರೂ ಆ ನೋವು-ಅಪಮಾನಗಳನ್ನು ಮರೆ–ಮುಂತಾಗಿ ಹೇಳಿ ದೇವನನ್ನು ಸಮಾಧಾನಪಡಿಸಿದಳು. ಹೀಗೆ ಹೇಮರಡ್ಡಿ ಮಲ್ಲಮ್ಮನಂತೆ ದೇವರಿಗೇ ತಿಳಿಹೇಳುವ ಜ್ಞಾನಿಗಳು ಅಥವಾ ಭಕ್ತರು, ಯೋಗಿಗಳು ಕಡಿಮೆ. ಇದು ಅವನ ಮನಃಪರಿವರ್ತನೆ ಮಾಡಿದ್ದು ಅಪರೂಪದ ಘಟನೆಯೆ! ಮಲ್ಲಮ್ಮನು ಇಷ್ಟೆಂದವಳೇ ತಾನಾಯ್ತು ಗೋಸೇವೆಯಾಯ್ತು ಮಗ್ನಳಾಗುವಳು. ತನಗೆ ತೊಂದರೆಕೊಟ್ಟ ಅತ್ತೆ-ನೆಗೆಣ್ಣೆಯರು ಒಳ್ಳೆಯವರೆಂದೇ ಭಾವಿಸಿ ನಡೆದಳು. ಗೋಸೇವೆಯಲ್ಲಿಯೇ ನೆಮ್ಮದಿ-ಸುಖವನ್ನು ಕಂಡಳು. ಇಂಥ ಸೇವೆಯು ಎಲ್ಲರಿಗೂ ದೊರೆಯುವಂತಹದ್ದಲ್ಲ. ಪೂರ್ವಜರ ಪುಣ್ಯದ ಫಲದಿಂದ ನನಗೆ ಲಭಿಸಿದೆಯೆಂದು ಭಾವಿಸಿದಳು. ಮೂಕಪ್ರಾಣಿಯ ಸೇವೆ ಅತ್ಯಂತ ಪವಿತ್ರವೆಂದೇ ಬಗೆದಳು. ಗೋವಿನ ದರ್ಶನಭಾಗ್ಯ ದೊರಕಿಸಿದ ನನ್ನ ಅತ್ತೆ-ನೆಗೆಣ್ಣಿಯರಿಗೆ ಅದೆಷ್ಟು ಅಭಿನಂದನೆಗಳನ್ನು ಸಲ್ಲಿಸಿದರೂ ಕಡಿಮೆಯೇ. ಗೋವಿನ ದರ್ಶನ ಸರ್ವರಿಗೂ ಶುಭದಾಯಕವಾಗಿದೆ.

ಇತ್ತ ಹೇಮರಡ್ಡಿ ಮಲ್ಲಮ್ಮನ ಮನೆತನದವರಿಗೆ ಅವರೆಸಗಿದ ದುಷ್ಕೃತ್ಯಕ್ಕೆ ಕೇಡುಗಾಲ ಬಂದೊದಗಿದೆಯೆಂಬಂತೆ ಮನೆಯಲ್ಲಿಯ ಧನ-ದವಸ-ಧಾನ್ಯವೆಲ್ಲವೂ ಕರಗಿ ಮನೆ

ಬರಿದಾಯಿತು. ಹೊಟ್ಟೆಗೆ ಹಿಟ್ಟು–ಮೈಗೆ ಬಟ್ಟೆ ಇಲ್ಲದಾಯಿತು. ತುಂಬಾ ರೋಗಗಳೂ ಅಂಟಿಕೊಂಡವು. ನಿದ್ರೆಯಿಂದ ಯಮಯಾತನೆಯಿಂದ ಬಳಲತೊಡಗಿದರು. ಹೇಮರಡ್ಡಿಯು ಮಾತ್ರ ಇವರಿಗಾದ ಸ್ಥಿತಿಯನ್ನು ಅರಿತಿದ್ದನು. ಅದೇನೆಂದರೆ ಮಲ್ಲಮ್ಮನಿಗೆ ಹಿಂಸೆ ಕೊಟ್ಟದ್ದುದರಿಂದ ಈ ರೀತಿಯಾಯಿತೆಂಬುದಾಗಿ ಅವರಿಗಾತ ಹೇಳಿದ್ದೇನೆಂದರೆ ಮಲ್ಲಮ್ಮನ ಬಳಿಗೆ ಹೋಗಿ ಆಕೆಯಲ್ಲಿ ಕ್ಷಮೆ ಕೇಳುವುದೊಂದೇ ಬಾಕಿ ಮತ್ತು ಅದುವೇ ಸರಿಯಾದ ಹಾದಿಯೆಂದನು. ಅವರೆಲ್ಲರೂ ಅನುಭವಿಸುವ ನೋವು ಹೆಚ್ಚಾದಂತೆ ಅವರಿಗೆ ತಮ್ಮ ತಪ್ಪಿನ ಅರಿವು ಆಯಿತು. ಆದರವರು ಮಲ್ಲಮ್ಮನ ಕಡೆಗೆ ಹೋಗದೇ ಚೆನ್ನಮಲ್ಲಿಕಾರ್ಜುನನ ಪದತಲದಲ್ಲಿ ಬಿದ್ದು ಬಿದ್ದು ಉರುಳಾಡಿದರು. ಹೇ! ದೇವನೇ ಕರುಣಾಸಾಗರನೇ ನಮ್ಮನ್ನು ಮುನ್ನಿನ ಸ್ಥಿತಿಗೆ ತರಬೇಕೆಂದು ಪ್ರಾರ್ಥಿಸಿಕೊಂಡರು. ಆದರೆ ಅದಾದದ್ದು ಬೇರೆ; ನೀವು ಮಲ್ಲಮ್ಮನ ಪಾಗಳಿಗೆರಗಿ ಬೇಡಿಕೊಳ್ಳಿರಿ ಎಂದು ಆ ಚೆನ್ನಮಲ್ಲಿಕಾರ್ಜುನನು ಕನಸಿನಲ್ಲಿ ಕಾಣಿಸಿಕೊಂಡು ಹೇಳಿದನಂತೆ. ಅವರೆಲ್ಲರೂ ಆತ ಹೇಳಿದಂತೆಯೇ ಮಾಡಿದರು. ಅತ್ತೆ-ಅಕ್ಕಾ ನೀವು ನನಗಿಂತಲೂ ದೊಡ್ಡವರು-ಹಿರಿಯರು. ನೀವು ನನಗೆರಗುವುದು ಸರಿಯಲ್ಲ! ನೀವು ಯಾವ ತಪ್ಪನ್ನೂ ಮಾಡಿಲ್ಲ! ನಾನನುಭವಿಸಿದ ಕಷ್ಟ ನನ್ನ ಹಣೇಬರಹವಷ್ಟೇ ಎನ್ನುವಳು. ಇವರೆಲ್ಲರ ಪರವಾಗಿ ದೇವನಲ್ಲಿ ಪ್ರಾರ್ಥಿಸಿಕೊಂಡಳು. ಮಲ್ಲಿಕಾರ್ಜುನನ ಧ್ಯಾನದ ಬಲದಿಂದ ಬದುಕಿನ ಬವಣೆಯನ್ನು ಸಹಿಸಿ; ಕೊನೆಯಲ್ಲಿ ಮನೆಯ ಜನರ ಮನವನ್ನು ಗೆದ್ದಳು. ಈ ರೀತಿಯಾಗಿ ಆಯುಷ್ಯವನ್ನೆಲ್ಲ ಸವೆಯಿಸಿದ ಮಲ್ಲಮ್ಮನ ಮಾಗಿದ ಜೀವ ತೊಟ್ಟು ಕಳಚುವ ಕಾಲ, ಆಕೆಯ ಜೀವನ ಜ್ಯೋತಿ ಆರುವ ಸಮಯ ಸಮೀಪಿಸಿತು. ಆಕೆಗೆ ಪರಮಾರ್ಥ ಪಥದ ಚಿಂತನೆ ಇನ್ನೂ ಬಲಿಯಿತು. ಚೆನ್ನಮಲ್ಲಿಕಾರ್ಜುನನ ಸಾಮಿಪ್ಯದಲ್ಲಿ ಇಹಲೋಕದಿರವನ್ನೇ ಮರೆತು ಬಹು ಹೊತ್ತಿನವರೆಗೆ ಸಮಾಧಿಸ್ಥಿತಿಯಲ್ಲಿರುತ್ತಿದ್ದಳು. ಹೀಗಿರುವಾಗ ಒಂದು ಶುಭ ಗಳಿಗೆಯಲ್ಲಿ ಮಲ್ಲಮ್ಮನಿಗೆ ಮಲ್ಲಿಕಾರ್ಜುನನ ಮಹಾಚೈತನ್ಯದ ದಿವ್ಯ ದರ್ಶನವಾಗಿ ಲೌಕಿಕ ಜಗತ್ತನ್ನು ತೊರೆದು ಹೋಗುತ್ತಿರುವಾಗ ನಿನ್ನ ಕೊನೆಯಾಸೆ ಏನೆಂದು ದೇವನು ಕೇಳುತ್ತಾನೆ. ಆಗ ಮಲ್ಲಮ್ಮ ಆ ದೇವನಲ್ಲಿ ಪ್ರಾರ್ಥಿಸಿಕೊಂಡದ್ದೇನೆಂದರೆ – "ಕೇವಲ ತನಗೆ, ತನ್ನ ಮನೆತನಕ್ಕೆ ಮಾತ್ರವಲ್ಲ ಇಡೀ ರಡ್ಡೀ ಜನಾಂಗಕ್ಕೆ ಎಂದೆಂದಿಗೂ ಬಡತನವೆಂಬ ಝಳ ತಗುಲದಿರಲಿ. ತನ್ನ ರಡ್ಡಿ ಬಾಂಧವರೆಲ್ಲ ಉಂಡುಟ್ಟು ಸದಾ ಸುಖಿಯಾಗಿರಲು, ಸಿರಿವಂತರಾಗುವಂತೆಯೂ, ಅವರಿಗೆ ಯಾವ ಕಾಲಕ್ಕೂ ಧನ, ಕನಕ, ಧವಸ-ಧಾನ್ಯಗಳು ಕೊರತೆಯಾಗದಂತೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿಕೊಂಡಳು.

ಚೆನ್ನಮಲ್ಲಿಕಾರ್ಜುನದೇವನು ಆಕೆಯ ಇಚ್ಛೆ ಈಡೇರಲೆಂದು ಆಶೀರ್ವದಿಸಿದನಂತೆ. ಆಗ ಕೊನೆಯವಸಾನದಲ್ಲಿದ್ದ ಮಲ್ಲಮ್ಮನು ತನ್ನ ಬಂಧು-ಬಳಗ-ರಡ್ಡಿ ಕುಲದವರನ್ನೆಲ್ಲ ಮುಂದೆ ಕರೆದು – ನೀವೆಲ್ಲರೂ ಚೆನ್ನಮಲ್ಲಿಕಾರ್ಜುನನು ಕರುಣಿಸಿದ ಸಂಪತ್ತಿನಿಂದ ಸೊಕ್ಕದೇ, ಬಡವರಲ್ಲಿ ದಯೆದೋರಿ, ಅದನ್ನು ದಾನ-ಧರ್ಮಕ್ಕಾಗಿ ಉಪಯೋಗಿಸಿರಿ ಎನ್ನಲು ಅವರೆಲ್ಲ



ನಿನ್ನ ಉಪದೇಶವೆಮಗೆ ಶ್ರೀರಕ್ಷೆಯಾಗಲಿ. ನೀ ಹೇಳಿದಂತೆಯೇ ಪಾಲಿಸುತ್ತ ನಡೆಯುತ್ತೇವೆ ಯೆಂದು ಒಪ್ಪಿಗೆಯಿತ್ತರು. ನಂತರ ಮಲ್ಲಮ್ಮನು ಸಂತಸದಿಂದ ಭೂಮಿಯ ಮೇಲಿನ ತನ್ನ ಕರ್ತವ್ಯವೆಲ್ಲವೂ ಮುಗಿಯಿತೆಂದು ಪ್ರಾಣ ತ್ಯಾಗ ಮಾಡಿ ಶ್ರೀಶೈಲ ಮಲ್ಲಿಕಾರ್ಜುನದೇವನಲ್ಲಿ ಐಕ್ಯಳಾದಳು. ಎಂಥ ಭಾಗ್ಯವಂತ ಮಹಾಮಹಿಳೆಯೀಕೆ. ಇಡೀ ಜಗತ್ತಿನ ಸ್ತ್ರೀ ಕುಲಕ್ಕೆ ಮಾದರಿಯಾಗಿ ಸದಾ ಪೂಜೆಗೊಳ್ಳುತ್ತಿದ್ದಾಳೆ.

ಹೀಗೆ ಹೇಮರಡ್ಡಿ ಮಲ್ಲಮ್ಮನು ಪರಮ ಪತಿವ್ರತೆ, ಆದರ್ಶ ಸ್ತ್ರೀ ಕುಲರತ್ನೆ, ಆದರ್ಶ ಸೊಸೆ, ಶಿವನ ಮಹಾಭಕ್ತೆ, ಸಹನಾಮೂರ್ತಿ, ಸಮಾಧಾನಿ, ಸ್ಥಿರ ಚಿತ್ತವುಳ್ಳವಳು, ಬಡವ ಬಲ್ಲಿದರೆಂಬ ಭೇದವಿಲ್ಲದವಳು, ಜನಾನುರಕ್ತೆ, ಎಲ್ಲರೂ ನನ್ನವರೆನ್ನುವ ಭಾವವುಳ್ಳವಳು, ದೀನದಲಿತರಲ್ಲಿ-ಭಿಕ್ಷುಕರಲ್ಲಿ ದಯೆ, ಕರುಣೆಯುಳ್ಳವಳು, ದಯಾನಿಧಿ, ದಾನಿಯಮ್ಮ, ಅತಿಥಿ ದೇವೋಭವಕ್ಕೆ ಅನ್ವರ್ಥಕಳಾದವಳು, ಕಷ್ಟದಲ್ಲಿದ್ದವರಿಗೆ ಆಧಾರಸ್ತಂಬಳು, ಕಾಯಕದಲ್ಲಿ ಶ್ರದ್ಧೆಯುಳ್ಳವಳು, ಗೋಸೇವಾ ಪರಿಪಾಲಕಳು, ಜ್ಞಾನನಿಧಿ, ವೈರಾಗಿ, ಚನ್ನ ಪತಿಯ ಮನಃ ಪರಿವರ್ತನ ಮಾಡಿದವಳು, ಗಂಡನ ಮನೆಯ ಭಾಗ್ಯದೇವತೆಯಾಗಿ ಬಂದು ಬೆಳಕು ನೀಡಿದವಳು, ಮೈದುನ ವೇಮನನನ್ನು ವೇಶ್ಯಾವಾಟಿಕೆಯಿಂದ ಪರಿವರ್ತಿಸಿ – ಆತನನ್ನು ಮಹಾಯೋಗಿಯನ್ನಾಗಿಸಿದವಳು, ಬೆಂಕಿಯನ್ನೇ ಧಾನ್ಯವನ್ನಾಗಿ ಪರಿವರ್ತಿಸಿ ಭಿಕ್ಷೆಗೈದ ಮಹಾಮಾತೆ, ಮಣ್ಣು ಬಿತ್ತಿ ಬೆಳೆ ತೆಗೆಯಿಸಿದವಳು, ವಯಸ್ಸಾದ ಮಾವನಿಗೆ ಶ್ರೀಶೈಲ ಚೆನ್ನಮಲ್ಲಿಕಾರ್ಜುನನಲ್ಲಿಯೇ ತಿರುಪತಿಯ ವೆಂಕಟೇಶ್ವರನ ದರ್ಶನಭಾಗ್ಯ ಕರುಣಿಸಿದ ಮಹಾತಾಯಿ, ಕುರುಡನೊಬ್ಬನಿಗೆ ದೃಷ್ಟಿ ಕರುಣಿಸಿದವಳು, ಹುಚ್ಚುನಾಯಿಯ ಬೀಜವನ್ನೇ ಬಂಗಾರವಾಗಿಸಿದವಳು, ತನ್ನನ್ನು ಹಿಂಸಿಸಿದವರನ್ನೆಲ್ಲ ತನ್ನ ಹಿತೈಷಿಗಳೆಂದು ತಿಳಿದು, ಅವರಿಗೆ ಸದಾ ಶುಭವಾಗಲೆಂದು ಆಶಿಸಿ, ಸ್ತ್ರೀ ಧರ್ಮವನ್ನು ಬೋಧಿಸಿ, ಆಚರಣೆಗೆ ತಂದವಳು, ಸಚ್ಚಾರಿತ್ರ್ಯವುಳ್ಳವಳು, ಸದಾಚಾರಿ-ಸರ್ವಗುಣಸಂಪನ್ನೆ - ವಿನಯದ ಸಾಕಾರಮೂರ್ತಿಯಾದ ಮಲ್ಲಮ್ಮ ಸಂಸಾರದಿಂದ ಸದ್ಗತಿಯನ್ನು ಸಾಧಿಸಿದವಳು. ಗುಪ್ತಯೋಗಿನಿಯು ಇವೆಲ್ಲವುಗಳಿಗಿಂತಲೂ ಮಿಗಿಲಾಗಿ ಅತ್ಯಂತ ಭೋಗಿಯಾಗಿದ್ದ ಮೈದುನ ವೇಮನನ್ನು ಮಹಾಯೋಗಿಯನ್ನಾಗಿ ಮಾಡಿದವಳು.

ಒಟ್ಟಿನಲ್ಲಿ ಭಾರತೀಯ-ಕರ್ನಾಟಕಾಂಧ್ರ ಸಂಸ್ಕೃತಿಯ ಸಿರಿಯನ್ನು ಮೆರೆಸಿದ ಮಹಾಮಾತೆ-ಮಹಾದೇವತೆ. ಹೇಮರಡ್ಡಿ ಮಲ್ಲಮ್ಮನ ಕೃಪಾಶೀರ್ವಾದದಿಂದಲೇ ರೆಡ್ಡಿ ವಂಶ-ಆಂಧ್ರ-ಆಂಧ್ರ-ಕರ್ನಾಟಕಗಳಲ್ಲಿ ಸುಖ-ಸಮೃದ್ಧಿಯಿಂದ ಬದುಕಿ-ಬಾಳುವಂತಾದುದು.

ರೆಡ್ಡಿ ವಂಶದ ಪೂರ್ವಜರು ಸ್ಪರ್ಶಿಸಿದ್ದನ್ನೆಲ್ಲವನ್ನು ಸುವರ್ಣವನ್ನಾಗಿ ಪರಿವರ್ತಿಸುವ ಪರುಷವೇದಿಯನ್ನು ಹೊಂದಿದ್ದರೆಂದೂ ಹಾಗೂ ಚಿನ್ನವನ್ನು ಮಾಡುವ ಕಲೆಯನ್ನೂ ಅವರು ಕರಗತ ಮಾಡಿಕೊಂಡಿದ್ದರೆಂದೂ, ಹೇಮರಡ್ಡಿ ಮಲ್ಲಮ್ಮನು ಶ್ರೀಶೈಲ ಮಲ್ಲಿಕಾರ್ಜುನನಿಂದ

ಸಿರಿತನದ ವರವನ್ನು ಪಡೆದಿದ್ದಳೆಂದೂ "ಕುಲಕ್ಕೆ ರಡ್ಡಿ-ಬಂಗಾರದ ಕಡ್ಡಿ" ಎಂಬ ಮಾತು ಪ್ರಚಲಿತ ಮತ್ತು ಪ್ರಸಿದ್ಧಿಯಲ್ಲಿದೆ. ಇಂದಿಗೂ ಈ ಹೇಳಿಕೆ ಕರ್ನಾಟಕಾಂಧ್ರ ರಾಜ್ಯಗಳಲ್ಲಿ ದೊಡ್ಡ ದೊಡ್ಡ ಜಮೀನುದಾರರಾಗಿ, ದಾನಿಗಳಾಗಿ, ಸಮಾಜದಲ್ಲಿ ಗಣ್ಯ ವ್ಯಕ್ತಿಗಳಾಗಿ, ಉಚ್ಚ ಹುದ್ದೆ-ಉಚ್ಚ ಸ್ಥಾನಗಳಲ್ಲಿದ್ದು ಗೌರವಾನ್ವಿತರಾಗಿರುವರು. ಕರ್ನಾಟಕದಲ್ಲಿ ಹೇಮರಡ್ಡಿ ಮಲ್ಲಮ್ಮನ ಅನುಯಾಯಿಗಳು ವೀರಶೈವ ಸಂಪ್ರದಾಯವುಳ್ಳವರಾಗಿಯೂ, ಆಂಧ್ರದಲ್ಲಿ ವೇಮನ-ಸಂಪ್ರದಾಯವುಳ್ಳವರಾಗಿ ಕಂಡುಬರುತ್ತಾರೆ. ಕ್ರಮವಾಗಿ ಇವರ ಕುಲದೇವತೆ ಶ್ರೀಶೈಲದ ಚೆನ್ನಮಲ್ಲಿಕಾರ್ಜುನ ಮತ್ತು ತಿರುಪತಿಯ ವೆಂಕಟೇಶ್ವರನಾಗಿರುವುದು ಕಂಡು ಬಂದಿದೆ.

□

ಕದಳಿ ಎಂಬುದು ತನು, ಕದಳಿ ಎಂಬುದು ಮನ.
ಕದಳಿ ಎಂಬುದು ವಿಷಯಂಗಳು.
ಕದಳಿ ಎಂಬುದು ಭವಘೋರಾರಣ್ಯ,
ಈ ಕದಳಿ ಎಂಬುದ ಗೆದ್ದು ತವೆ ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು
ಭವಗೆದ್ದು ಬಂದ ಮಗಳೆ ಎಂದು ಕರುಣದಿ ತೆಗೆದು ಬಿಗಿಯಪ್ಪಿದಡೆ
ಚೆನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು.

ಮುತ್ತು ನೀರಲಾಯಿತ್ತು, ವಾರಿಕಲ್ಲು ನೀರಲಾಯಿತ್ತು,
ಉಪ್ಪು ನೀರಲಾಯಿತ್ತು.
ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು,
ಮುತ್ತು ಕರಗಿದ್ದುದನಾರೂ ಕಂಡವರಿಲ್ಲ
ಈ ಸಂಸಾರಿ ಮಾನವರು ಲಿಂಗವ ಮುಟ್ಟಿ ಭವಭಾರಿಗಳಾದರು.
ನಾ ನಿಮ್ಮ ಮುಟ್ಟಿ ಕರಿಗೊಂಡೆನಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ.

**- ಅಕ್ಕಮಹಾದೇವಿ**

# ವಾರ್ತಾವಿಹಾರ

**ಛಾಯಾಚಿತ್ರಗಳು ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮವನ್ನು ಉಂಟುಮಾಡುತ್ತವೆ**

ಮೈಸೂರು ನಗರದ ಐವರು ಪತ್ರಿಕಾ ಛಾಯಾಗ್ರಾಹಕರು ಸೇರಿ ಕಲಾಮಂದಿರದ ಸುಚಿತ್ರ ಕಲಾ ಗ್ಯಾಲರಿಯಲ್ಲಿ ದಿನಾಂಕ 18.8.2009ರಂದು ಏರ್ಪಡಿಸಿದ್ದ ಛಾಯಾಚಿತ್ರ ಪ್ರದರ್ಶನದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಪರಮಪೂಜ್ಯರು ಛಾಯಾಚಿತ್ರಗಳು ಮನುಷ್ಯನ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮವನ್ನು ಬೀರುತ್ತವೆ. ಚಿತ್ರಗಳು ಸಂತಸ ತರಬಹುದು ಅಥವಾ ನೋವನ್ನು ಉಣಿಸಬಹುದು. ಆದರೆ ಪರಿಣಾಮ ಬೀರುವುದಂತೂ ನಿಶ್ಚಿತ. ಅಂತಹ ಅದ್ಭುತವಾದ ಚಿತ್ರಗಳು ಈ ಪ್ರದರ್ಶನದಲ್ಲಿವೆ ಎಂದು ನುಡಿದರು. ಪತ್ರಿಕಾ ಛಾಯಾಗ್ರಾಹಕರಿಗಿರುವ ಸಮಯದ ಅಭಾವ ಅವರಲ್ಲಿ ಧಾವಂತ ಸೃಷ್ಟಿಸುತ್ತದೆ. ಅಂಥ ಒತ್ತಡಗಳ ನಡುವೆಯೂ ಅವರು ಉತ್ತಮ ಚಿತ್ರಗಳನ್ನು ತೆಗೆದಿದ್ದಾರೆ. ಎಷ್ಟೋ ಚಿತ್ರಗಳನ್ನು ಅವರು ಪ್ರಾಣಾಪಾಯ ಲೆಕ್ಕಿಸದೆಯೂ ತೆಗೆದಿದ್ದಾರೆ ಎನ್ನುವುದನ್ನು ವೀಕ್ಷಕರು ಗಮನಿಸಬೇಕು ಎಂದ ಪೂಜ್ಯರು, ಜನರು ಈ ಅಪರೂಪದ ಚಿತ್ರ ಪ್ರದರ್ಶನವನ್ನು ವೀಕ್ಷಿಸಿ ಪ್ರೋತ್ಸಾಹಿಸಲು ಕರೆ ನೀಡಿದರು.

ಸಮಾರಂಭದಲ್ಲಿ ವಿಶೇಷ ಆಹ್ವಾನಿತರಾಗಿ ಶ್ರೀ ಕೃಪಾಕರ ಮತ್ತು ಶ್ರೀ ಸೇನಾನಿ, ಆಂದೋಲನ ದಿನಪತ್ರಿಕೆಯ ಸಂಪಾದಕರಾದ ಶ್ರೀ ರಾಜಶೇಖರ ಕೋಟಿ, ಮೈಸೂರು ಮಿತ್ರ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಶ್ರೀ ಕೆ.ಬಿ. ಗಣಪತಿ, ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಶ್ರೀ ಎ. ರಾಮದಾಸ್, ಶಾಸಕರಾದ ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ, ಸಾ.ರಾ. ಮಹೇಶ್, ವಿಧಾನ ಪರಿಷ್ ಸದಸ್ಯರಾದ ಶ್ರೀ ಸಿದ್ಧರಾಜು ಮುಂತಾದವರು ಉಪಸ್ಥಿತರಿದ್ದರು.

**ಸದ್ಭಾವನೆಗಳಿರುವೆಡೆಯಲ್ಲಿ ಧರ್ಮ ಸಂಘರ್ಷಕ್ಕೆ ಅವಕಾಶವಿಲ್ಲ**

ದಿನಾಂಕ 1.9.2009 ರಂದು ಮೈಸೂರಿನ ಉದಯಗಿರಿ ಬಡಾವಣೆಯಲ್ಲಿ ಆಯೋಜಿಸಿದ್ದ ಸದ್ಭಾವನೆ ಐಕ್ಯತಾ ಸಮಾವೇಶದಲ್ಲಿ ಭಾಗವಹಿಸಿದ್ದ ಪರಮಪೂಜ್ಯರು ಮೇಲಿನಂತೆ ತಿಳಿಸಿದರು.

ಧರ್ಮಗಳಿರುವುದು ಭಾವನೆಗಳನ್ನು ವಿಸ್ತಾರಗೊಳಿಸುವುದಕ್ಕೆ, ಗಟ್ಟಿಗೊಳಿಸುವುದಕ್ಕೆ. ಇಂದು ಜಗತ್ತಿನಲ್ಲಿ ಧರ್ಮಗಳಿಂದಲೇ ದೊಡ್ಡ ಸಂಘರ್ಷ ನಡೆಯುವ ಸೂಚನೆಗಳು ಅಲ್ಲಲ್ಲಿ ಕಂಡುಬರುತ್ತಿವೆ. ಆದರೆ ಅದು ಹಾಗಾಗಬಾರದು. ಇಂತಹ ಸಂಘರ್ಷವೇನಾದರೂ

ಮುಂದುವರೆದರೆ ಅದು ಅಣುಯುದ್ಧಕ್ಕಿಂತಲೂ ಘನಘೋರವಾದದ್ದು. ಧರ್ಮ ಗುರುಗಳು, ಸಾಮಾಜಿಕರು ಈ ದಿಸೆಯಲ್ಲಿ ಗಂಭೀರವಾದ ಚಿಂತನೆಯನ್ನು ನಡೆಸಿ ಎಲ್ಲರನ್ನು ಬೆಸೆಯುವ ದಿಸೆಯಲ್ಲಿ ಪ್ರಯತ್ನಿಸಬೇಕು ಎಂದು ತಿಳಿಸಿದರು. ಜಿಲ್ಲಾ ವಸ್ತುವಾರಿ ಸಚಿವರಾದ 'ಶೋಭಾ ಕರಂದ್ಲಾಜೆ ಸಮಾರಂಭವನ್ನು ಉದ್ಘಾಟಿಸಿದರು.

ಸಮಾವೇಶದಲ್ಲಿ ಧರ್ಮಚಿಂತಕರಾದ ಡಾ. ಮತ್ತೂರು ಕೃಷ್ಣಮೂರ್ತಿ, ಡಾ. ಏಜಾಸುದ್ದೀನ್, ಡಾ. ಥಾಮಸ್ ವಾಜಪಿಳ್ಳೆ ಮುಂತಾದವರು ಭಾಗವಹಿಸಿದ್ದರು. ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ. ಅಜಯ್‌ಕುಮಾರ್ ಸಿಂಗ್, ಪೊಲೀಸ್ ಆಯುಕ್ತ ಸುನಿಲ್ ಅಗರ್‌ವಾಲ್, ಡಿ.ಸಿ.ಪಿ. ರವಿಕಾಂತೇಗೌಡ ಹಾಗೂ ಜಿಲ್ಲಾಡಳಿತ ಈ ಸಮಾವೇಶವನ್ನು ಏರ್ಪಡಿಸಿತ್ತು.

**ಪ್ರಸ್ತುತ ದಿನಗಳಲ್ಲಿ ಅಂಕಣ ಬರಹಗಳು ತೀವ್ರ ಪರಿಣಾಮಕಾರಿ**

ದಿನಾಂಕ 6.9.2009 ರಂದು ಮೈಸೂರಿನ ರಾಮ್‌ಸಾನ್ ಫೌಂಡೇಶನ್ ಆಶ್ರಯದಲ್ಲಿ ನಾಟ್ಯಗುರು ಡಾ. ಕೆ. ರಾಮಮೂರ್ತಿರಾವ್‌ರವರ ಅಂಕಣ ಬರಹಗಳ ಸಂಗ್ರಹ ಕಲಾಚಿಂತನ ಹಾಗೂ ಮಾಸದ ಮಾತು ಪುಸ್ತಕಗಳ ಬಿಡುಗಡೆಯ ಸಮಾರಂಭದ ಸಾನ್ನಿಧ್ಯವನ್ನು ಪರಮಪೂಜ್ಯರು ವಹಿಸಿದ್ದರು. ಅಂಕಣ ಬರಹಗಳು ಕಳೆದ ಒಂದೆರಡು ದಶಕಗಳಿಂದ ಹೆಚ್ಚಿನ ಮಹತ್ವ ಪಡೆದುಕೊಂಡಿವೆ. ಹಿಂದೆ ಕಲಾ ವಿಮರ್ಶೆಗಾಗಿ ಸೀಮಿತವಾಗಿದ್ದ ಅಂಕಣಗಳು ಇಂದು ಅನೇಕ ವಿಚಾರವಾಗಿ ಸಮಗ್ರ ಮಾಹಿತಿಕೊಟ್ಟು ಓದುಗರನ್ನು ಸೆಳೆಯುತ್ತಿವೆ. ಅಂಕಣಗಳು ತಮ್ಮ ಮೌಲಿಕ ಅಂಶದಿಂದ ಹೆಚ್ಚಿನ ಮಹತ್ವ ಪಡೆದುಕೊಂಡಿವೆ ಎಂದರು.

ಕೈಗಾರಿಕೋದ್ಯಮಿ ಶ್ರೀ ಕೆ.ವಿ. ಮೂರ್ತಿ, ಪತ್ರಿಕೋದ್ಯಮಿ ಶ್ರೀ ಕೆ.ಬಿ. ಗಣಪತಿ, ಜ್ಞಾನ ಸರೋವರ ಅಂತರರಾಷ್ಟ್ರೀಯ ವಸತಿ ಶಾಲೆ ಅಧ್ಯಕ್ಷ ಶ್ರೀ ಎಸ್. ಸುಧಾಕರ ಶೆಟ್ಟಿ, ಪುಸ್ತಕ ಪ್ರಕಾಶಕ ಶ್ರೀ ಪೊಳಲಿ ರಾಧಾಕೃಷ್ಣ ಸಮಾರಂಭದಲ್ಲಿ ಹಾಜರಿದ್ದರು.

**ಸಾಹಿತ್ಯ ಸಂಗೀತಕ್ಕೆ ಒಡೆಯರ ಕೊಡುಗೆ ಅಪಾರ**

ದಿನಾಂಕ 11.9.2009 ರಂದು ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲಾ ಕಾಲೇಜಿನಲ್ಲಿ ಎರಡು ದಿನಗಳ ಕಾಲ ಏರ್ಪಡಿಸಲಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಸ್ಮರಣಾರ್ಥ ಸಂಗೀತೋತ್ಸವದ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಪೂಜ್ಯ ಜಗದ್ಗುರುಗಳವರು ಹೀಗೆ ಹೇಳಿದರು. ಮೈಸೂರು ಅರಸು ಮನೆತನದವರು ಸಾಹಿತ್ಯ ಸಂಗೀತಪ್ರೇಮಿಗಳು. ಕೆಲವರು ಸ್ವತಃ ಸಾಹಿತಿಗಳು, ವಾಗ್ಗೇಯಕಾರರು ಆಗಿದ್ದರು. ಕನ್ನಡ ಸಾಹಿತ್ಯದ ಮೊಟ್ಟಮೊದಲನೇ ನಾಟಕ ಸೃಷ್ಟಿಯಾದದ್ದು ಒಡೆಯರ ಒತ್ತಾಸೆಯಿಂದಲೇ. ಚಿಕ್ಕದೇವರಾಜರಂತಹವರು ಸ್ವತಃ ಸಾಹಿತಿಗಳಾಗಿದ್ದರು. ಹಾಗೆಯೇ ಜಯಚಾಮರಾಜ ಒಡೆಯರ್‌ರವರು ದೊಡ್ಡ ಸಂಗೀತ ವಿದ್ವಾಂಸರಾಗಿದ್ದರು ಎಂದು ತಿಳಿಸಿದರು.



ಸಮಾರಂಭದಲ್ಲಿ ಪ್ರೊ. ಎಂ.ಎಸ್. ಶಿವರಾಂ, ಶ್ರೀಮತಿ ಇಂದಿರಮ್ಮ, ಶ್ರೀ ಎಸ್. ನಾರಾಯಣಸ್ವಾಮಿ, ಶ್ರೀ ಅಜಯ್ ಮಿಶ್ರಾ, ಡಾ. ಎನ್. ರಮಣ, ಪ್ರೊ. ವೈ.ಎಸ್. ಗೌರಮ್ಮ ಉಪಸ್ಥಿತರಿದ್ದರು.

**ಅಧಿಕಾರದ ಪೀಠದ ಮೇಲೆ ಸಂಸ್ಕೃತಿಯನ್ನು ಪ್ರತಿಷ್ಠಾಪಿಸಿದವರು**

ದಿನಾಂಕ 14.9.2009 ರಂದು ಮೈಸೂರಿನ ಕೃಷ್ಣ ಮಿತ್ರಮಂಡಲಿ ಹಾಗೂ ಕೃಷ್ಣ ಟ್ರಸ್ಟ್ ವತಿಯಿಂದ ಮಾಜಿ ರಾಜ್ಯಪಾಲರಾದ ಡಾ. ರಾಮಾ ಜೋಯಿಸ್‌ರವರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದ ಸಾನ್ನಿಧ್ಯವನ್ನು ಪರಮಪೂಜ್ಯರು ವಹಿಸಿದ್ದರು. ಡಾ. ರಾಮಾ ಜೋಯಿಸ್‌ರವರಿಗೆ ಸಮಾರಂಭದಲ್ಲಿ ಉಡುಪಿಯ ಪೇಜಾವರ ಶ್ರೀ ಮಠದ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮೀಜಿಯವರು 'ಕೃಷ್ಣಾನುಗ್ರಹ ಪ್ರಶಸ್ತಿ' ಪ್ರಧಾನ ಮಾಡಿದರು.

ಪರಮಪೂಜ್ಯರು ಮಾತನಾಡುತ್ತ ಡಾ. ರಾಮಾ ಜೋಯಿಸ್‌ರವರು ಲೌಕಿಕ ಅಧಿಕಾರಗಳಿಗಿಂತ ಧಾರ್ಮಿಕ ಅಧಿಕಾರಕ್ಕೆ ಹೆಚ್ಚು ಭಾಜನರಾಗಿರುವಂತಹವರು. ಅವರು ಅನೇಕ ಉನ್ನತ ಅಧಿಕಾರ ಸ್ಥಾನಗಳಿದ್ದರೂ ಅವುಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಈ ದೇಶದ ಧರ್ಮಪರಂಪರೆಗಳ ಬಗ್ಗೆ ಹೆಚ್ಚು ಚಿಂತನೆ ಮಾಡಿದವರು. ಮತ್ತು ಅವುಗಳ ಪ್ರಸಾರ ಪ್ರಚಾರಗಳಿಗೆ ಒತ್ತುಕೊಟ್ಟವರು ಎಂದು ತಿಳಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ. ಎಂ. ರಾಮಾ ಜೋಯಿಸ್‌ರವರು ರಾಜ್ಯ ಶಕ್ತಿಯ ಮೇಲೆ ಧರ್ಮದ ಅಂಕುಶವಿರಬೇಕು. ಆಗ ಮಾತ್ರ ಯಾವುದೇ ಸಮಸ್ಯೆಯೆ ಇರುವುದಿಲ್ಲ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಶ್ರೀ ಎಸ್.ಎ. ರಾಮದಾಸ್ ವಹಿಸಿದ್ದರು. ಪೂರ್ಣಪ್ರಜ್ಞ ಸಂಶೋಧನ ಮಂದಿರದ ಡಾ. ಎ.ವಿ. ನಾಗ ಸಂಪಿಗೆ, ಕೃಷ್ಣಮಿತ್ರ ಮಂಡಳಿ ಅಧ್ಯಕ್ಷ ಶ್ರೀ ಜೆ.ಎಲ್. ಅನಂತ ತಂತ್ರಿ, ಉಪಾಧ್ಯಕ್ಷರಾದ ಶ್ರೀ ಜೆ.ಎಲ್. ಕೃಷ್ಣ ತಂತ್ರಿ, ಶ್ರೀ ಆರ್. ವಾಸುದೇವಭಟ್, ಶ್ರೀ ಪಿ. ಜಯರಾಮ್ ಭಟ್, ಶ್ರೀ ಎಂ.ಕೆ. ಪುರಾಣಿಕ್ ಮತ್ತಿತರರು ಹಾಜರಿದ್ದರು.

**ಪುಸ್ತಕವಿಲ್ಲದಿದ್ದರೆ ಇಡೀ ಪ್ರಪಂಚ ಅನಾಗರಿಕವಾಗುತ್ತಿತ್ತು**

ದಿನಾಂಕ 15.9.2009 ರಂದು ಮೈಸೂರಿನ ಪ್ರಕಾಶಕರಾದ ಶ್ರೀ ಡಿ.ಎನ್. ಲೋಕಪ್ಪನವರು ಪ್ರಾರಂಭಿಸಿರುವ ಸಂವಹನ ಸಾಹಿತ್ಯ ಸಾಂಸ್ಕೃತಿಕ ಟ್ರಸ್ಟ್‌ನ ಉದ್ಘಾಟನೆ ಹಾಗೂ ಪುಸ್ತಕ ಬಿಡುಗಡೆ ಸಮಾರಂಭದ ಸಾನ್ನಿಧ್ಯವನ್ನು ಪೂಜ್ಯರು ವಹಿಸಿದ್ದರು.

ಶ್ರೇಷ್ಠ ಸಾಹಿತ್ಯ ಕೃತಿಗಳು ಓದುಗರ ಕೈ ಸೇರಲು ಸೂಕ್ತ ಮಾರುಕಟ್ಟೆಯ ಸೌಲಭ್ಯವಿಲ್ಲದೇ ಗೋಡೌನ್ ಸೇರಿದ್ದು, ಪುಸ್ತಕ ಮಾರಾಟಕ್ಕೆ ಸರ್ಕಾರವೇ ಪ್ರಾಧಿಕಾರದ ವತಿಯಿಂದ ಆತ್ಯಾಕರ್ಷಕ

ಪುಸ್ತಕ ಮಾರಾಟ ಮಳಿಗೆಯನ್ನು ತೆರೆಯುವ ಮೂಲಕ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು. ಮಾರಾಟ ಮಳಿಗೆಯೊಂದಿಗೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಆಗಾಗ್ಗೆ ಪುಸ್ತಕ ಪ್ರದರ್ಶನ ಏರ್ಪಡಿಸಬೇಕು ಎಂದು ತಿಳಿಸಿದರು.

ಪುಸ್ತಕಗಳನ್ನು ಪ್ರಕಟಿಸುವ ಪ್ರಕಾಶಕರು ತೀವ್ರ ಸಂಕಷ್ಟದಲ್ಲಿದ್ದು, ಪುಸ್ತಕಗಳು ಓದುಗರ ಕೈ ಸೇರದೇ ಪರಿತಪಿಸುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ಶ್ರೀಗಳು ಪುಸ್ತಕವೇ ಎಲ್ಲರ ತಂದೆ-ತಾಯಿ, ಬಂಧು-ಬಳಗವಾಗಿದ್ದು, ಪುಸ್ತಕವಿಲ್ಲದಿದ್ದರೆ ಇಡೀ ಪ್ರಪಂಚ ಅನಾಗರಿಕವಾಗಿರುತ್ತಿತ್ತು ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿ ಶ್ರೀ ಬಿ.ಆರ್. ಜಯರಾಮೇ ಅರಸ್‌ರವರು ಆಗಮಿಸಿದ್ದರು. ಸಮಾರಂಭದಲ್ಲಿ ಡಾ. ಬಿ.ವಿ. ವಸಂತಕುಮಾರ್‌ರವರ 'ಕಾಯಕ ಮೀಮಾಂಸೆ' ಮತ್ತು ಡಾ. ಎಂ.ಎಸ್. ವೇದಾರವರ 'ಮುಳ್ಳ ಮನೆಯ ಮೇಲೆ' ಕೃತಿಯನ್ನು ಬಿಡುಗಡೆ ಮಾಡಲಾಯಿತು. ನಾಡೋಜ ಡಾ. ದೇ.ಜ.ಗೌ. ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಲೋಕಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಹಿರಿಯ ಜಗದ್ಗುರುಗಳ ಕನಸುಗಳನ್ನು ನನಸು ಮಾಡುವುದಷ್ಟೇ ನಮ್ಮ ನಮ್ರ ಪ್ರಯತ್ನ

ದಿನಾಂಕ 16.9.2009 ರಂದು ಮೈಸೂರಿನ ಜೆ.ಪಿ.ನಗರದ ಪಬ್ಲಿಕ್ ಶಾಲಾ ಆವರಣದಲ್ಲಿ ನಡೆದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಪೂಜ್ಯರು ಹಿರಿಯ ಜಗದ್ಗುರುಗಳವರ ಕನಸುಗಳನ್ನು ನನಸು ಮಾಡುವುದಷ್ಟೇ ನಮ್ಮ ನಮ್ರ ಪ್ರಯತ್ನವೆಂದು ತಿಳಿಸಿದರು.

ಇಂದು ಶ್ರೀಮಠ ಬೇರೆ ಬೇರೆ ಕ್ಷೇತ್ರಗಳಲ್ಲಿ ಏನಾದರೂ ಸೇವೆ ಮಾಡಿದ್ದರೆ ಅದು ನಮ್ಮ ಹಿರಿಯ ಜಗದ್ಗುರುಗಳವರ ಮಾರ್ಗದರ್ಶನ ಮತ್ತು ಪ್ರೇರಣೆಯಿಂದ ಮಾತ್ರ ಎಂದು ತಿಳಿಸಿದರು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ನಿವೃತ್ತ ಅಧ್ಯಕ್ಷ ಹಾಗೂ ವಿಶ್ರಾಂತ ಕುಲಪತಿಗಳಾದ ಡಾ. ಎಸ್. ರಾಮೇಗೌಡ ಅವರು ನುಡಿನಮನ ಸಲ್ಲಿಸಿ ಮಾತನಾಡುತ್ತಾ ಡಾ. ರಾಜೇಂದ್ರ ಮಹಾಸ್ವಾಮಿಗಳವರು ಬಡಜನರಿಗೆ ಅದರಲ್ಲೂ ಗ್ರಾಮೀಣ ಭಾಗದವರಿಗೆ ಅಕ್ಷರ ದಾಸೋಹವನ್ನು ನೀಡಿದ ಮಹಾಚೇತನ ಎಂದು ಗುಣಗಾನ ಮಾಡಿದರು.

ಜಗದ್ಗುರುಗಳವರ ಭಾವಚಿತ್ರವನ್ನುಳ್ಳ ಹೂವಿನ ಪಲ್ಲಕ್ಕಿಗೆ ಮಹಾಪೌರ ಪುರುಷೋತ್ತಮ್ ಅವರು ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಸಮಾರಂಭದಲ್ಲಿ ಶಾಸಕ ಶ್ರೀ ಎ. ರಾಮದಾಸ್, ನಗರಪಾಲಿಕೆ ಸದಸ್ಯರಾದ ಶ್ರೀ ಬಿ.ಎಚ್. ಆಶಾ ಲಕ್ಷ್ಮಿ, ಶ್ರೀಬಿ.ಎಲ್. ಭೈರಪ್ಪ ಮತ್ತಿತರರು ಉಪಸ್ಥಿತರಿದ್ದರು.



## ಭೋಜನಶಾಲೆ ಉದ್ಘಾಟನೆ

ದಿನಾಂಕ 21.9.2009 ರಂದು ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಭೋಜನಶಾಲೆಯನ್ನು ಉದ್ಘಾಟಿಸಲಾಯಿತು. ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯರು ಮಾತನಾಡಿ, ಹೆಣ್ಣುಮಕ್ಕಳಿಗೆ ಒಂದು ಕಾಲದಲ್ಲಿ ಪ್ರತಿಭೆಯಿದ್ದರೂ ಅವಕಾಶಗಳಿರಲಿಲ್ಲ. ಈಗ ಅನೇಕ ರೀತಿಯಲ್ಲಿ ಅವರ ಪ್ರಗತಿಗೆ ಸರ್ಕಾರಗಳು ಶ್ರಮಿಸುತ್ತಿವೆ ಮತ್ತು ಸಾಮಾಜಿಕವಾಗಿಯೂ ಅವಕಾಶಗಳು ಸಿಕ್ಕುತ್ತಿವೆ. ಇವುಗಳನ್ನು ಬಳಸಿಕೊಂಡು ಮಹಿಳೆ ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಶ್ರೇಷ್ಠತೆಯನ್ನು ಮೆರೆಯಬೇಕು ಎಂದು ತಿಳಿಸಿದರು.

ಭೋಜನಶಾಲೆಯ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವೆ ಶೋಭಾ ಕರಂದ್ಲಾಜೆಯವರು ನೆರವೇರಿಸಿದರು. ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರವನ್ನು ಶಾಸಕರಾದ ಶ್ರೀ ಶಂಕರಲಿಂಗೇಗೌಡರವರು ಅನಾವರಣ ಮಾಡಿದರು.

ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ತೋಂಟದಾರ್ಯ, ಶ್ರೀ ಸಿದ್ದರಾಜು, ಉಪಮೇಯರ್ ಶ್ರೀಮತಿ ಶಾರದಮ್ಮ, ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಶ್ರೀಮತಿ ನಂದಿನಿ ಚಂದ್ರಶೇಖರ್ ಉಪಸ್ಥಿತರಿದ್ದರು.

## ಒಡೆದರೇ ಹೊರತು ಒಗ್ಗೂಡಿಸಿಲ್ಲ

ಆಡಳಿತ ನಡೆಸುವವರು ರೈತಪರ ಸಂಘಟನೆಗಳನ್ನು ಒಡೆಯುವ ಬಗ್ಗೆ ಚಿಂತನೆ ನಡೆಸಿದರೇ ಹೊರತು ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲಿಲ್ಲ ಎಂದು ಪರಮಪೂಜ್ಯ ಜಗದ್ಗುರುಗಳವರು ತಿಳಿಸಿದರು.

ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ದಿನಾಂಕ 27.9.2010 ರಂದು ಚಿತ್ರದುರ್ಗದ ಮುರುಘಾ ಮಠದ ಬಸವೇಶ್ವರ ಸಭಾಂಗಣದಲ್ಲಿ ನಡೆದ ಕೃಷಿ ಮೇಳದ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದ ಪೂಜ್ಯರು ಆಹಾರ ಕ್ರಾಂತಿಯಿಂದ ಉತ್ಪಾದನೆ ಹೆಚ್ಚಾಯಿತು. ಆದರೆ ಭೂತಾಯಿ ಕಲುಷಿತಗೊಂಡಳು. ಭೂಮಿಯಲ್ಲಿನ ಪೌಷ್ಠಿಕಾಂಶಗಳು ಕಡಿಮೆಯಾಗಿವೆ. ಕೇವಲ ಇಳುವರಿ ಹೆಚ್ಚಿಸುವ ಒಂದೇ ದೃಷ್ಟಿಯಿಂದ ರಾಸಾಯನಿಕಗಳನ್ನು ಬಳಸಲಾಯಿತು. ಫಲವತ್ತತೆ ಬಗ್ಗೆ ನಿರ್ಲಕ್ಷ್ಯ ವಹಿಸಲಾಯಿತು ಎಂದರು.

ಬಿತ್ತನೆ ಬೀಜಕ್ಕೂ ಈಗ ಪರಾವಲಂಬಿಯಾಗಿದ್ದೇವೆ. ರಸಗೊಬ್ಬರಕ್ಕಾಗಿ ಗೋಲಿಬಾರ್ ನಡೆದಿದೆ. ಆಧುನಿಕ ಕೃಷಿ ಪದ್ಧತಿಯ ಜತೆಗೆ ಭೂಮಿಯ ಫಲವತ್ತತೆಯನ್ನು ಸಂರಕ್ಷಿಸಲು ಕಾರ್ಯ ನಡೆಯಬೇಕು. ಮಧ್ಯವರ್ತಿಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ರೈತರನ್ನು ಕಾಪಾಡುವ ಕಾರ್ಯ ನಡೆಯಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಶ್ರೀ ಮುರುಘಾ ಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರು, ಆನಂದಪುರ ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಮುರುಘಾ ರಾಜೇಂದ್ರ ಸ್ವಾಮೀಜಿಗಳು, ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ರಾಜಶೇಖರ ಜಿ. ಸಿಂಧೂರ, ತೋಟಗಾರಿಕೆ ಫೆಡರೇಷನ್ ಅಧ್ಯಕ್ಷ ಶ್ರೀ ಕೆ.ಟಿ. ಗಂಗಾಧರ್, ಮೇಟಿಕುರ್ಕಿ ಜೇನು ಬೆಳೆಗಾರ ಶ್ರೀ ಶಾಂತವೀರಯ್ಯ, ನೈಸರ್ಗಿಕ ಕೃಷಿಕ ಬನ್ನೂರು ಶ್ರೀ ಕೃಷ್ಣಪ್ಪ ಉಪಸ್ಥಿತರಿದ್ದರು.

## ಏಕಾಗ್ರತೆ, ಆಧ್ಯಾತ್ಮದ ಮೂಲಕ ನೆಮ್ಮದಿಯನ್ನು ಅರಸಬೇಕು

ದಿನಾಂಕ 14.10.2009 ರಂದು ಮೈಸೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದವರು ಆಯೋಜಿಸಿದ್ದ ವಿಶ್ವ ಮಹೋತ್ಸವ ಸಮಾರಂಭದ ಉದ್ಘಾಟನೆಯನ್ನು ಪರಮಪೂಜ್ಯರು ನೆರವೇರಿಸಿ ವಿಶ್ವದಲ್ಲಿ ಮನುಷ್ಯ ಹೆಣ್ಣು, ಹೊನ್ನು, ಮಣ್ಣಿನ ಮಾಯೆಯ ಆಸೆಯನ್ನು ತೊರೆದಾಗ ಮಾತ್ರ ಬದುಕಿನಲ್ಲಿ ಶಾಂತಿ ಕಂಡುಕೊಳ್ಳಬಹುದು. ಇಡೀ ಜಗತ್ತು ವಿಕೋಪದೆಡೆಗೆ ಸಾಗುತ್ತಿರುವ ಸಂದರ್ಭದಲ್ಲಿ ಮನುಷ್ಯ ಏಕಾಗ್ರತೆ, ಆಧ್ಯಾತ್ಮದ ಮೂಲಕ ನೆಮ್ಮದಿಯನ್ನು ಕಂಡುಕೊಳ್ಳಬಹುದಾಗಿದೆ ಎಂದರು.

ಸಮಾರಂಭದಲ್ಲಿ ಸಂಸದ ಶ್ರೀ ಹೆಚ್. ವಿಶ್ವನಾಥ್. ಶ್ರೀ ಬಿ.ಕೆ. ಮೋಹಿನಿ ಜೀ, ಬಿ.ಕೆ. ಲಕ್ಷ್ಮೀ ಜೀ, ಬಿ.ಕೆ. ಕರುಣಾಜೀ, ಬಿ.ಕೆ. ಬ್ರಿಜ್ ಮೋಹನಜೀ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥಾನಂದ ಸ್ವಾಮೀಜಿ, ಬಿ.ಕೆ. ಅಂಬಿಕಾ ಬೆಹನ್‌ಜೀ, ಎಂ.ಎಲ್.ಸಿ ಕೆ.ಟಿ. ಶ್ರೀಕಂಠೇಗೌಡ, ಮಾಜಿ ಶಾಸಕಿ ಪರಿಮಳಾ ನಾಗಪ್ಪ ಹಾಜರಿದ್ದರು.

## ಬದುಕು ಪ್ರಯೋಗಶಾಲೆಯಾಗಲಿ

ದಿನಾಂಕ 3.10.2009 ರಂದು ಕದಳಿ ಮಹಿಳಾ ವೇದಿಕೆಯು ಜೆಎಸ್‌ಎಸ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿದ ಪರಮಪೂಜ್ಯ ಶ್ರೀಗಳವರು ಬದುಕನ್ನು ಪ್ರಯೋಗಶಾಲೆಯನ್ನಾಗಿ ರೂಪಿಸಿಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದರು.

ವಚನಗಳನ್ನು ಓದುವವರು, ಬರೆಯುವವರಿದ್ದಾರೆ. ಆದರೆ ಅದರಂತೆ ಬದುಕುವವರು ಕಡಿಮೆ. ಶರಣರ ವಚನಗಳು ಇಂದಿಗೂ ಪ್ರಸ್ತುತ ಎಂದು ನುಡಿದರು.

ಅಂಕಣಕಾರ ಶ್ರೀ ಎಸ್. ಷಡಕ್ಷರಿ ಮಾತನಾಡಿ, ಕದಳಿ ವೇದಿಕೆಯು ಸಮಾಜಮುಖಿ ಕೆಲಸ ಮಾಡುತ್ತಿದೆ. ಇಂತಹ ಕಾರ್ಯಗಳನ್ನು ಎಲ್ಲ ಸಂಸ್ಥೆಗಳು ಮಾಡಿದರೆ ಸಮಾಜಕ್ಕೆ ಹೊಸ ಆಯಾಮ ದೊರೆಯುತ್ತದೆ ಎಂದರು.

ಸಮಾರಂಭದಲ್ಲಿ ಮಾಜಿ ಸಚಿವೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಶ್ರೀಮತಿ ಪ್ರಮೀಳಾ ಶಂಕರ್, ಶ್ರೀಮತಿ ಪ್ರೇಮಾ ಸೋಮಸುಂದರ್ ಮತ್ತಿತರರು ಉಪಸ್ಥಿತರಿದ್ದರು.



## ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ಜಗದ್ಗುರುಗಳ ಭೇಟಿ

ದಿನಾಂಕ 22.10.2009 ರಂದು ಬೆಂಗಳೂರಿನಲ್ಲಿ ಇರುವ ಡಾ. ಶರಣ್ ಪಾಟೀಲ್‌ರವರ ಸ್ಪರ್ಶ ಆಸ್ಪತ್ರೆಗೆ ಪರಮಪೂಜ್ಯರು ಭೇಟಿ ನೀಡಿದ್ದರು.

ಆಸ್ಪತ್ರೆಯಲ್ಲಿ ಸ್ಪರ್ಶ ವಚನ ಯೋಜನೆಯಡಿ ಶಸ್ತ್ರಚಿಕಿತ್ಸೆಗೆ ಒಳಗಾದ ಮಕ್ಕಳ ಆರೋಗ್ಯವನ್ನು ವಿಚಾರಿಸಿ ಆಶೀರ್ವದಿಸಿದರು.

## ಕೃಷಿ ಭೂಮಿ ಫಲವತ್ತತೆ ಅಭಿವೃದ್ಧಿಗೆ ಆದ್ಯತೆ ನೀಡಿ

ದಿನಾಂಕ 30.10.2009 ರಂದು ಸಕಲೇಶಪುರದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ಪ್ಲಾಂಟೇಷನ್ ರಿಸರ್ಚ್ ಫೌಂಡೇಷನ್ (ಮಣ್ಣು ಪರೀಕ್ಷಾ ಘಟಕ) ಉದ್ಘಾಟನೆ ನೆರವೇರಿಸಿ ಮಾತನಾಡಿದ ಪರಮಪೂಜ್ಯರು ಕೃಷಿ ಭೂಮಿ ಫಲವತ್ತತೆ ಅಭಿವೃದ್ಧಿ ವಿಧಾನಗಳತ್ತ ತಜ್ಞರು ಹೆಚ್ಚಿನ ಗಮನ ನೀಡಬೇಕೆಂದು ತಿಳಿಸಿದರು. ಕೆಲ ದಶಕಗಳಿಂದ ಉತ್ಪಾದನೆ ಕಡೆಗೆ ಮಾತ್ರ ಗಮನ ಹರಿಸಿದ್ದು ಕೃಷಿ ಭೂಮಿ ಫಲವತ್ತತೆ ಕ್ಷೀಣಿಸಿದೆ ಎಂದು ವಿಷಾದಿಸಿದರು.

ಹವಾಮಾನ ಹಾಗೂ ಬೆಳೆಗೆ ತಕ್ಕಂತೆ ಮಣ್ಣು ನಿರ್ವಹಣೆಯಿಂದ ಕೃಷಿ ಉತ್ಪನ್ನಗಳ ಇಳುವರಿ ಹೆಚ್ಚಿಸಿಕೊಳ್ಳುವುದು ರೈತರಿಗೆ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಮಣ್ಣು ಪರೀಕ್ಷಾ ಘಟಕ ಸ್ಥಾಪಿಸಿರುವುದು ಶ್ಲಾಘನೀಯ ಎಂದರು.

ಇಂದಿನ ದಿನಗಳಲ್ಲಿ ರೈತರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸಂಘಟಿತ ಹೋರಾಟದ ಕೊರತೆಯಿಂದಾಗಿ ಕೃಷಿಕರ ಎಲ್ಲ ಬೇಡಿಕೆಗಳು ಈಡೇರಿಲ್ಲ. ಕೃಷಿ ಉತ್ಪನ್ನಗಳಿಗೆ ಅನುಗುಣವಾಗಿ ವರ್ಗೀಕರಣಗೊಳ್ಳುವುದರ ಬದಲು, ಎಲ್ಲರೂ ಸಾಮೂಹಿಕವಾಗಿ ಹೋರಾಟ ನಡೆಸಿದರೆ ಮಾತ್ರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ರೈತರ ಸಮಸ್ಯೆಗಳನ್ನು ಬಗೆಹರಿಸಲು ಸರಕಾರ ಪ್ರಾಮಾಣಿಕ ಪ್ರಯತ್ನ ನಡೆಸಬೇಕು. ಆಯೋಗ, ಸಮಿತಿಗಳ ಸಲಹೆ, ಸೂಚನೆ ಮತ್ತು ಪರಿಹಾರೋಪಾಯಗಳನ್ನು ಸರಕಾರ ಜಾರಿಗೊಳಿಸಿ ಸಮಸ್ಯೆಗಳನ್ನು ನಿವಾರಿಸಬೇಕು ಎಂದು ಹೇಳಿದರು.

ಸಮಾರಂಭದಲ್ಲಿ ಪೂಜ್ಯ ಶ್ರೀಗಳು ಕಾಫಿ ಕರಿಷ್ಮ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಸಮಾರಂಭದಲ್ಲಿ ಶಾಸಕ ಶ್ರೀ ರುದ್ರೇಶಗೌಡ, ಕರ್ನಾಟಕ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಡಾ. ಪ್ರದೀಪ್, ಹೆಚ್.ಡಿ.ಪಿ.ಎ. ಅಧ್ಯಕ್ಷ ಶ್ರೀ ಉದಯ್, ಶಾಸಕರಾದ ಶ್ರೀ ಹೆಚ್.ಕೆ. ಕುಮಾರಸ್ವಾಮಿ, ಶ್ರೀ ಎ.ಎಂ. ಮಂಜು ಮುಂತಾದವರು ಭಾಗವಹಿಸಿದ್ದರು.

## ಹೊಸದನ್ನು ಹುಡುಕುವ ಧಾವಂತದಲ್ಲಿ ಪರಂಪರೆಯನ್ನು ಕಳೆದುಕೊಳ್ಳಬಾರದು

ದಿನಾಂಕ 30.10.2009 ರಂದು ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ನಾರ್ವೆ ಗ್ರಾಮದಲ್ಲಿ ನಿರ್ಮಿಸಿರುವ ಮಲ್ಲೇಶ್ವರಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಸಮಾರಂಭದ ಸಾನ್ನಿಧ್ಯ

ವನ್ನು ವಹಿಸಿ ಪೂಜ್ಯರು ಮಾತನಾಡುತ್ತಿದ್ದರು.

ಹಳೆಯದನ್ನು ಮರೆತಾಗ ಜೀವನ ಅರ್ಥ ಕಳೆದುಕೊಳ್ಳುತ್ತದೆ. ಆಧುನಿಕತೆಯ ಭರಾಟೆಯಲ್ಲಿ ಮನುಷ್ಯ ಹೊಸದನ್ನು ಹುಡುಕುತ್ತಾ ನಮ್ಮ ಹಳೆಯ ಸಂಸ್ಕೃತಿ ಪರಂಪರೆಯನ್ನು ಮರೆಯುತ್ತಿರುವುದು ಮನಸ್ಸಿಗೆ ನೋವುಂಟುಮಾಡುತ್ತದೆ. ಭಾರತದ ಜನರಲ್ಲಿರುವ ಮಾನಸಿಕ ಸ್ಥೈರ್ಯ ಪ್ರಪಂಚದ ಯಾವುದೇ ದೇಶದ ಜನರಲ್ಲಿ ಇಲ್ಲ ಎಂದ ಅವರು ನೆರೆ ಸಂತ್ರಸ್ತ ಪ್ರದೇಶಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಎಲ್ಲವನ್ನೂ ಕಳೆದುಕೊಂಡಿದ್ದರೂ ಪುನಃ ಪಡೆಯುವೆ ಎಂಬ ಆತ್ಮಸ್ಥೈರ್ಯ ಬರಲು ಭಾರತ ದೇಶದ ಸಂಸ್ಕೃತಿಯೇ ಕಾರಣ ಎಂದರು.

ಸಮಾರಂಭದಲ್ಲಿ ಶ್ರೀ ಸಿದ್ಧಗಂಗಾ ಕ್ಷೇತ್ರದ ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿಗಳು ಆಶೀರ್ವಚನ ನೀಡಿದರು. ಶಾಸಕ ಶ್ರೀ ವೈ.ಎನ್. ರುದ್ರೇಶಗೌಡ ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಶ್ರೀ ಅಣ್ಣಪ್ಪ, ಕಾಫಿ ಬೆಳೆಗಾರರ ಒಕ್ಕೂಟದ ಶ್ರೀ ಬಿ.ಎ. ಜಗನ್ನಾಥ್, ಶ್ರೀ ಶಿವಪ್ರಸಾದ್ ಮುಂತಾದವರು ಹಾಜರಿದ್ದರು.

**ನೆರೆಸಂತ್ರಸ್ತರ ನೆರವಿಗೆ - ಪರಮಪೂಜ್ಯರ ನೇತೃತ್ವದ**
**ಮೈಸೂರು ನಾಗರಿಕ ವೇದಿಕೆಯ ಕಾರ್ಯಕ್ಕೆ ಅಭೂತಪೂರ್ವ ಸಹಕಾರ**

ಉತ್ತರ ಕರ್ನಾಟಕದಲ್ಲಿ ಆದಂತಹ ಅತಿವೃಷ್ಟಿಯ ದುಷ್ಪರಿಣಾಮಕ್ಕೆ ಸಿಕ್ಕಿದಂತಹ ಆ ಭಾಗದ ಜನರ ಸಹಾಯಕ್ಕೆ ಮೈಸೂರು ನಾಗರಿಕ ವೇದಿಕೆ ಅಭೂತಪೂರ್ವವಾಗಿ ಕ್ರಿಯಾಶೀಲವಾಯಿತು. ತಮಿಳುನಾಡಿನ ಸುನಾಮಿ ಸಂದರ್ಭದಲ್ಲಿ ಅವರ ನೆರವಿಗೆ ಧಾವಿಸಲು ಪರಮಪೂಜ್ಯ ಜಗದ್ಗುರುಗಳವರ ನೇತೃತ್ವದಲ್ಲಿ ಪ್ರಾರಂಭಗೊಂಡ ಮೈಸೂರು ನಾಗರಿಕ ವೇದಿಕೆ (Mysore citizen Forum) ಉತ್ತರ ಕರ್ನಾಟಕದ ನೆರೆ ಹಾವಳಿಗೆ ತುತ್ತಾದ ಜನತೆಯ ಸಹಾಯಕ್ಕೂ ಮುಂದಾಯಿತು. ಮೈಸೂರಿನಲ್ಲಿ ಪಾದಯಾತ್ರೆ ಮಾಡಿ ಹಣ ಸಂಗ್ರಹ ಮಾಡಿತು. ಅನೇಕ ದಾನಿಗಳು ವೈಯಕ್ತಿಕವಾಗಿ ಮತ್ತು ಅನೇಕ ಸಂಘ ಸಂಸ್ಥೆಗಳು ತಮ್ಮ ಉದಾರ ದೇಣಿಗೆಯನ್ನು ನೀಡಿದವು. ಮೈಸೂರು ನಗರವಷ್ಟೇ ಅಲ್ಲದೆ ಚಾಮರಾಜನಗರ, ನಂಜನಗೂಡುಗಳಲ್ಲಿಯೂ ಪಾದಯಾತ್ರೆಯ ಮೂಲಕ ಹಣ ಸಂಗ್ರಹಿಸಲಾಯಿತು. ಇದರ ಜೊತೆಗೆ ನೂರಕ್ಕೂ ಹೆಚ್ಚು ಜನ ಕಾರ್ಯಕರ್ತರು, ಸಮಾಜಸೇವಕರು, ರಾಜಕೀಯ ಮುತ್ಸದ್ದಿಗಳು, ಪರಮಪೂಜ್ಯರ ನೇತೃತ್ವದಲ್ಲಿ ಆ ಭಾಗಕ್ಕೆ ಹೋಗಿ ಸ್ಥಳ ಪರಿಶೀಲನೆಯನ್ನು ನಡೆಸಿ, ತುರ್ತು ಅಗತ್ಯಗಳನ್ನು ಪೂರೈಸಿದ್ದಲ್ಲದೆ, ಅವರಿಗೆ ಮನೆಗಳನ್ನು ನಿರ್ಮಿಸಲು ರೂಪುರೇಷೆಗಳನ್ನು ಸಿದ್ಧಪಡಿಸಿ, ಅದಕ್ಕೆ ಚಾಲನೆಯನ್ನು ನೀಡಲಾಯಿತು.

ದಿನಾಂಕ 16.10.2009 ರಂದು ಬಿಜಾಪುರದ ಜ್ಞಾನಯೋಗಾಶ್ರಮದಲ್ಲಿ ನೆರೆದ ಪ್ರತಿನಿಧಿಗಳನ್ನು ಉದ್ದೇಶಿಸಿ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ಕೃತಜ್ಞತಾ ನುಡಿಗಳನ್ನು ನುಡಿದರು. ಪ್ರವಾಹದಿಂದ ಕಷ್ಟ ಅನುಭವಿಸುತ್ತಿರುವ ಜನರಿಗೆ ಕೈಚಾಚಿ ನೆರವು ನೀಡಲು



ಮುಂದಾಗಿರುವ ಮೈಸೂರಿನ ಜನತೆಯ ಸಹೃದಯತೆ ಅನುಕರಣೀಯ ಎಂದರು.

ಈ ಜಲಪ್ರಳಯದಿಂದ ಕರ್ನಾಟಕವನ್ನು ಉತ್ತರ ದಕ್ಷಿಣವೆಂದು ವಿಭಜನೆ ಮಾಡುತ್ತಿದ್ದವರಿಗೆ ಉತ್ತರವಾಗಿ, ನೊಂದಿರುವ ಈ ಭಾಗದ ಸಂತ್ರಸ್ತರಿಗೆ ಸಹಾಯಹಸ್ತ ಚಾಚಲು ದಕ್ಷಿಣದಿಂದ ಬಂದಿರುವ ದಯಾಳುಗಳು ಸುತ್ತೂರು ಶ್ರೀಗಳವರ ನೇತೃತ್ವದಲ್ಲಿ ಧಾವಿಸಿರುವುದು ಕರ್ನಾಟಕ ಒಂದೆ, ನಾವು ನಿಮ್ಮ ಇಂದಿನ ಸಂಕಷ್ಟದ ದಿನಗಳಲ್ಲಿ ಸಹಾಯಹಸ್ತ ಚಾಚಲು ಬಂದಿದ್ದೇವೆಂದು ಸ್ಪಂದಿಸಿದ್ದಕ್ಕೆ ನಾವೆಲ್ಲರು ಕೃತಜ್ಞರು. ಸುತ್ತೂರು ಶ್ರೀಗಳ ಭೇಟಿ ಈ ಭಾಗದ ಜನರಿಗೆ ಒಂದು ವಿದ್ಯುತ್ ಸಂಚಲನವನ್ನುಂಟುಮಾಡಿದೆ – ಹೀಗೆ ಹೇಳುವಾಗ ಪೂಜ್ಯರು ತುಂಬಾ ಭಾವುಕರಾದರಂತೆ. ಉತ್ತರ ಕರ್ನಾಟಕದ ಜನರ ಹೃದಯದ ಧ್ವನಿಗಳೇ ಪೂಜ್ಯರ ಮಾತಿನಲ್ಲಿ ಒಡಮೂಡಿದಂತಿತ್ತು.

**ಎಂಸಿಎಫ್‌ನಿಂದ ಕೋಟ್ಯಾಳದಲ್ಲಿ 504 ಮನೆಗಳಿಗೆ ಶಿಲಾನ್ಯಾಸ**

ಮೈಸೂರು ನಾಗರಿಕರ ವೇದಿಕೆ ಆಶ್ರಯದಲ್ಲಿ ಉತ್ತರ ಕರ್ನಾಟಕದ ನೆರೆ ಸಂತ್ರಸ್ತರಿಗೆ ಮನೆ ನಿರ್ಮಿಸಿಕೊಡುವ ಎರಡನೇ ಹಂತದ ಯೋಜನೆಗೆ ಬಿಜಾಪುರ ಜಿಲ್ಲೆ ಕೋಟ್ಯಾಳದಲ್ಲಿ 3.11.2009 ರಂದು ಚಾಲನೆ ನೀಡಲಾಯಿತು.

ಪರಮಪೂಜ್ಯ ಜಗದ್ಗುರುಗಳು, ಬಿಜಾಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮೊದಲಾದ ಗಣ್ಯರು ಹಾಜರಿದ್ದು, ವೇದಿಕೆ ನಿರ್ಮಿಸಿಕೊಡಲಿರುವ 504 ಮನೆಗಳಿಗೆ ಸಾಂಕೇತಿಕವಾಗಿ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, ನಾವು ಅಧಿಕಾರಕ್ಕೆ ಅಂಟಿಕೊಳ್ಳದೆ ಪರಿಹಾರ ಕಾರ್ಯದಲ್ಲಿ ನಿರತರಾಗಿದ್ದೇವೆ. ಅಧಿಕಾರವೇ ಶಾಶ್ವತ ಅಲ್ಲ. ಆದರೆ ಅಧಿಕಾರ ದೊರೆತಾಗ ಏನು ಮಾಡಿದೆವು ಎಂಬುದು ಶಾಶ್ವತವಾಗಿ ಉಳಿದುಕೊಳ್ಳುತ್ತದೆ ಎಂದು ಹೇಳಿದರು.

ಮಠಮಾನ್ಯಗಳಿಗೆ ಸರ್ಕಾರ ಹಣ ಕೊಟ್ಟಾಗ ಹಲವರು ಆಕ್ಷೇಪ ವ್ಯಕ್ತಪಡಿಸಿದರು. ಆದರೆ ಅದಕ್ಕೆ ನೂರು ಪಟ್ಟು ಹೆಚ್ಚು ಹಣ ತಂದು ಅದೇ ಮಠಮಾನ್ಯಗಳು ನೆರೆ ಸಂತ್ರಸ್ತರಿಗೆ ಮನೆಗಳನ್ನು ನಿರ್ಮಿಸಿಕೊಡುತ್ತಿದ್ದಾರೆ. ಯಾವುದೇ ಹಣ ಸದ್ವಿನಿಯೋಗವಾಗುವುದು, ಸಮಾಜದಿಂದ ಬಂದು ಸಮಾಜಕ್ಕೇ ಸೇರುವುದು ಈ ತರದಲ್ಲಿ ಎಂದು ಮೈಸೂರು ನಾಗರಿಕರ ವೇದಿಕೆಯ ಕಾರ್ಯವನ್ನು ಅವರು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಸಚಿವ ಶ್ರೀ ಗೋವಿಂದ ಕಾರಜೋಳ, ಶಾಸಕರುಗಳಾದ ಶ್ರೀ ಎ.ಬಿ. ಪಾಟೀಲ್, ಶ್ರೀ ಸಿದ್ದು ನ್ಯಾಮಗೌಡ, ಶ್ರೀ ಸಿ.ಎಸ್. ನಾಡಗೌಡ, ಶ್ರೀ ಅಪ್ಪು ಪಟ್ಟಣ ಶೆಟ್ಟಿ, ಮಾಜಿ ಶಾಸಕರುಗಳು, ಮುಖ್ಯಮಂತ್ರಿಗಳ ಕಾರ್ಯದರ್ಶಿ ಶ್ರೀ ಲಕ್ಷ್ಮಿನಾರಾಯಣ, ಕಂದಾಯ ಇಲಾಖೆ ಕಾರ್ಯದರ್ಶಿ ಶ್ರೀ ನಾರಾಯಣಸ್ವಾಮಿ,

ಶ್ರೀ ಜಾವೇದ್ ಅಖ್ತರ್ ಮೊದಲಾದವರು ಉಪಸ್ಥಿತರಿದ್ದರು.

**ಮೊದಲ ಹಂತದಲ್ಲಿ 311 ಮನೆ ನಿರ್ಮಾಣ**

ಮೈಸೂರು ನಾಗರಿಕರ ವೇದಿಕೆ ವತಿಯಿಂದ ಉತ್ತರ ಕರ್ನಾಟಕದ ನೆರೆ ಹಾವಳಿ ಸಂತ್ರಸ್ತರಿಗೆ ಮೊದಲ ಹಂತದಲ್ಲಿ 311 ಮನೆಯನ್ನು ನಿರ್ಮಾಣ ಮಾಡಿಕೊಡಲು ನಿರ್ಧರಿಸಲಾಗಿದೆ.

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಬೆಸಿನಾಳಕೊಪ್ಪದಲ್ಲಿ 155 ಮನೆಗಳು ಹಾಗೂ ಇಂಗಳಗಿ ಗ್ರಾಮದಲ್ಲಿ 156 ಮನೆಗಳನ್ನು ನಿರ್ಮಿಸಲಾಗುತ್ತದೆ. ಈ ಕಾರ್ಯಕ್ರಮಕ್ಕೆ ನವೆಂಬರ್ 3 ರಂದು ಪರಮಪೂಜ್ಯ ಜಗದ್ಗುರುಗಳವರು, ಶ್ರೀ ಸಿದ್ಧೇಶ್ವರ ಸ್ವಾಮೀಜಿ ಹಾಗೂ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಭೂಮಿ ಪೂಜೆ ನೆರವೇರಿಸಿದರು.

ನೆರೆ ಸಂತ್ರಸ್ತ ಸ್ಥಳದಲ್ಲಿ ಶೈಕ್ಷಣಿಕ ಸೌಲಭ್ಯದ ಆವಶ್ಯಕತೆ ಇದೆ. ಇದಕ್ಕಾಗಿ ಸುತ್ತೂರು ಮಠದಿಂದ ಕೂಡಲ ಸಂಗಮದಲ್ಲಿ ಪೂರ್ವ ಪ್ರಾಥಮಿಕ ಶಾಲೆಯಿಂದ ಕಿರಿಯ ಕಾಲೇಜಿನವರೆಗೂ ವಸತಿ ಶಾಲೆಯನ್ನು ಪ್ರಾರಂಭಿಸುವ ಉದ್ದೇಶವಿದೆ. ವೃತ್ತಿ ಶಿಕ್ಷಣ ಕೌಶಲ್ಯ ತರಬೇತಿ ಕೇಂದ್ರವನ್ನು ಆರಂಭಿಸಲಾಗುತ್ತದೆ. ಸರ್ಕಾರ ಸಹಕಾರ ನೀಡಿ ನಿರ್ದೇಶನ ನೀಡಿದರೆ ಕೆಲಸ ಆರಂಭವಾಗುತ್ತದೆ ಎನ್ನುವ ಭರವಸೆಯನ್ನು ಪರಮಪೂಜ್ಯ ಜಗದ್ಗುರುಗಳವರು ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ ನೀಡಿದರು.

ಪರಮಪೂಜ್ಯರ ದಿವ್ಯ ನೇತೃತ್ವದಲ್ಲಿ ಮೈಸೂರು ನಾಗರಿಕ ವೇದಿಕೆಯ ಸದಸ್ಯರು ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಭೇಟಿ ನೀಡಿ ಅಲ್ಲಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸ್ಥಳ ಪರಿಶೀಲನೆ ನಡೆಸಿದರು.

**ಮೈಸೂರಿನಲ್ಲಿ ನೆರವಿನ ಮಹಾಪೂರ**

8.10.2009 ರಂದು ಪರಮಪೂಜ್ಯರ ನೇತೃತ್ವದಲ್ಲಿ ಮೈಸೂರು ನಗರದಲ್ಲಿ ದೇಣಿಗೆಗಾಗಿ ಪಾದಯಾತ್ರೆಯನ್ನು ಏರ್ಪಡಿಸಲಾಗಿತ್ತು.

ಮೈಸೂರು ನಗರದ ಕೃಷ್ಣರಾಜ ವೃತ್ತದಿಂದ ಹೊರಟ ಪಾದಯಾತ್ರೆ ಡಿ. ದೇವರಾಜ ಅರಸು ರಸ್ತೆಯಲ್ಲಿ ಸಾಗಿ ವರ್ತಕರಿಂದ, ಸಾರ್ವಜನಿಕರಿಂದ ನಿಧಿ ಸಂಗ್ರಹಿಸಿತು.

ಜಿಲ್ಲಾ ಉಸ್ತುವಾರಿ ಸಚಿವರಾದ ಶೋಭಾ ಕರಂದ್ಲಾಜೆ ನೇತೃತ್ವದಲ್ಲಿ ಒಂದು ತಂಡ ರಸ್ತೆಯ ಎಡಭಾಗದಲ್ಲಿ ಹಾಗೂ ಸುತ್ತೂರು ಶ್ರೀಗಳ ನೇತೃತ್ವದಲ್ಲಿ ಮತ್ತೊಂದು ತಂಡ ಬಲಭಾಗದಲ್ಲಿನ ಅಂಗಡಿಗಳಿಂದ ದೇಣಿಗೆ ಸಂಗ್ರಹಿಸುತ್ತಾ ಸಾಗಿದರೆ, ರಸ್ತೆ ಮಧ್ಯದಲ್ಲಿ ಕಾರ್ಯಕರ್ತರು ಸಾರ್ವಜನಿಕರಿಂದ ವಂತಿಗೆ ಸಂಗ್ರಹಿಸಿದರು.

ಕೃಷ್ಣರಾಜ ವೃತ್ತದಲ್ಲಿ ಹಾಕಿದ ವೇದಿಕೆಯಲ್ಲಿ ಮಾತನಾಡಿದ ಪೂಜ್ಯರು ಸಾರ್ವಜನಿಕರು, ಉದ್ಯಮಿಗಳು ಉದಾರವಾಗಿ ದೇಣಿಗೆ ನೀಡುವಂತೆ ಮನವಿ ಮಾಡಿದರು.



ವೇದಿಕೆಯಲ್ಲೇ ಶ್ರೀ ಕಾಶಿ ವಿಶ್ವನಾಥ ಶೆಟ್ಟಿ 1 ಲಕ್ಷ ರೂ. ಭೋಜಯ್ಯ ಸಿಲ್ಕ್ಸ್ ಮಾಲೀಕ ಶ್ರೀ ಚಂದ್ರಶೇಖರ 1 ಲಕ್ಷ ರೂ., ಬ್ರಹ್ಮಕುಮಾರಿ ಆಶ್ರಮದ ಲಕ್ಷ್ಮೀಜಿ 10,000 ರೂ. ಚೆಕ್‌ಗಳನ್ನು ನೀಡಿದರು.

ಇದೇ ಸಂದರ್ಭದಲ್ಲಿ ಸಂಸದ ಶ್ರೀ ಹೆಚ್. ವಿಶ್ವನಾಥ್ ತಮ್ಮ ಸಂಸದರ ನಿಧಿಯಿಂದ 50 ಲಕ್ಷ ರೂ.ಗಳನ್ನು ಸಂತ್ರಸ್ತರ ಪರಿಹಾರ ನಿಧಿಗೆ ನೀಡುವುದಾಗಿ ಪ್ರಕಟಿಸಿದರು. ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಶ್ರೀ ಸಿ. ಬಸವೇಗೌಡ ಅವರು ಬ್ಯಾಂಕ್‌ನಿಂದ 25 ಲಕ್ಷ ರೂ.ಗಳನ್ನು ನೀಡುವುದಾಗಿ ಘೋಷಿಸಿದರು.

ಪಾಲಿಕೆಯಿಂದ 1 ಕೋಟಿ : ನಗರಪಾಲಿಕೆ ವತಿಯಿಂದ ಉತ್ತರ ಕರ್ನಾಟಕದಲ್ಲಿ ಎಂಸಿಎಫ್ ನಿರ್ಮಿಸುವ ಮನೆಗಳಿಗಾಗಿ 1 ಕೋಟಿ ರೂ.ಗಳನ್ನು ನೀಡುವುದಾಗಿ ಮೇಯರ್ ಶ್ರೀ ಪುರುಷೋತ್ತಮ್ ತಿಳಿಸಿದರು. ಪಾದಯಾತ್ರೆಯಲ್ಲಿ 1,50,43,785 ರೂ. ಸಂಗ್ರಹವಾಯಿತು. 4,25,30,000 ರೂ. ದೇಣಿಗೆ ನೀಡುವ ಭರವಸೆ ದೊರೆಯಿತು. ಮೈಸೂರು ರೇಸ್ ಕ್ಲಬ್ ಸಂತ್ರಸ್ತರ ನಿಧಿಗೆ 10 ಲಕ್ಷ ರೂಪಾಯಿ ನೀಡಿತು.

**ಹೊಸ ಮನೆಗಳು ಹೊಸ ಜೀವನಕ್ಕೆ ನಾಂದಿಯಾಗಲಿ**

3.11.2009 ರಂದು ಬಾಗಲಕೋಟೆ ತಾಲ್ಲೂಕಿನ ಇಂಗಳಗಿ ಗ್ರಾಮದಲ್ಲಿ ನೆರೆ ಸಂತ್ರಸ್ತರಿಗೆ ಮನೆಗಳನ್ನು ನಿರ್ಮಾಣ ಮಾಡುವ ಭೂಮಿ ಪೂಜೆಯ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯರು ಮಾತನಾಡುತ್ತಿದ್ದರು. ಸಂತ್ರಸ್ತರಿಗಾಗಿ ನಿರ್ಮಿಸಲಾಗುತ್ತಿರುವ ಹೊಸ ಮನೆಗಳು ಹೊಸ ಜೀವನಕ್ಕೆ ನಾಂದಿಯಾಗಲಿ. ಕೇವಲ ಹೊಸ ಮನೆಗಳಲ್ಲಿ ವಾಸಮಾಡುವುದಲ್ಲ. ಹೊಸ ಭಾವಗಳು, ಹೊಸ ಬದುಕಿನ ಕ್ರಮ ನಿರಂತರ ಶಾಂತಿ ಸಹಬಾಳ್ವೆ ನಿಮ್ಮ ಆದರ್ಶವಾಗಲಿ ಎಂದು ಪರಮಪೂಜ್ಯರು ತಿಳಿಸಿದರು.

ಬಿಜಾಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿ, ನಿರಾಶ್ರಿತರಿಗೆ ಸುಂದರ ಗ್ರಾಮವನ್ನು ಕಟ್ಟಿಕೊಡುವ ಸರ್ಕಾರದ ಕನಸು ಆದಷ್ಟು ಬೇಗ ನನಸಾಗಲಿ ಎಂದು ಆಶಿಸಿದರು.

ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಭೂಮಿ ಪೂಜೆಯನ್ನು ನೆರವೇರಿಸುತ್ತ ಮಾತನಾಡಿ ನಾನು ಇರಲಿ ಇಲ್ಲದಿರಲಿ ಸಂತ್ರಸ್ತರ ಪುನರ್ವಸತಿ ಕೆಲಸ ಮುಂದುವರೆಯಲಿ ಎಂದು ತಿಳಿಸಿದರು.

ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಅರವಿಂದ ಲಿಂಬಾವಳಿ ಶಾಸಕ ಶ್ರೀ ವೀರಣ್ಣ ಚರಂತಿಮಠ, ಸಚಿವರಾದ ಶ್ರೀ ಗೋವಿಂದ ಕಾರಜೋಳ, ಸಂಸದ ಶ್ರೀ ಪಿ.ಸಿ. ಗದ್ದಿಗೌಡ, ಎಂ.ಎಲ್.ಸಿ. ಡಾ. ಎಂ.ಪಿ. ನಾಡಗೌಡ, ಶ್ರೀ ಸಿದ್ದು ನ್ಯಾಮಗೌಡ, ಜಿ.ಪಂ. ಅಧ್ಯಕ್ಷೆ ಶ್ರೀಮತಿ ಕಸ್ತೂರಿ ಕಾತ್ರಾಳ, ತಾ.ಪಂ. ಅಧ್ಯಕ್ಷೆ ಶ್ರೀಮತಿ ಮಲ್ಲವ್ವ ಮುಂತಾದವರು ಭಾಗವಹಿಸಿದ್ದರು.

13.10.2009 ರಂದು ಪರಮಪೂಜ್ಯರ ನೇತೃತ್ವದಲ್ಲಿ ನೆರೆ ಪರಿಹಾರ ನಿಧಿಗಾಗಿ ಚಾಮರಾಜನಗರದಲ್ಲಿ ಪಾದಯಾತ್ರೆಯಲ್ಲಿ ಸುಮಾರು 13 ಲಕ್ಷ ರೂಪಾಯಿಗಳು ಸಂಗ್ರಹವಾಯಿತು. ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಭಿಕ್ಷುಕಿಯೋರ್ವಳು 10 ರೂಪಾಯಿಗಳನ್ನು ದೇಣಿಗೆ ನೀಡಿದ್ದು ಮನ ಕಲಕುವಂತಿತ್ತು. ಜಿಲ್ಲಾ ವಸ್ತುವಾರಿ ಸಚಿವ ಶ್ರೀ ಹರತಾಳ್ ಹಾಲಪ್ಪ ಸೇರಿದಂತೆ ಅನೇಕ ಗಣ್ಯರಿಂದ 41 ಲಕ್ಷ ರೂ.ಗಳ ಕೊಡುಗೆಯ ಆಶ್ವಾಸನೆ ದೊರೆಯಿತು.

8.10.2009 ರಂದು ಪರಮಪೂಜ್ಯರ ನೇತೃತ್ವದಲ್ಲಿ ನಂಜನಗೂಡು ಪಟ್ಟಣದಲ್ಲಿ ಪಾದಯಾತ್ರೆ ನಡೆಯಿತು. ಶಾಸಕರಾದ ಶ್ರೀ ಶ್ರೀನಿವಾಸ್ ಪ್ರಸಾದ್, ಬಿಜೆಪಿ ಅಧ್ಯಕ್ಷ ಶ್ರೀ ಎಸ್. ಮಹದೇವಯ್ಯ, ಜಾ. ದಳ ಜಿಲ್ಲಾ ಕಾರ್ಯದರ್ಶಿ ಕಳಲೆ ಶ್ರೀ ಕೇಶವಮೂರ್ತಿ, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಶ್ರೀ ಕುಂಬರಳ್ಳಿ ಸುಬ್ಬಣ್ಣ ಮತ್ತಿತರ ಮುಖಂಡರುಗಳನ್ನೊಳಗೊಂಡ ಪಾದಯಾತ್ರೆಗೆ ಪಟ್ಟಣದ ಜನತೆ ಒಂದು ಲಕ್ಷ ಎರಡು ಸಾವಿರ ರೂ. ನಗದು ಹಾಗೂ ಡಿ.ಡಿ.ಗಳು ಸೇರಿದಂತೆ ನಾಲ್ಕು ಲಕ್ಷದ ಎಂಬತ್ತೆರಡು ಸಾವಿರದ ನಾಲ್ಕುನೂರ ಒಂದು ರೂಪಾಯಿಗಳ ಉದಾರ ನೆರವು ನೀಡಿ ಸಂಕಷ್ಟ ಪರಿಹಾರಕ್ಕೆ ಸ್ಪಂದಿಸಿತು.

ಶ್ರೀಕಂಠೇಶ್ವರ ದೇವಸ್ಥಾನದಿಂದ ಪ್ರಾರಂಭವಾದ ನಿಧಿ ಸಂಗ್ರಹಣ ಪಾದಯಾತ್ರೆ ರಾಷ್ಟ್ರಪತಿ ರಸ್ತೆ, ಬೆಂಗಳೂರು ನೀಲಗಿರಿ ರಸ್ತೆ ಮುಖಾಂತರ ಎಂಜಿಎಸ್ ರಸ್ತೆಗೆ ಬಂದು ಮತ್ತೆ ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಹಿಂದಿರುಗಿತು. ಶ್ರೀಗಳ ನೇತೃತ್ವದ ಈ ಪಾದಯಾತ್ರೆಯಲ್ಲಿ ಎಲ್ಲಾ ಪಕ್ಷಗಳ ಮುಖಂಡರುಗಳು, ವಿವಿಧ ಸಂಘಟನೆಗಳ ನಾಯಕರುಗಳು ಹಾಗೂ ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಸ್ಪಂದಿಸಿದರು.

□

ನಚ್ಚುಗೆ ಮನ ನಿಮ್ಮಲ್ಲಿ, ಮಚ್ಚುಗೆ ಮನ ನಿಮ್ಮಲ್ಲಿ,
ಸಲುಗುಗೆ ಮನ ನಿಮ್ಮಲ್ಲಿ, ಸೋಲುಗೆ ಮನ ನಿಮ್ಮಲ್ಲಿ,
ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ,
ಕರಗುಗೆ ಮನ ನಿಮ್ಮಲ್ಲಿ, ಕೊರಗುಗೆ ಮನ ನಿಮ್ಮಲ್ಲಿ
ಎನ್ನ ಪಂಚೇಂದ್ರಿಯಗಳು ಕಬ್ಬುನ ಉಂಡ ನೀರಿನಂತೆ
ನಿಮ್ಮಲ್ಲಿ ಬೆರಸುಗೆ ಚನ್ನಮಲ್ಲಿಕಾರ್ಜುನಯ್ಯಾ

**- ಅಕ್ಕಮಹಾದೇವಿ**